www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಟೊಫೆಲ್ ಪರೀಕ್ಷಾ ವಿಧಗಳು ಹೀಗಿವೆ..



ಆಳ-ಅಗಲ
ಜಿಎಸ್‌ಟಿ: ಯುಟಿಲಿಟಿ ವಾಹನಗಳ ಮೇಲೆ ತೆರಿಗೆ ಏರಿಕೆ

ಕೇಂದ್ರದಿಂದ ₹80ರ ರಿಯಾಯಿತಿ ದರಕ್ಕೆ ಟೊಮೆಟೊ ಮಾರಾಟ 10

ಎನ್‌ಡಿಎ ಮೈತ್ರಿಕೂಟಕ್ಕೆ ರಾಜ್‌ಭರ್ 11

ಕ್ರಿಕೆಟ್: ಕೌಶಿಕ್, ಸಾಯಿಕಿಶೋರ್ ಮಿಂಚು

ದಕ್ಷಿಣ ವಲಯಕ್ಕೆ ದುಲೀಪ್ ಟ್ರೋಫಿ 11

ಐಟಿಆರ್: ಗಡುವು ವಿಸ್ತರಣೆ ಅನುಮಾನ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಲೆಕ್ಕಪತ್ರ (ಐಟಿಆರ್) ಸಲ್ಲಿಕೆಗೆ ಜುಲೈ 31ರ ಗಡುವನ್ನು ವಿಸ್ತರಣೆ ಮಾಡುವ ಕುರಿತು ಹಣಕಾಸು ಸಚಿವಾಲಯ ಆಲೋಚನೆ ನಡೆಸಿಲ್ಲ. ಹೀಗಾಗಿ ಆದಷ್ಟು ಬೇಗನೆ ಐಟಿಆರ್ ಸಲ್ಲಿಸಬೇಕು ಎಂದು ರೆವಿನ್ಯೂ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಅವರು ತೆರಿಗೆ ಪಾವತಿದಾರರಿಗೆ ಸಲಹೆ ನೀಡಿದ್ದಾರೆ.

ಐಟಿಆರ್ ಸಲ್ಲಿಕೆಯು ಕಳೆದ ವರ್ಷಕ್ಕಿಂತಲೂ ಹೆಚ್ಚಿಗೆ ಆಗುವ ವಿಶ್ವಾಸವಿದೆ ಎಂದು ಅವರು ಹೇಳಿದ್ದಾರೆ. 2022–23ನೇ ಅಂದಾಜು ವರ್ಷಕ್ಕೆ ಕಳೆದ 2022ರ ಜುಲೈ 31ರಂದು 5.83 ಕೋಟಿ ಐಟಿಆರ್ ಸಲ್ಲಿಕೆ ಆಗಿತ್ತು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ರಿಟರ್ನ್ಸ್ ಸಲ್ಲಿಕೆಯು ವೇಗ ಪಡೆದುಕೊಂಡಿದೆ. ಬಹಳಷ್ಟು ಜನರು ಮುಂಚಿತವಾಗಿಯೇ ರಿಟರ್ನ್ಸ್ ಸಲ್ಲಿಸಿದ್ದಾರೆ. ಗಡುವು ವಿಸ್ತರಣೆ ಸಾಧ್ಯತೆ ಕಡಿಮೆ ಇರುವುದರಿಂದ ಕೊನೆಯ ದಿನದವರೆಗೆ ಕಾಯದೇ ರಿಟರ್ನ್ಸ್ ಸಲ್ಲಿಸುವಂತೆ ಅವರು ಸಲಹೆ ನೀಡಿದ್ದಾರೆ.

ದಾಖಲೆ ಮಟ್ಟಕ್ಕೆ ಕ್ರೆಡಿಟ್ ಕಾರ್ಡ್ ಬಳಕೆ 10

ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳ ನಾಯಕರ ಸಭೆ ಇಂದಿನಿಂದ

ಬಿಜೆಪಿ ವಿರುದ್ಧ ವಿಪಕ್ಷ ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ನಡೆಸಲು ಕಾರ್ಯತಂತ್ರ ರೂಪಿಸುವ ದಿಸೆಯಲ್ಲಿ 20ಕ್ಕೂ ಹೆಚ್ಚು ಬಿಜೆಪಿ ವಿರೋಧಿ ಪಕ್ಷಗಳ ನಾಯಕರು ಸೋಮವಾರದಿಂದ (ಜುಲೈ 17) ಎರಡು ದಿನ ಬೆಂಗಳೂರಿನಲ್ಲಿ ಸಭೆ ನಡೆಸಲಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಬಿಜೆಪಿಗೆ ಸೈದ್ಧಾಂತಿಕವಾಗಿ ಹಾಗೂ ರಾಜಕೀಯವಾಗಿ ಸವಾಲೊಡ್ಡಲು ಸಮಾನ ವೇದಿಕೆ ಸೃಷ್ಟಿಸಿ, ಗಟ್ಟಿಗೊಳಿಸುವ ಆಶಯದಿಂದ ಭಿನ್ನಾಭಿಪ್ರಾಯಗಳನ್ನೆಲ್ಲ ಬದಿಗಿಟ್ಟು ಈ ನಾಯಕರು ಒಂದಾಗುತ್ತಿದ್ದಾರೆ.

ಈ ಎಲ್ಲ ನಾಯಕರು ಬಿಜೆಪಿ ವಿರೋಧಿ ಒಕ್ಕೂಟ ರಚಿಸುವ ಸಂಬಂಧ ಮಾರ್ಗಸೂಚಿ ರೂಪಿಸಲು ಬಿಹಾರ ರಾಜಧಾನಿ ಪಟ್ನಾದಲ್ಲಿ ಮೂರು ವಾರಗಳ ಹಿಂದೆ (ಜೂನ್ 23) ಮೊದಲ ಸಭೆ ನಡೆಸಿದ್ದರು. ಬಳಿಕ ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಸೇರಲು ನಿರ್ಧರಿಸಿದ್ದರು. ಆದರೆ, ಹವಾಮಾನ ವೈಪರೀತ್ಯ ಕಾರಣ ಆ ಸಭೆ ರದ್ದಾಗಿತ್ತು.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್ ಮತ್ತು ಕರ್ನಾಟಕದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ನಡೆಯಲಿರುವ ಸಭೆಗೆ ಸಿದ್ಧತೆ ಮಾಡಿಕೊಳ್ಳಲು ಭಾನುವಾರವೇ ನಗರಕ್ಕೆ ಬಂದಿದ್ದಾರೆ. ಸೋಮವಾರ ಬೆಳಿಗ್ಗೆ 11 ಗಂಟೆಗೆ ವೇಣುಗೋಪಾಲ್ ಸುದ್ದಿಗೋಷ್ಠಿ ನಡೆಸಲಿದ್ದು, ಎಷ್ಟು ವಿರೋಧ ಪಕ್ಷಗಳ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆಂಬ ಚಿತ್ರಣ ಸಿಗಲಿದೆ.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಸಭೆಯಲ್ಲಿ ಭಾಗವಹಿಸುತ್ತಿರುವುದು ವಿಶೇಷ. ಪಟ್ನಾ ಸಭೆಯಲ್ಲಿ ಅವರು ಭಾಗವಹಿಸಿರಲಿಲ್ಲ. ಪುತ್ರ ರಾಹುಲ್ ಗಾಂಧಿ ಜೊತೆ ಸೋಮವಾರ ರಾತ್ರಿಯೇ ಅವರು ನಗರಕ್ಕೆ ಬರಲಿದ್ದಾರೆ.

7ನೇ ಪುಟ ನೋಡಿ

ವಿರೋಧ ಪಕ್ಷಗಳ ಸಭೆಯ ಅಂಗವಾಗಿ ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್ ಬಳಿ ನಾಯಕರ ಫ್ಲೆಕ್ಸ್ ಹಾಕಲಾಗಿದೆ

ಏನೇನು ಚರ್ಚೆ ನಡೆಯಬಹುದು?

- 2024ರ ಲೋಕಸಭಾ ಚುನಾವಣೆಗೆ ಪ್ರಚಾರ ಮತ್ತು ಹಮ್ಮಿಕೊಳ್ಳಬೇಕಾದ ಆಂದೋಲನಗಳು
- ರಾಜ್ಯಗಳಲ್ಲಿ ಚುನಾವಣಾ ಮೈತ್ರಿ ಅಥವಾ ಹೊಂದಾಣಿಕೆ ಸಂಬಂಧಿಸಿದಂತೆ ಪ್ರಾಥಮಿಕ ಚರ್ಚೆ
- ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪ್ರಸ್ತಾಪಿಸಬೇಕಾದ ಪ್ರಮುಖ ವಿಷಯಗಳು
- ಮತ್ತೊಮ್ಮೆ ಎಲ್ಲಿ ಸೇರಬೇಕೆಂಬ ಬಗೆಗಿನ ನಿರ್ಧಾರ

ಶರದ್–ಅಜಿತ್ ಅಚ್ಚರಿ ಭೇಟಿ

ಕುತೂಹಲ ಕೆರಳಿಸಿದ ಎನ್‌ಸಿಪಿ ಬಿಕ್ಕಟ್ಟು: ಮತ್ತೆ ಬೆಸುಗೆ ಯತ್ನ?

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಸಿಪಿಯನ್ನು ವಿಭಜಿಸಿ ಶಿವಸೇನಾ–ಬಿಜೆಪಿ ಮೈತ್ರಿ ಸರ್ಕಾರದ ಜೊತೆ ಕೈಜೋಡಿಸಿದ್ದ ಅಜಿತ್ ಪವಾರ್ ಬಣವು ಪಕ್ಷದ ಮುಖ್ಯಸ್ಥ ಶರದ್ ಪವಾರ್ ಅವರನ್ನು ಭಾನುವಾರ ಭೇಟಿ ಮಾಡಿದ್ದು ಮಹಾರಾಷ್ಟ್ರ ರಾಜಕಾರಣದ ಕುರಿತು ಕುತೂಹಲ ಮೂಡಿಸಿದೆ.

25 ವಸಂತಗಳನ್ನು ಪೂರೈಸಿರುವ ಎನ್‌ಸಿಪಿಯ ರಾಜಕೀಯ ಇತಿಹಾಸದಲ್ಲಿ ತಲೆದೋರಿದ ಹೊಸ ಬಿಕ್ಕಟ್ಟಿನ ಬಗ್ಗೆ ವಿಷಾದ ವ್ಯಕ್ತಪಡಿಸಿದ ಅಜಿತ್ ಬಣವು ಮತ್ತೆ ಶರದ್ ಪವಾರ್ ಅವರ ಆಶೀರ್ವಾದ ಬೇಡಿದೆ. ಇದು ಎನ್‌ಸಿಪಿ ಜೊತೆಗೆ ಮತ್ತೆ ಬೆಸುಗೆ ಬಯಸಿ ಇಟ್ಟಿರುವ ಮೊದಲ ಹೆಜ್ಜೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ. ಆದರೆ, ಪವಾರ್ ಅವರು ಬಂಡಾಯ ನಾಯಕರ ಈ ಕಸರತ್ತಿಗೆ 'ಮೌನ'ವನ್ನಷ್ಟೇ ಉತ್ತರವಾಗಿ ನೀಡಿದ್ದಾರೆ.

ಶರದ್ ಪವಾರ್ ಅವರನ್ನು ಅಜಿತ್ ಸೇರಿದಂತೆ ಅವರ ಬಣದ ನಾಯಕರು ಬಹಿರಂಗವಾಗಿಯೇ ಈ ಹಿಂದೆ ಟೀಕಿಸಿದ್ದರು. ಶರದ್ ಭೇಟಿಗೂ ಮೊದಲು ಬಣವು ಯಾವುದೇ ಪೂರ್ವಾನುಮತಿ ಪಡೆದಿರಲಿಲ್ಲ. ಅವರು ವೈ.ಬಿ. ಚೌಹಾಣ್ ಸೆಂಟರ್‌ನಲ್ಲಿ ಇರುವ ಸುಳಿವು ಅರಿತು ದಿಢೀರ್ ಭೇಟಿ ಮಾಡಿದ್ದಾರೆ ಎನ್ನಲಾಗಿದೆ.

ಸಚಿವರಾದ ಅಜಿತ್ ಪವಾರ್, ಹಸನ್ ಮುಶ್ರಿಫ್, ಛಗನ್ ಭುಜಬುಲ್, ಅದಿತಿ ತತ್ಕರೆ, ದಿಲೀಪ್ ವಾಸ್ಲೆ ಪಟೇಲ್ ಈ ನಿಯೋಗದಲ್ಲಿದ್ದರು. ಶರದ್ ಬಣದಲ್ಲಿ ಗುರುತಿಸಿಕೊಂಡಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಜಯಂತ್ ಪಟೇಲ್, ಪಕ್ಷದ ಮುಖ್ಯ ಸಚೇತಕ ಜಿತೇಂದ್ರ ಅವ್ಹಾದ್ ಅವರು ಈ ಭೇಟಿಯ ಸುದ್ದಿ ತಿಳಿದು ಅಲ್ಲಿಗೆ ದೌಡಾಯಿಸಿದರು ಎಂದು ಮೂಲಗಳು ತಿಳಿಸಿವೆ.

ಎನ್‌ಸಿಪಿಯಿಂದ ವಿಭಜನೆಗೊಂಡ ಬಳಿಕ ಬಂಡಾಯ ನಾಯಕರು, ಶರದ್ ಜೊತೆಗೆ ನಡೆಸಿದ ಮೊದಲ ಔಪಚಾರಿಕ ಚರ್ಚೆ ಇದಾಗಿದೆ.

ಇನ್ನೊಂದು ಸುದ್ದಿ 11

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಮುಂಬೈನ ವೈ.ಬಿ. ಚೌಹಾಣ್ ಸೆಂಟರ್‌ನಲ್ಲಿ ಭಾನುವಾರ ದಿಢೀರ್ ಭೇಟಿ ಮಾಡಿದ ಅಜಿತ್ ಪವಾರ್, ಪ್ರಫುಲ್ ಪಟೇಲ್ ಸೇರಿದಂತೆ ಅವರ ಬಣದ ನಾಯಕರು –ಪಿಟಿಐ ಚಿತ್ರ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಗಳೂರು ಕೇಂದ್ರದ ಬೆನ್ನಲ್ಲೇ ಹೊಸದುರ್ಗದಲ್ಲೂ ಪ್ರಕರಣ ದಾಖಲು

ಎಂಎಸ್‌ಪಿ: ಖರೀದಿಯಲ್ಲಿ ಅಕ್ರಮ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರಾಗಿ ಖರೀದಿ ಪ್ರಕ್ರಿಯೆಯಲ್ಲಿ ದಾವಣಗೆರೆ ಜಿಲ್ಲೆಯ ಜಗಳೂರು ಮತ್ತು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಖರೀದಿ ಕೇಂದ್ರಗಳಲ್ಲಿ ರೈತರಲ್ಲದ ನೂರಾರು ಮಂದಿಯಿಂದ ರಾಗಿ ಖರೀದಿಸಿ, ಅಕ್ರಮ ಎಸಗಿರುವುದು ಪತ್ತೆಯಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಈ ರೀತಿಯ ಅಕ್ರಮ ವಿಸ್ತರಿಸಿರುವ ಶಂಕೆ ವ್ಯಕ್ತವಾಗಿದೆ.

ಎರಡೂ ಕಡೆ ಖರೀದಿ ಕೇಂದ್ರಗಳ ಅಧಿಕಾರಿಗಳು, ಸಿಬ್ಬಂದಿ ಮತ್ತು ರೈತರ ಹೆಸರಿನಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ ಸರ್ಕಾರಕ್ಕೆ ವಂಚಿಸಿರುವ ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ. ತುಮಕೂರು, ಹಾಸನ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಮೈಸೂರು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಎಂಎಸ್‌ಪಿ ಯೋಜನೆಯಡಿ ರಾಗಿ ಖರೀದಿ ನಡೆದಿದೆ.

7ನೇ ಪುಟ ನೋಡಿ

ಜಗಳೂರಿನಲ್ಲಿ ಪತ್ತೆಯಾದ ಅಕ್ರಮಗಳೇನು?

- 466 ರೈತರಿಗೆ ಅರ್ಹ ದಾಖಲೆಗಳಿಲ್ಲದಿದ್ದರೂ 'ಗ್ರೈನ್ ವೋಚರ್' ವಿತರಿಸಿ, ಹಣ ಪಾವತಿ
- 284 ರೈತರಿಗೆ ಅರ್ಹ ದಾಖಲೆಗಳಿಲ್ಲದಿದ್ದರೂ 'ಗ್ರೈನ್ ವೋಚರ್' ವಿತರಿಸಿ, ಹಣ ಪಾವತಿಗೆ ಪ್ರಯತ್ನ
- ಆಕ್ಷೇಪಣೆ ಸಲ್ಲಿಸಿರುವ 837 ರೈತರಲ್ಲಿ 79 ಮಂದಿಗೆ 'ಗ್ರೈನ್ ವೋಚರ್' ವಿತರಿಸಿದ್ದು, ಅವರಲ್ಲಿ 18 ರೈತರಿಗೆ ಅರ್ಹ ದಾಖಲೆಗಳಿಲ್ಲ
- 'ಗ್ರೈನ್ ವೋಚರ್' ನೀಡಿಲ್ಲ ಎಂಬ ಆಕ್ಷೇಪ ಎತ್ತಿರುವವರಲ್ಲಿ 489 ರೈತರು ಸರಿಯಾದ ದಾಖಲೆಗಳನ್ನು ಸಲ್ಲಿಸಿಲ್ಲ
- ಆಕ್ಷೇಪ ಎತ್ತಿರುವವರಲ್ಲಿ 269 ಮಂದಿಗೆ ಅರ್ಹ ದಾಖಲೆಗಳೇ ಇಲ್ಲ

ಮಾಲಿನ್ಯ ನಿಯಂತ್ರಣ ಮಂಡಳಿ–ಸರ್ಕಾರದ ಮಧ್ಯೆ ಸಂಘರ್ಷ

• ಆರ್. ಮಂಜುನಾಥ್

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಅಧ್ಯಕ್ಷ ಹಾಗೂ ಜುಲೈ 15ರಂದು ಹುದ್ದೆ ಕಳೆದುಕೊಂಡ ಸದಸ್ಯ ಕಾರ್ಯದರ್ಶಿಯ ವೈಯಕ್ತಿಕ ಪ್ರತಿಷ್ಠೆ ಮತ್ತು ಆಡಳಿತವನ್ನು ಕೈವಶ ಮಾಡಿಕೊಳ್ಳಲು ಶುರುವಾದ ಪೈಪೋಟಿ ಸಂಘರ್ಷಕ್ಕೆ ತಿರುಗಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ, ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿದ್ದವರನ್ನು ವರ್ಗಾವಣೆ ಮಾಡಲಾಯಿತು. ಐಎಫ್‌ಎಸ್ ಅಧಿಕಾರಿಯಲ್ಲದೇ ಇದ್ದರೂ ಮಂಡಳಿಯ ಮಾಹಿತಿ ತಂತ್ರಜ್ಞಾನ ವಿಭಾಗದ ಅಧಿಕಾರಿಯನ್ನು ಪ್ರಭಾರ ಹುದ್ದೆಯಲ್ಲಿರಿಸಲಾಯಿತು. ಇಬ್ಬರು ಅಧಿಕಾರಸ್ಥರ ಮಧ್ಯದ ಪೈಪೋಟಿ ಈಗ ಮಂಡಳಿಯ ಆಡಳಿತದ ಮೇಲೆ ಪರಿಣಾಮ ಬೀರಿದೆ ಎಂದು ಅಲ್ಲಿನ ಅಧಿಕಾರಿಗಳೇ ಹೇಳುತ್ತಿದ್ದಾರೆ.

5ನೇ ಪುಟ ನೋಡಿ

ಯಾವ ಕಂಪನಿಗಳಿಗೆ ಟೆಂಡರ್	ಮೊತ್ತ
ಸಾಯಿ ಅಡ್ವರ್ಟೈಸರ್ಸ್	₹3.40 ಕೋಟಿ
ಅಡಾನ್ ಮೊರಿಥಿಂಕಿಂಗ್ ಔಟ್‌ ಡೋರ್ ಅಡ್ವರ್ಟೈಸಿಂಗ್	₹7.53 ಕೋಟಿ
ಸೈನ್ ಪೋಸ್ಟ್ ಇಂಡಿಯಾ	₹5.43 ಕೋಟಿ
ಬೆನಕ ಆಟೊಮೇಷನ್ಸ್	₹1.47 ಕೋಟಿ
ಒಟ್ಟು	₹17.85 ಕೋಟಿ

ಭೋವಿ ಸಮುದಾಯಕ್ಕೆ ಸಮರ್ಪಣೆಗೊಂಡ ಪೀಠಾಧ್ಯಕ್ಷರಿಗೆ ಬೆಳ್ಳಿ ಮಹೋತ್ಸವದ ಸಂಭ್ರಮ

ಗುರುಸ್ಥಾನ ಅಲಂಕರಿಸಿದ ಇಮ್ಮಡಿಶ್ರೀ

**'ಆರೇನೆಂದರೂ ಓರಂತಿಪ್ಪುದೇ ಸಮತೆ;
ಆರು ಜರೆದರೂ ಅವರನ್ನ ಮನದ ಕಾಳಿಕೆಯ
ಕಳೆದರೆಂಬುದೇ ಸಮತೆ;
ಆರು ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ
ಹಗೆಗಳಂತೆ ಸಮತೆ,
ಇಂತಿದು ಗುರುಕಾರುಣ್ಯ.
ಮನವಚನಕಾಯದಲ್ಲಿ ಅಹಿತವಿಲ್ಲದೆ,
ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ, ನಿಮ್ಮವರ
ನೀನೆಂಬುದೇ ಸಮತೆ'**

ಹನ್ನೆರಡನೆಯ ಶತಮಾನದ ಶಿವಶರಣ ಸಿದ್ಧರಾಮೇಶ್ವರರು ಕಾಯಕ ಮಾಡುತ್ತಾ ಜನರನ್ನು ಒಗ್ಗೂಡಿಸಿಕೊಂಡು ಸಮುದಾಯದ ಬದುಕಿಗೆ ಹಗಲಿರುಳು ಶ್ರಮಿಸಿದರು. ಯಾವುದೇ ತಾರತಮ್ಯವಿಲ್ಲದೆ ದುರ್ಬಲರಿಗೂ ಸಮಾಜದಲ್ಲಿ ಸಮಾನ ಅವಕಾಶ, ಸೌಲಭ್ಯ ಮತ್ತು ಸೇವೆ ಲಭ್ಯವಾಗಬೇಕು ಎಂದು ಬರೆದ 'ಆರೇನೆಂದರೂ ಓರಂತಿಪ್ಪುದೇ ಸಮತೆ' ವಚನಕ್ಕೆ ಕಳಸವಿಟ್ಟಂತೆ 25 ವರ್ಷದಿಂದ ಭೋವಿ ಸಮುದಾಯದ ಏಳ್ಗೆಗೆ ಹಗಲಿರುಳು ಶ್ರಮಿಸುತ್ತಿದ್ದಾರೆ ಶ್ರೀ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠದ ಪೀಠಾಧ್ಯಕ್ಷ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ.

**'ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ
ಮೃಡನೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ನುಡಿಯ ಬ್ರಹ್ಮಂಗಳೆಂದಪ್ಪುದೇನೊ.
ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ
ಮೃಡನೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ನುಡಿಯ ಬ್ರಹ್ಮಂಗಳೆಂದಪ್ಪುದೇನೊ'**

ಅಸಂಘಟಿತವಾಗಿದ್ದ ಭೋವಿ ಸಮುದಾಯದ ಕೋಲ್ಮಿಂಚಾಗಿ ಕಾಣಿಸಿಕೊಂಡ 37 ವರ್ಷದ ಇಮ್ಮಡಿ ಸಿದ್ಧರಾಮೇಶ್ವರಸ್ವಾಮೀಜಿ, 'ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ..' ಎಂಬ ವಚನದಂತೆ ಮಾತಿನ ಜಾಣ್ಮೆ ಮೆರೆಯದೆ ತಾನಾಡುವ ಪ್ರತಿ ನುಡಿಗೆ ಕಂಕಣ ಬದ್ಧವಾಗಿ ಹಿಡಿದ ಕೆಲಸವನ್ನು ಪೂರ್ಣಗೊಳಿಸುವವರೆಗೂ ವಿಶ್ರಮಿಸಿದೆ ಸಮಾಜಕ್ಕೆ ಒಳಿತನ್ನು ಮಾಡುತ್ತಿದ್ದಾರೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಆಗಿ ಜಗತ್ತಿಗೆ ತಿಳಿಯುವ ಮುನ್ನ ಪೂರ್ವಾಶ್ರಮದಲ್ಲಿ ನಿಜಗುಣೇಶ್ವರಸ್ವಾಮಿ ಎಂಬ ಹೆಸರಲ್ಲಿ ಬಾಲ್ಯವನ್ನು ಕಳೆದರು. 1986 ಜುಲೈ 18ರಂದು ದಾವಣಗೆರೆಯಲ್ಲಿ ಜನಿಸಿದ ಸ್ವಾಮೀಜಿ ಕುಟುಂಬದಲ್ಲಿ ಮುದ್ದು ಮಗನಾಗಿ ಬೆಳೆದವರು. ಮನೆಯಲ್ಲಿ ಅಧ್ಯಾತ್ಮ ವಾತಾವರಣವಿದ್ದ ಕಾರಣಕ್ಕೆ 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಬಾಲ್ಯದಲ್ಲೇ ಪೂಜೆ, ಪಾಠ, ಪ್ರವಚನಗಳು ಕರಗತವಾಗಿದ್ದವು.

ನಿತ್ಯದ ಆಟೋಪಚಾರ ಮುಗಿದ ಬಳಿಕ ರಾಮಾಯಣ, ಮಹಾಭಾರತದ ಕತೆ ಕೇಳುತ್ತಾ ನಿದ್ದೆಗೆ ಜಾರುತ್ತಿದ್ದರು. ದಾವಣಗೆರೆಯಲ್ಲಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರಿಗೆ ಪ್ರಸಾದ ನೀಡಲು ಮಠಕ್ಕೆ ಹೋಗುತ್ತಿದ್ದ ಇವರಿಗೆ ಗುರುಗಳು ನಿಜಗುಣ ಶಿವಯೋಗಿ, ವಿವೇಕಾನಂದ, ಸಿದ್ಧರಾಮೇಶ್ವರ ಜೀವನ ಚರಿತೆ, ಜ್ಞಾನ ಮಾರ್ಗದ 'ಜ್ಞಾನ ಸಿಂಧು' ಕೃತಿಗಳನ್ನು ಓದಲು ನೀಡುತ್ತಿದ್ದರು.

ಕಠಿಣ ಭಾಷೆಯನ್ನು ಅರ್ಥ ಮಾಡಿಕೊಂಡು ಗುರುಗಳು ಕೇಳುತ್ತಿದ್ದ ಪ್ರಶ್ನೆಗಳಿಗೆ ನಿರರ್ಗಳವಾಗಿ ಉತ್ತರ ನೀಡುತ್ತಿದ್ದರು. ಬಾಲಕನ ನಡೆ–ನುಡಿ ಗಮನಿಸಿದ ಸಿದ್ಧರಾಮೇಶ್ವರ ಸ್ವಾಮೀಜಿ, ಸಮುದಾಯವನ್ನು ಮುನ್ನಡೆಸುವ ಶಕ್ತಿ ಬಾಲಕನಲ್ಲಿದೆ ಎಂಬುದನ್ನು ಅರಿತರು. ತಮ್ಮ ಮನದ ಇಂಗಿತವನ್ನು 'ನಿಜಗುಣೇಶ್ವರಸ್ವಾಮಿ' ಅವರ ತಂದೆಯ ಬಳಿ ಪ್ರಸ್ತಾಪಿಸುತ್ತಾರೆ.

ಒಂದಿಷ್ಟು ಚರ್ಚೆಗಳು ನಡೆದ ಬಳಿಕ 1998ರಲ್ಲಿ ದಾವಣಗೆರೆಯ ಸಿದ್ಧರಾಮೇಶ್ವರ ಸ್ವಾಮೀಜಿ ಅವರಿಂದ ಲಿಂಗದೀಕ್ಷೆ (ಲಾಂಛನ ದೀಕ್ಷೆ) ಪಡೆದ ಗುರುಗಳು ಅತಿ ಕಿರಿಯ ವಯಸ್ಸಿನಲ್ಲಿ ಸಮಾಜ ಸೇವೆಗೆ ಸಮರ್ಪಣೆ ಮಾಡಿಕೊಂಡರು. ಈ ಸುಸಂದರ್ಭಕ್ಕೆ ಈಗ ಬೆಳ್ಳಿ ಮಹೋತ್ಸವದ (25 ವರ್ಷ) ಸಂಭ್ರಮ.

1999ರಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರ ಅಮೃತ ಹಸ್ತದಿಂದ ಸನ್ಯಾಸ ದೀಕ್ಷೆ ಪಡೆದು ಬಸವತತ್ವ ಮೈಗೂಡಿಸಿಕೊಂಡರು. ಬಸವಾದಿ ಶರಣರ ದಾರಿಯಲ್ಲಿ ಸಾಗುತ್ತ ಮೌಢ್ಯ, ಕಂದಾಚಾರ ಹೋಗಲಾಡಿಸಿ ಭೋವಿ ಸಮುದಾಯಕ್ಕೆ ದೀಪವಾದರು. ವಲಸೆ ಪ್ರವೃತ್ತಿ ಹೊಂದಿದ ಜನರ ಬದುಕು ಹಸನಗೊಳಿಸುವ ಪಣತೊಟ್ಟರು.

ಅಧ್ಯಾತ್ಮದ ದೀವಿಗೆ ಹಿಡಿದು ಮುಂದಡಿ ಇಡುತ್ತಿರುವ ಪ್ರತಿ ಹೆಜ್ಜೆ ಸಮುದಾಯದ ಏಳಿಗೆಯ ಮೆಟ್ಟಿಲಾಗುತ್ತಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಗುರುಗಳು ಅವಿರತವಾಗಿ ಶ್ರಮಿಸುತ್ತಿರುವ ರೀತಿಗೆ ಸಮುದಾಯ ಋಣಿಯಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆರಳಿಗೆ ಬಿದ್ದ ಉಳಿ ಪೆಟ್ಟು

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಪೂರ್ವಾಶ್ರಮದಲ್ಲಿ ಸಾಮಾನ್ಯರಂತೆ ಬಾಲ್ಯ ಕಳೆದವರು. ಸಾಗರದಂತೆ ತಂದೆ, ತಾಯಿ, ಅಕ್ಕನ ಪ್ರೀತಿ ಇವರಿಗಿತ್ತು. ಕಲ್ಲಿನ ಶಿಲ್ಪ ಕಲೆಯ ವೃತ್ತಿ ಮಾಡುತ್ತಿದ್ದ ತಂದೆ ಕಲ್ಲಿಗೆ ಉಳಿಯಿಟ್ಟು ಸುತ್ತಿಗೆಯಿಂದ ಹೊಡೆಯುವುದನ್ನು ಗಮನಿಸಿದ ಇವರು ತಾವು ತಂದೆಯಂತೆ ಶಿಲ್ಪಿಯಾಗುವ ಆಸಕ್ತಿ ಬೆಳೆಸಿಕೊಂಡವರು.

ಹೀಗೆ ಉಳಿ ಹಿಡಿದಿದ್ದ ಕೈ ಬೆರಳಿಗೆ ಸುತ್ತಿಗೆಯ ಪೆಟ್ಟು ಬಿದ್ದಿತ್ತು. ಮಗನಿಗೆ ಆಗಿದ್ದ ಗಾಯ ಕಂಡ ತಾಯಿ ಶಿಕ್ಷಣದತ್ತ ಗಮನ ಹರಿಸುವಂತೆ ಸೂಚನೆ ನೀಡಿದರು. ಶಿಲೆಯನ್ನು ಕಟೆದು ಮೂರ್ತರೂಪ ನೀಡುವ ಕಲೆಯನ್ನು ಸಿದ್ಧಿಸಿಕೊಳ್ಳುವ ಅಪೇಕ್ಷೆ ಅಲ್ಲಿಯೇ ಉಳಿಯಿತು.

ಬೆಳ್ಳಿ ಮಹೋತ್ಸವದ 25 ಮೈಲುಗಲ್ಲು

ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ರಕ್ತದಾನ ಶಿಬಿರ. ಅನುಯಾಯಿಗಳಿಂದ ರಕ್ತದಾನ ಮೈಲಿಗಲ್ಲು
ರಾಷ್ಟ್ರೀಯ ಭೋವಿ, ವಡ್ಡರ ಜನೋತ್ಸವ
ಲಾಂಛನ ದೀಕ್ಷೆ 1999
ದಾವಣಗೆರೆ ಸಿದ್ಧರಾಮೇಶ್ವರ ರಥೋತ್ಸವವನ್ನು ಧಾರ್ಮಿಕ ಸಾಂಸ್ಕೃತಿಕ ಕೇಂದ್ರವಾಗಿ ಪರಿವರ್ತನೆ
ಮಧ್ಯ ಕರ್ನಾಟಕದಲ್ಲಿ ಗುರುಪೀಠ ಸ್ಥಾಪನೆ
ಬಾಗಲಕೋಟೆಯಲ್ಲಿ ಪಟ್ಟಾಧಿಕಾರ
ಹಳ್ಳಿ, ಹಟ್ಟಿ, ಗ್ರಾಮ, ಕಾಲೊನಿಗಳಲ್ಲಿ ಸಿದ್ದರಾಮೇಶ್ವರ ಸಂದೇಶ ಯಾತ್ರೆ
ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ. ಹಳ್ಳಿಗಳಲ್ಲಿ ಪ್ರಾಣಿ ಬಲಿ ನಿಷೇಧ ಕುರಿತ ಜಾಗೃತಿ
ಏಳು ಜಿಲ್ಲೆಗಳಲ್ಲಿ ಮಠಕ್ಕೆ ಆಸ್ತಿ ಖರೀದಿ
ಉಚಿತ ಪ್ರಸಾದ, ವಸತಿ, ಶಿಕ್ಷಣ ಆರಂಭ
ರಾಜ್ಯ ಮಟ್ಟದ ಸಮಾವೇಶಗಳು
ಶ್ರೀ ಸಿದ್ಧರಾಮೇಶ್ವರ ಜಯಂತಿಗೆ ಹೊಸ ಆಯಾಮ
ಗದಗ, ಶಿವಮೊಗ್ಗ, ದಾವಣಗೆರೆಯಲ್ಲಿ ಕಟ್ಟಡ ನಿರ್ಮಾಣ
ರಾಷ್ಟ್ರ ಮಟ್ಟದ ಸಂಘಟನೆಗೆ ಚಾಲನೆ
ಭೋವಿ ಅಭಿವೃದ್ಧಿ ನಿಗಮ ಸ್ಥಾಪನೆಗೆ ಪರಿಣಾಮಕಾರಿ ದಿಕ್ಸೂಚಿ
ಪ್ರವಾಹ ಪ್ರದೇಶದ ಸಂತ್ರಸ್ತರಿಗೆ ಆಸರೆ
ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಸಹಾಯ
ಜನಾಂಗದ ಅಧ್ಯಯನ ಪ್ರವಾಸ
ಮೀಸಲಾತಿ ಹೋರಾಟ
ಕೋವಿಡ್ ಸಂದರ್ಭದಲ್ಲಿ ಆಹಾರ ಧಾನ್ಯದ ಕಿಟ್ ವಿತರಣೆ
ಬಾಗಲಕೋಟೆ ಮತ್ತು ಚಿತ್ರದುರ್ಗದಲ್ಲಿ ಮಠದ ಕಟ್ಟಡ ನಿರ್ಮಾಣ
ಯುವಕರಿಗೆ ಸಮರ್ಥ ನಾಯಕತ್ವ ಹೊಂದಲು ಕಾರ್ಯಾಗಾರ
ಜಾತಿ ಕಲಹಗಳ ಶಮನ, ಸೌಹಾರ್ದ ಗ್ರಾಮಗಳ ನಿರ್ಮಾಣ
ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಆಧ್ಯಾತ್ಮಿಕ ಪ್ರಗತಿಗೆ ನಿರಂತರ ಸೇವೆ. ಮಕ್ಕಳಿಗೆ ವೈಚಾರಿಕ ಪ್ರವಚನ ಸರಣಿ
ಅನಾಥ, ಅಬಲೆಯರಿಗೆ ಆಶ್ರಯ

ಪೂರ್ವಾಶ್ರಮದಲ್ಲಿ ನಿಜಗುಣೇಶ್ವರಸ್ವಾಮಿ
ಭರತನಾಟ್ಯದಲ್ಲಿ ನಿಜಗುಣೇಶ್ವರಸ್ವಾಮಿ
ಬಾಲ್ಯದಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

ವಿದ್ಯಾರ್ಥಿ ವೇತನದಲ್ಲೇ ಶಿಕ್ಷಣ

ಬಾಲ್ಯದಿಂದಲೂ ಓದಿನಲ್ಲಿ ಅಗ್ರಸ್ಥಾನದಲ್ಲಿದ್ದ ನಿಜಗುಣೇಶ್ವರಸ್ವಾಮಿ 'ಮೆರಿಟ್' ವಿದ್ಯಾರ್ಥಿ ವೇತನದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದರು. ದಾವಣಗೆರೆ ಹಾಗೂ ಚಿತ್ರದುರ್ಗದಲ್ಲಿ ಪ್ರಾಥಮಿಕ, ಪ್ರೌಢಶಾಲಾ, ಪದವಿ ಶಿಕ್ಷಣ ಪೂರ್ಣಗೊಳಿಸಿದರು.

ಕಲಾ ವಿಭಾಗದಲ್ಲಿ ಪದವಿಪೂರ್ವ ಶಿಕ್ಷಣ ಮುಗಿಸಿ, ಐಚ್ಛಿಕ ಕನ್ನಡ, ರಾಜ್ಯಶಾಸ್ತ್ರ, ಇತಿಹಾಸದಲ್ಲಿ ಪದವಿ ಪೂರ್ಣಗೊಳಿಸಿದ್ದಾರೆ. ಬಾಲ್ಯದಿಂದಲೇ ಕನ್ನಡದಲ್ಲಿ ಪ್ರಬುದ್ಧತೆ ಸಾಧಿಸಿದ್ದ ಇವರಿಗೆ ಕೇಶಿರಾಜನ ಶಬ್ದಮಣಿದರ್ಪಣದ ಸೂತ್ರಗಳು ಇಂದಿಗೂ ಸುಲಲಿತ.

ಭರತನಾಟ್ಯದಲ್ಲಿ ಪರಿಣತಿ

ಅಧ್ಯಾತ್ಮದಲ್ಲಿ ತೀವ್ರ ಒಲವು ಹೊಂದಿದ್ದ ನಿಜಗುಣೇಶ್ವರಸ್ವಾಮಿ ಅವರಿಗೆ ಲಲಿತ ಕಲೆಗಳೆಂದರೆ ಅಚ್ಚುಮೆಚ್ಚು. ತಂದೆ ಶಿಲ್ಪ ಕಲೆ, ಭರತನಾಟ್ಯದಲ್ಲಿ ಪರಿಣತಿ ಸಾಧಿಸಿದ್ದ ಕಾರಣ ಕಲೆ ರಕ್ತಗತವಾಗಿ ಬಂದಿದೆ. ಶಾಲೆಗಳಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸದಾ ಒಂದು ಹೆಜ್ಜೆ ಮುಂದೆ ಇರುತ್ತಿದ್ದರು.

ಪ್ರಬಂಧ, ಆಶುಭಾಷಣ, ಚರ್ಚಾಸ್ಪರ್ಧೆ, ಚಿತ್ರಕಲೆ, ಮಣ್ಣಿನ ಕಲಾಕೃತಿ ರಚನೆ, ಭರತನಾಟ್ಯ, ಹಾಡು, ನೃತ್ಯ ಸ್ಪರ್ಧೆಯಲ್ಲಿ ಸದಾ ಪ್ರಥಮ ಸ್ಥಾನ ಖಚಿತವಾಗಿತ್ತು. ಕಲೆಯಲ್ಲಿಯೂ ಇವರು ಅಧ್ಯಾತ್ಮವನ್ನೇ ಧ್ಯಾನ ಮಾಡುತ್ತಿದ್ದರು. ನಾಮಬಲಕ್ಕೆ ತಕ್ಕಂತೆ ವ್ಯಕ್ತಿತ್ವ ರೂಪುಗೊಂಡಿದ್ದನ್ನು ಕಂಡು ಶಿಕ್ಷಕರು ಚಕಿತರಾಗಿದ್ದರು.

'ಮನೆ ಮಗನಲ್ಲ ಸಮಾಜದ ಮಗ'

ದಾವಣಗೆರೆಯಲ್ಲಿ ಲಾಂಛನ ದೀಕ್ಷೆ ಪಡೆದ ಬಳಿಕ ಭಕ್ತರೊಬ್ಬರು ಸ್ವಾಮೀಜಿ ಅವರನ್ನು ಭೇಟಿಯಾಗಿದ್ದರು. ಅವರ ಮಾತು ಸ್ವಾಮೀಜಿಯನ್ನು ಪ್ರಭಾವಿಸಿತು. 'ನೀನು ಮನೆ ಮಗನಲ್ಲ, ಸಮಾಜದ ಮಗ' ಎಂಬ ಕಿವಿಮಾತು ಸ್ಮೃತಿಪಟಲದಲ್ಲಿ ಅಚ್ಚೊತ್ತಿದೆ. ನಿತ್ಯ ಮುಂಜಾನೆ ಈ ಮಾತನ್ನು ಸ್ವಾಮೀಜಿ ನೆನಪಿಸಿಕೊಳ್ಳುತ್ತಾರೆ.

'ಸಾಮಾನ್ಯ ಭಕ್ತನ ಮಾತು ಬದುಕಿಗೆ ಭವ್ಯ ತಿರುವು ನೀಡಿತು. ಆ ಪದದ ಹಿಂದಿನ ಅಗಾಧತೆ ಊಹಿಸಲು ಅಸಾಧ್ಯ. ಇಡೀ ಸಮುದಾಯ ನನ್ನ ಮೇಲಿಟ್ಟ ನಿರೀಕ್ಷೆ ಎಷ್ಟಿದೆ ಎಂಬುದು ಅರ್ಥವಾಯಿತು' ಎಂದು ಸ್ಮರಿಸಿದರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ.

ಸಿದ್ಧ ರಾಮೇಶ್ವರ ರಥೋತ್ಸವ ದಲ್ಲಿ ಇಮ್ಮಡಿಶ್ರೀ ಜೊತೆ ಮುಖಂಡರಾದ ಹೆಚ್.ಆನಂದಪ್ಪ

ಧಾರ್ಮಿಕ ಔನ್ನತ್ಯದಲ್ಲಿ ಭೋವಿ ಗುರುಪೀಠ

ಗುರುಪರಂಪರೆ, ಮಠದ ಸಂಸ್ಕಾರಗಳಿಂದ ದೂರ ಉಳಿದಿದ್ದ ಭೋವಿ ಸಮುದಾಯವನ್ನು ಧಾರ್ಮಿಕ ತಳಹದಿಯ ಮೇಲೆ ಕಟ್ಟುವ ಸವಾಲು ಚಿಕ್ಕ ವಯಸ್ಸಿಗೆ ಸ್ವಾಮೀಜಿ ಹೆಗಲ ಮೇಲೆ ಬಿದ್ದಿತು. ಇಳಕಲ್‌ನ ಯಂಕಪ್ಪ ಬಂಡಿ ಅವರು ಸಮುದಾಯಕ್ಕೆ ಗುರುಪೀಠ ಸ್ಥಾಪಿಸುವ ಪ್ರಸ್ತಾವ ಮುಂದಿಟ್ಟರು. ಇದಕ್ಕೆ ಸ್ಪಷ್ಟ ರೂಪ ನೀಡಿದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಗುರುಪೀಠ ಔನ್ನತ್ಯ ತಲುಪುವವರೆಗೆ ವಿರಮಿಸಿಲ್ಲ.

ಗುರುಕುಲದಿಂದ ಸ್ವತಂತ್ರರಾಗಿ ಬಂದ ಸ್ವಾಮೀಜಿ 2009ರಲ್ಲಿ ಚಿತ್ರದುರ್ಗದ ಹೊರವಲಯದ ಗುಡಿಸಲಲ್ಲಿ ಮಠ ಆರಂಭಿಸಿದರು. ಆಗ ಸ್ವಾಮೀಜಿ ಅವರಿಗೆ ಹಾವು, ಚೇಳುಗಳೇ ಸ್ನೇಹಿತರಂತಿದ್ದವು. ಆರಂಭಿಕ ವರ್ಷಗಳಲ್ಲಿ ಗುಡಿಸಲು ನಿವಾಸಿಗಳಾಗಿ ಮಠದ ಪರಂಪರೆಯನ್ನು ಶ್ರೀಮಂತಗೊಳಿಸಲು ಮುಂದಡಿ ಇಟ್ಟರು. ಚಿತ್ರದುರ್ಗ ಗುರುಪೀಠಕ್ಕೆ ಮೊದಲ, ದಾವಣಗೆರೆ ಮಠಕ್ಕೆ ಎರಡನೇ ಹಾಗೂ ಬಾಗಲಕೋಟೆಯ ಮೂಲ ಗುರುಪೀಠಕ್ಕೆ 3ನೇಯ ಪೀಠಾಧಿಪತಿಳಾಗಿ ಸಮುದಾಯ ಸಂಘಟಿಸಿದರು.

ಚಿತ್ರದುರ್ಗದಲ್ಲಿ 2009ರಂದು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ರಾಜ್ಯ ಮಟ್ಟದ ಸಮಾವೇಶ ಆಯೋಜಿಸಿ ಸಮಾಜ ಸಂಘಟನೆಯ ಸಾಮರ್ಥ್ಯ ತೋರಿಸಿದರು. ನೂರಾರು ಮಠಾಧೀಶರ ನೇತೃತ್ವದಲ್ಲಿ ಬಾಗಲಕೋಟೆ ಮೂಲ ಗುರುಪೀಠಕ್ಕೆ 2010ರಲ್ಲಿ ಪಟ್ಟಾಧಿಕಾರ ನೆರವೇರಿತು. ಶಿವಮೊಗ್ಗ, ಗದಗ ಜಿಲ್ಲೆಗೂ ಶಾಖಾ ಮಠ ವಿಸ್ತರಿಸಿವೆ. ರಾಜ್ಯದ ಎಲ್ಲ ಜಿಲ್ಲೆಯಲ್ಲಿ ಶಾಖಾ ಮಠ ತೆರೆಯುವ ಅಪೇಕ್ಷೆ ಇಮ್ಮಡಿಶ್ರೀ ಅವರಿಗೆ ಇದೆ.

ಭೋವಿ ಸಮುದಾಯ ಕಾಯಕ ಹಾಗೂ ಶ್ರಮಿಕ ವರ್ಗ. ಶಿಕ್ಷಣದ ಕೊರತೆಯಿಂದ ಮೌಢ್ಯ, ಕಂದಾಚಾರ ಹಾಸುಹೊಕ್ಕಾಗಿದೆ. ಮಠವನ್ನು ಧಾರ್ಮಿಕ, ವೈಚಾರಿಕ ಕೇಂದ್ರವಾಗಿ ರೂಪಿಸಬೇಕು ಎಂಬುದು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಗುರಿ. ಸಿದ್ಧರಾಮೇಶ್ವರರ ವಚನಗಳನ್ನು ಅರ್ಥೈಸಿ ಪ್ರತಿ ಮನೆಗೆ ತಲುಪಿಸುವ ಉದ್ದೇಶವನ್ನು ಇಮ್ಮಡಿಶ್ರೀ ಹೊಂದಿದ್ದಾರೆ.

ಬಡವರೇ ಹೆಚ್ಚಾಗಿರುವ ಸಮುದಾಯದಲ್ಲಿ ದಾನಿಗಳ ಸಂಖ್ಯೆ ವಿರಳ. ಮಠವನ್ನು ಉನ್ನತ ಮಟ್ಟಕ್ಕೆ ಏರಿಸಲು ಪಣತೊಟ್ಟಿರುವ ಗುರುಗಳು ಸರ್ವ ರೀತಿಯಲ್ಲಿ ಪ್ರಯತ್ನಿಸಿ ಮಠದ ಹೆಸರಿನಲ್ಲಿ ₹ 1 ಕೋಟಿಯನ್ನು ಠೇವಣಿ ಇಟ್ಟಿದ್ದಾರೆ. ಈ ಠೇವಣಿ ಮೊತ್ತವನ್ನು ₹ 100 ಕೋಟಿಗೆ ಹೆಚ್ಚಿಸುವ ಗುರಿ ಸ್ವಾಮೀಜಿ ಎದುರಿಗೆ ಇದೆ. ಈ ಠೇವಣಿಯಲ್ಲಿಯೇ ಮಠ ಮುನ್ನಡೆಯಬೇಕು ಎಂಬುದು ಸ್ವಾಮೀಜಿ ಕಾಳಜಿ.

ಮಕ್ಕಳ ಶೈಕ್ಷಣಿಕ ದತ್ತು

ಭೋವಿ ಗುರುಪೀಠವು ಸಮುದಾಯದ ಮಕ್ಕಳಿಗೆ ಆಶ್ರಯ ಕಲ್ಪಿಸಿದೆ. ಉಚಿತ ಊಟ, ವಾಸ್ತವ್ಯ ಹಾಗೂ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ಕರೆತರುವ ಮಹತ್ತರವಾದ ಜವಾಬ್ದಾರಿ ನಿಭಾಯಿಸುತ್ತಿದೆ.

ಅನಾಥರು ಹಾಗೂ ಏಕಪೋಷಕ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಪದವಿ, ಎಂಜಿನಿಯರಿಂಗ್‌ವರೆಗಿನ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಆಟೊ ಚಾಲಕ ಹಾಗೂ ಕಲ್ಲು ಒಡೆಯುವ ಕಾಯಕದಲ್ಲಿರುವ ಇಬ್ಬರು ಭಕ್ತರ ಮಕ್ಕಳ ವೈದ್ಯಕೀಯ ಶಿಕ್ಷಣದ ವೆಚ್ಚವನ್ನು ಮಠ ಭರಿಸುತ್ತಿದೆ. ಈ ಸೇವಾ ಕಾರ್ಯಕ್ಕೆ ಭಕ್ತರು ಬೆನ್ನೆಲುಬಾಗಿ ನಿಂತಿದ್ದಾರೆ. ಮಠದ ನೆರವಿನಿಂದ ವ್ಯಾಸಂಗ ಮಾಡಿ ಉದ್ಯೋಗದಲ್ಲಿರುವವರು ಕಾಣಿಕೆ, ದೇಣಿಗೆ ರೂಪದಲ್ಲಿ ಕೃತಜ್ಞತೆ ಸಲ್ಲಿಸುತ್ತಿದ್ದಾರೆ.

ಉದ್ಯೋಗ ಅರಸಿ ಗುಳೆ ಹೋಗುವ ಭೋವಿ ಜನಾಂಗ ಶಿಕ್ಷಣದತ್ತ ಗಮನಹರಿಸಿದ್ದು ಕಡಿಮೆ. ಸಮುದಾಯದ ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡಲು ಸ್ವಾಮೀಜಿ ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಿದ್ದಾರೆ. ಚಿಕ್ಕದಾಗಿ ಆರಂಭವಾದ ಶಿಕ್ಷಣ ಸಂಸ್ಥೆ, ದಶಕದಲ್ಲಿ ದೊಡ್ಡದಾಗಿ ಬೆಳೆದಿದೆ. ಎಲ್‌ಕೆಜಿಯಿಂದ ಪದವಿ ಪೂರ್ವ ಕಾಲೇಜುವರೆಗಿನ ಶಿಕ್ಷಣ ಸಂಸ್ಥೆ ಚಿತ್ರದುರ್ಗದಲ್ಲಿದೆ. ಸಮುದಾಯದ ಮಕ್ಕಳಿಗೆ ಸ್ನಾತಕೋತ್ತರ ಹಂತದವರೆಗೆ ಉಚಿತ ಶಿಕ್ಷಣ ನೀಡಬೇಕು ಎಂಬುದು ಸ್ವಾಮೀಜಿ ಬಯಕೆ.

ಸಮುದಾಯ ಸಂಘಟಿಸಿದ ಸ್ವಾಮೀಜಿ

ಅಲೆಮಾರಿ ಹಾಗೂ ಅರೆ ಅಲೆಮಾರಿ ಲಕ್ಷಣಗಳನ್ನು ಹೊಂದಿದ ಭೋವಿ ಸಮುದಾಯವನ್ನು ಕಟ್ಟುವಲ್ಲಿ ಸ್ವಾಮೀಜಿ ಅವರ ಶ್ರಮ ಅಪಾರವಾದುದು. ಕರ್ನಾಟಕದ ಮೂಲೆ- ಮೂಲೆಯ ಭೋವಿ ಕಾಲೊನಿ, ಹಟ್ಟಿಗಳನ್ನು ಸ್ವಾಮೀಜಿ ಸುತ್ತಿದ್ದಾರೆ. ಅವರ ಪರಿಶ್ರಮದ ಫಲವಾಗಿ ಹಲವು ಗ್ರಾಮಗಳು ವ್ಯಸನಮುಕ್ತವಾಗಿವೆ. ಪ್ರಾಣಿ ಬಲಿ ನಿಷೇಧಕ್ಕೆ ವಾಗ್ದಾನ ನೀಡಿವೆ.

ಪೀಠಾಧ್ಯಕ್ಷರಾದ ಆರಂಭದ ದಿನಗಳಲ್ಲಿ ಸ್ವಾಮೀಜಿ ಭೋವಿ ಕಾಲೊನಿ, ಹಟ್ಟಿಗೆ ಭೇಟಿ ನೀಡಿದರೆ ಯಾರೊಬ್ಬರೂ ಹತ್ತಿರ ಸುಳಿಯುತ್ತಿರಲಿಲ್ಲ. ನಿತ್ಯ ಬೆಳಿಗ್ಗೆ ಉಳಿ, ಕರಣಿ, ಸುತ್ತಿಗೆಯಂತಹ ಸಲಕರಣೆ ಹಿಡಿದು ಕೆಲಸಕ್ಕೆ ಹೊರಟ ಜನರು ಹೊತ್ತು ಮುಳುಗಿದ ಬಳಿಕ ಮನೆಗೆ ಮರಳುತ್ತಿದ್ದರು. ಬೋಧನೆ ಕೇಳುವ ತಾಳ್ಮೆ, ವ್ಯವಧಾನವೂ ಅವರಲ್ಲಿ ಇರಲಿಲ್ಲ. ಶ್ರಮಿಕ ವರ್ಗಕ್ಕೆ ಸಮಯಾವಕಾಶ ಹೊಂದಿಸಿಕೊಳ್ಳುವುದು ಕಷ್ಟ ಎಂಬುದು ಸ್ವಾಮೀಜಿ ಅವರಿಗೂ ಮನವರಿಕೆಯಾಯಿತು. ಹೀಗಾಗಿ, ಭಕ್ತರ ಮನೆಗೆ ನೇರವಾಗಿ ಭೇಟಿ ಮಾಡಿ ಮನಗೆದ್ದರು.

ಮನೆಗೆ ಆಗಮಿಸಿದ ಗುರುಗಳ ಪಾದಪೂಜೆ ಮಾಡುವ ತಿಳಿವಳಿಕೆ ಬಹುತೇಕರಲ್ಲಿ ಇರಲಿಲ್ಲ. 'ಮನೆ-ಮನಕ್ಕೆ ಸಿದ್ಧರಾಮೇಶ್ವರ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ರೂಪಿಸಿಕೊಂಡು ಸಿದ್ಧರಾಮೇಶ್ವರರ ಸಂದೇಶವನ್ನು ಭಕ್ತರ ಬಳಿಗೆ ಕೊಂಡೊಯ್ದರು. ಸ್ನಾನ- ಧ್ಯಾನ-ಅಧ್ಯಾತ್ಮದ ಬಗ್ಗೆ ತಿಳಿವಳಿಕೆ ನೀಡಿದರು. ಸಂಸ್ಕಾರ, ಜೀವನದ ರೀತಿ- ನೀತಿಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಿದರು. ದುಶ್ಚಟಗಳನ್ನು ತ್ಯಜಿಸುವಂತೆ ಭಕ್ತರನ್ನು ಕೋರಲು 'ದುಶ್ಚಟ ಭಿಕ್ಷೆ' ಎಂಬ ಮತ್ತೊಂದು ಕಾರ್ಯಕ್ರಮ ರೂಪಿಸಿದರು. ದುಶ್ಚಟಗಳನ್ನು ಜೋಳಿಗೆಗೆ ಹಾಕಿಸಿಕೊಂಡು ವ್ಯಸನಮುಕ್ತರಾಗುವ ವಾಗ್ದಾನ ಪಡೆದಿದ್ದು ಸಂಚಲನ ಸೃಷ್ಟಿಸಿತು.

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿಯ ಬಸವನಶಿವನಕೆರೆ ಗ್ರಾಮ ಸ್ವಾಮೀಜಿ ಅವರ ಅವಿರತ ಶ್ರಮದ ಫಲವಾಗಿ ಸಂಪೂರ್ಣ ವ್ಯಸನಮುಕ್ತವಾಯಿತು. ದುಶ್ಚಟಗಳನ್ನು ತ್ಯಜಿಸಿದ ಭಕ್ತರ ಆರ್ಥಿಕ ಸ್ಥಿತಿಯೂ ಸುಧಾರಿಸಿತು. ಇದು ಇತರ ಗ್ರಾಮಗಳಿಗೆ ಮಾದರಿಯಾಯಿತು.

ಸಮಾಜಕ್ಕಾಗಿ ರಾಷ್ಟ್ರ, ರಾಜ್ಯದಲ್ಲಿ ಪಾದರಸದಂತೆ ಸಂಚರಿಸುವ ಸ್ವಾಮೀಜಿ ಅವರು ಜನರೊಂದಿಗೆ ಬೆರೆಯುವ ಅದಮ್ಯ ಉತ್ಸಾಹ ಹೊಂದಿದ್ದಾರೆ. 25 ವರ್ಷಕ್ಕೆ 25 ಲಕ್ಷ ಕಿ.ಮೀ. ಸಂಚಾರ ನಡೆಸಿರುವುದು ಕಾಕತಾಳೀಯ.

ಸ್ವಾಮೀಜಿ ಅವರು ನಿತ್ಯ ಬೆಳಿಗ್ಗೆಯಿಂದ ರಾತ್ರಿಯವರೆಗೆ ಚಟುವಟಿಕೆಯಿಂದ ಕೆಲಸ ಮಾಡುತ್ತಾರೆ. ವ್ಯಾಯಾಮ, ಯೋಗ, ಪೂಜೆ, ಭಕ್ತರ ಭೇಟಿ, ಶಿಕ್ಷಣ ಸಂಸ್ಥೆಯ ನಿರ್ವಹಣೆ, ವಚನ ಅಧ್ಯಯನ, ಓದು, ಚರ್ಚೆ, ಸಮುದಾಯ ಸಂಘಟನೆ... ಹೀಗೆ ಹಲವು ರೀತಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಕ್ರಿಕೆಟ್ ಹಾಗೂ ಬ್ಯಾಡ್ಮಿಂಟನ್ ಅವರಿಗೆ ಅಚ್ಚುಮೆಚ್ಚು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಇಮ್ಮಡಿಶ್ರೀ ಚರ್ಚೆ

ಇಮ್ಮಡಿ ಶ್ರೀ ಜನ್ಮದಿನೋತ್ಸವವೇ 'ಭೋವಿ ಜನೋತ್ಸವ'

ಜುಲೈ 18 ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಜನ್ಮದಿನ. ಗುರುಪೀಠ ಸ್ಥಾಪನೆಯಾದ ಆರಂಭದ ದಿನಗಳಲ್ಲಿ ಇತರ ಮಠಾಧೀಶರು ಧಾವಿಸಿ ಶುಭಕೋರುತ್ತಿದ್ದರು. ಸಮುದಾಯದ ಬಗೆಗಿನ ಸ್ವಾಮೀಜಿ ಅವರ ಬದ್ಧತೆಯನ್ನು ಮನಗಂಡ ಭಕ್ತರು ಜನ್ಮದಿನವನ್ನು 'ಭೋವಿ ಜನೋತ್ಸವ'ವಾಗಿ ಆಚರಿಸುತ್ತಿದ್ದಾರೆ. ರಾಷ್ಟ್ರದ ವಿವಿಧ ರಾಜ್ಯಗಳಿಂದ ಈ ಉತ್ಸವಕ್ಕೆ ಮಠಕ್ಕೆ ಬರುವುದು ವಾಡಿಕೆಯಾಗಿ ಬೆಳೆಯುತ್ತಿದೆ.

ಸಮುದಾಯ ಸಾಧಕರಿಗೆ ಸನ್ಮಾನ, ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ, ರಕ್ತದಾನ ಶಿಬಿರ, ವಧು–ವರರ ಸಮಾವೇಶ, ಭೋವಿ ಜನಾಂಗದ ಸಮಸ್ಯೆಗಳ ಬಗ್ಗೆ ಸಂವಾದಗಳೇ 'ಭೋವಿ ಜನೋತ್ಸವ'.

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರೊಂದಿಗೆ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ರವರೊಂದಿಗೆ ಇಮ್ಮಡಿಶ್ರೀ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅರವಿಂದ ಲಿಂಬಾವಳಿ ಅವರೊಂದಿಗೆ ಇಮ್ಮಡಿಶ್ರೀ

ಇಮ್ಮಡಿಶ್ರೀ ರವರೊಂದಿಗೆ ಸಚಿವರಾದ ಶಿವರಾಜ್ ತಂಗಡಿಗೆ ಕುಟುಂಬ

ಮಾಜಿ ಮುಖ್ಯಮಂತ್ರಿಗಳಾದ ಕುಮಾರ್ ಸ್ವಾಮಿಯವರೊಂದಿಗೆ ಇಮ್ಮಡಿಶ್ರೀ

ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಿರುವ ಶ್ರೀ ಸಿದ್ಧರಾಮೇಶ್ವರ ಸ್ವಾಮಿಜಿ.

ಭಕ್ತರಿಗೆ ವಚನದ ಪುಸ್ತಕ ಕಾಣಿಕೆ

ವಚನಕಾರ ಸಿದ್ಧರಾಮೇಶ್ವರರ ಭಕ್ತರಾದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರು ಅಪ್ಪಟ ಬಸವತತ್ವದ ಅನುಯಾಯಿ. ಬಸವತತ್ವದ ನೆಲೆಗಟ್ಟಿನ ಮೇಲೆ ವೈಚಾರಿಕ ಧರ್ಮ ನಿರ್ಮಾಣವಾಗಬೇಕು ಎಂಬ ಮಹದಾಸೆ ಹೊಂದಿದ ಅವರ ಮಾತು ಹಾಗೂ ಕೃತಿಯಲ್ಲಿ ಅದೇ ತತ್ವ ಕಾಣುತ್ತದೆ.

ಸ್ವಾಮೀಜಿ ಲಿಂಗಧಾರಣೆ, ರುದ್ರಾಕ್ಷಿ ಧಾರಣೆ ಮಾಡಿಸುತ್ತಾರೆ. ವಚನಗಳನ್ನು ಅಪಾರವಾಗಿ ಓದಿಕೊಂಡಿರುವ ಸ್ವಾಮೀಜಿ ಭಕ್ತರಿಗೆ ವಚನದ ಪುಸ್ತಕಗಳನ್ನು ಕಾಣಿಕೆಯಾಗಿ ನೀಡುವುದು ವಿಶೇಷ. ವಚನದ ಮೂಲಕ ಸಿದ್ಧರಾಮೇಶ್ವರರು ನೀಡಿದ ಸಂದೇಶಗಳನ್ನು ಜನರಿಗೆ ತಲುಪಿಸುವ ಕಾಯದಲ್ಲಿ ತೊಡಗಿಸಿಕೊಂಡಿದ್ದಾರೆ.

ವರ್ಷಕ್ಕೊಮ್ಮೆ ನಡೆಯುವ ಮಾರಮ್ಮ, ಹುಲಿಗೆಮ್ಮನ ಜಾತ್ರೆಗಳು ಸಮುದಾಯದ ಆರ್ಥಿಕತೆಯ ಮೇಲೆ ಉಂಟುಮಾಡುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಸ್ವಾಮೀಜಿ ಜಾಗೃತಿ ಮೂಡಿಸುತ್ತಿದ್ದಾರೆ. ಪ್ರಾಣಿ ಬಲಿ ನಿಷೇಧಕ್ಕೆ ಭಕ್ತರ ಮನವೊಲಿಸಿದ್ದಾರೆ. ಗಳಿಕೆ- ಬಳಕೆ- ಉಳಿಕೆ ಸೂತ್ರವನ್ನು ಭಕ್ತರ ಮುಂದಿಟ್ಟು ದುಂದುವೆಚ್ಚ ಮಾಡುವುದಕ್ಕೆ ಕಡಿವಾಣ ಹಾಕಿದ್ದಾರೆ. ಸಮುದಾಯದ ಜನರಲ್ಲಿ ಆರ್ಥಿಕ ತಿಳಿವಳಿಕೆ, ಶಿಸ್ತು ಬೆಳೆಸುವ ನಿಟ್ಟಿನಲ್ಲಿಯೂ ಗಮನ ಹರಿಸಿದ್ದು ವಿಶೇಷ.

ರಾಜಕೀಯ ಶಕ್ತಿ ವೃದ್ಧಿ

ಭೋವಿ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿಕೊಡಲು ಗುರುಗಳು ಶ್ರಮಿಸುತ್ತಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಿಗೆ ಸಿದ್ಧರಾಮೇಶ್ವರ ಸಂದೇಶ ಯಾತ್ರೆಯಲ್ಲಿ ಸಂಚರಿಸಿದರು. ಸಿದ್ಧರಾಮೇಶ್ವರ ಜಯಂತಿಯನ್ನು ಹಳ್ಳಿ ಹಳ್ಳಿಗೆ ವಿಸ್ತರಿಸಿದರು. ಸಮುದಾಯದ ಶಕ್ತಿಯನ್ನು ಗಮನಿಸಿದ ಸರ್ಕಾರ ಸಿದ್ಧರಾಮೇಶ್ವರ ಜಯಂತಿಯನ್ನು ಸರ್ಕಾರದಿಂದ ಆಚರಿಸುವುದಾಗಿ ಘೋಷಣೆ ಮಾಡಿತು.

ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಎಚ್.ಡಿ.ಕುಮಾರಸ್ವಾಮಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹಕಾರ ನೀಡಿದ್ದಾರೆ. 'ಭಕ್ತರು ಮಠದ ಆಸ್ತಿ, ಸರ್ಕಾರ ಮಠದ ಶಕ್ತಿ' ಎಂಬ ನಂಬಿಕೆ ಇಮ್ಮಡಿಶ್ರೀ ಅವರದು.

ಆರೂವರೆ ತಿಂಗಳ ಬಳಿಕ ಸಿಕ್ಕಿಬಿದ್ದ ಪತಿ • ಸ್ನೇಹಿತನ ಜೊತೆಗೂಡಿ ಸಂಚು ರೂಪಿಸಿದ್ದ

ಅಪಘಾತ ಸೋಗಿನಲ್ಲಿ ಪತ್ನಿ ಕೊಲೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚ್ಛೇದನ ನೀಡಲು ಒಪ್ಪದಿದ್ದವೆಂಬ ಕಾರಣಕ್ಕೆ ಅಪಘಾತದ ಸೋಗಿನಲ್ಲಿ ಗರ್ಭಿಣಿ ಪತ್ನಿಯನ್ನು ಕೊಲ್ಲಲು ಯತ್ನಿಸಿದ್ದ ಆರೋಪದಡಿ ಪತಿ ಸೇರಿ ಇಬ್ಬರನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಅರವಿಂದ್ ಹಾಗೂ ಸ್ನೇಹಿತ ಉದಯ್‌ಕುಮಾರ್ ಬಂಧಿತರು. ಜನವರಿ 10ರಂದು ಕೆಐಎಬಿ ಬಡಾವಣೆಯಲ್ಲಿ ಚೈತನ್ಯಾ ಅವರ ದ್ವಿಚಕ್ರ ವಾಹನಕ್ಕೆ ಕಾರು ಗುದ್ದಿಸಿ ಕೊಲೆಗೆ ಯತ್ನಿಸಲಾಗಿತ್ತು. ತನಿಖೆಯಲ್ಲಿ ಇದು ಕೊಲೆ ಯತ್ನವೆಂಬುದು ತಿಳಿಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪುರಾವೆಗಳನ್ನು ಸಂಗ್ರಹಿಸಿ ಚೈತನ್ಯಾ ಪತಿ ಅರವಿಂದ್ ಹಾಗೂ ಉದಯ್‌ಕುಮಾರ್‌ನನ್ನು ಆರೂವರೆ ತಿಂಗಳ ಬಳಿಕ ವಶಕ್ಕೆ ಪಡೆದು ತನಿಖೆ ನಡೆಸಲಾಯಿತು. ಕೊಲೆಗೆ ಸಂಚು ರೂಪಿಸಿದ್ದನ್ನು ಬಾಯ್ಬಿಟ್ಟರು. ಸದ್ಯ ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.


ಅರವಿಂದ್

ಉದಯ್ ಕುಮಾರ್

ಕೊಲೆಗೆ ಸುಪಾರಿ: 'ವಿಚ್ಛೇದನ ನೀಡಲು ಒಪ್ಪದ, ನಾಲ್ಕು ತಿಂಗಳ ಗರ್ಭಿಣಿ ಪತ್ನಿಯ ಕೊಲೆಗೆ ತೀರ್ಮಾನಿಸಿದ್ದ ಅರವಿಂದ್, ಸ್ನೇಹಿತ ಉದಯ್‌ಕುಮಾರ್ ಸಹಾಯ ಕೇಳಿದ್ದ. ಕೊಲೆ ಬಳಿಕ ಹಣ ನೀಡುವುದಾಗಿ ತಿಳಿಸಿದ್ದ. ಉದಯ್‌ಕುಮಾರ್ ಕುಟುಂಬದಲ್ಲೂ ಕಲಹವಿತ್ತು. 'ಎಲ್ಲ ಪತ್ನಿಯರೂ ಗಂಡಂದಿರಿಗೆ ಕಿರುಕುಳ ನೀಡುತ್ತಿದ್ದಾರೆ. ನಿನ್ನ ಪತ್ನಿ ಕೊಂದು ಪಾಠ ಕಲಿಸೋಣ' ಎಂದು ಉದಯ್‌ಕುಮಾರ್ ಹೇಳಿದ್ದ.

ಅಪರಾಧ ಸುದ್ದಿ

ಸೆಕೆಂಡ್ ಹ್ಯಾಂಡ್ ಕಾರು ಖರೀದಿ: 'ಕೃತ್ಯಕ್ಕೆಂದು ಸಂಚು ರೂಪಿಸಿದ್ದ ಅರವಿಂದ್ ಹಾಗೂ ಉದಯ್‌ಕುಮಾರ್ ಸೆಕೆಂಡ್ ಹ್ಯಾಂಡ್ ಕಾರು ಖರೀದಿಸಿದ್ದರು. ಚೈತನ್ಯಾ ಓಡಾಡುವ ರಸ್ತೆಯಲ್ಲಿ ಕೆಲವು ಸುತ್ತಾಡಿ ಮಾಹಿತಿ ಸಂಗ್ರಹಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚೈತನ್ಯಾ, ಜನವರಿ 10ರಂದು ಭರತನಾಟ್ಯ ತರಗತಿ ಮುಗಿಸಿ ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದರು. ಆಗ ದ್ವಿಚಕ್ರ ವಾಹನಕ್ಕೆ ಗುದ್ದಿಸಿ ಪರಾರಿಯಾಗಿದ್ದರು. ಚೈತನ್ಯಾ ತಲೆ, ಕೈ ಹಾಗೂ ಕಾಲಿಗೆ ಗಾಯವಾಗಿತ್ತು. ಈ ಬಗ್ಗೆ ದೇವನಹಳ್ಳಿ ಸಂಚಾರ ಪೊಲೀಸರು ಅಪಘಾತ ಪ್ರಕರಣ ದಾಖಲಿಸಿಕೊಂಡಿದ್ದರು. ಚಿಕಿತ್ಸೆ ಪಡೆದು ಚೈತನ್ಯಾ ಚೇತರಿಸಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಕಾರು ನೀಡಿದ್ದ ಸುಳಿವು'

'ಅಪಘಾತದಲ್ಲಿ ಜಖಂಗೊಂಡಿದ್ದ ಕಾರನ್ನು ಆರೋಪಿಗಳು ಗ್ಯಾರೇಜೊಂದಕ್ಕೆ ಬಿಟ್ಟಿದ್ದರು. ಅದನ್ನು ಸಂಚಾರ ಪೊಲೀಸರು ಪತ್ತೆ ಮಾಡಿದ್ದರು. ಅದೇ ಕಾರು ಅರವಿಂದ್ ಹೆಸರಿನಲ್ಲಿ ನೋಂದಣಿ ಆಗಿರುವುದು ಗೊತ್ತಾಗಿತ್ತು. ಅವಾಗಲೇ ಕೊಲೆ ಯತ್ನದ ಅನುಮಾನ ಬಂದಿತ್ತು. ಪ್ರಕರಣವನ್ನು ಬಾಗಲೂರು ಠಾಣೆಗೆ ವರ್ಗಾಯಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅರವಿಂದ್ ಹಾಗೂ ಉದಯ್‌ಕುಮಾರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಪ್ಪೊಪ್ಪಿಕೊಂಡರು. ಉದಯ್‌ಕುಮಾರ್ ಒಬ್ಬರೇ ಕಾರಿನಲ್ಲಿ ಹೋಗಬೇಕೆಂದು ಅರವಿಂದ್ ಸಂಚು ರೂಪಿಸಿದ್ದ. ಆದರೆ, ಆತನೊಬ್ಬನಿಂದ ಕೆಲಸ ಆಗುವುದಿಲ್ಲವೆಂದು ತಿಳಿದು ಅರವಿಂದ್ ಸಹ ಜೊತೆಗೆ ಹೋಗಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ವಿಚ್ಛೇದನಕ್ಕೆ ಪ್ರಯತ್ನ

'ಅರವಿಂದ್ ಹಾಗೂ ಚೈತನ್ಯಾ ಒಂದೂವರೆ ವರ್ಷದ ಹಿಂದೆ ಮದುವೆಯಾಗಿದ್ದರು. ದಂಪತಿ ನಡುವೆ ದಿನಕಳೆದಂತೆ ವೈಮನಸ್ಯ ಮೂಡಿತ್ತು. ದಂಪತಿ ಕಲಹದಿಂದ ಬೇಸತ್ತು, ಅರವಿಂದ್ ತಂದೆ-ತಾಯಿ ಬೇರೆಡೆ ನೆಲೆಸಿದ್ದರು. ಪತ್ನಿ ವರ್ತನೆಯಿಂದ ತಂದೆ-ತಾಯಿ ದೂರವಾದರೆಂದು ಕೋಪಗೊಂಡಿದ್ದ ಅರವಿಂದ್, ವಿಚ್ಛೇದನ ಪಡೆಯಲು ತೀರ್ಮಾನಿಸಿದ್ದ. ಆದರೆ, ಚೈತನ್ಯಾ ಒಪ್ಪಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಕಾರು ಅಡ್ಡಗಟ್ಟಿ ₹ 50 ಲಕ್ಷ ಸುಲಿಗೆ

ಬೆಂಗಳೂರು: ಹೊಸ ಗುಡ್ಡದಹಳ್ಳಿ ವೃತ್ತದ ಸಿಗ್ನಲ್‌ನಲ್ಲಿ ಕಾರು ಅಡ್ಡಗಟ್ಟಿ ₹ 50 ಲಕ್ಷ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಟೊ ಚಾಲಕ ರಿಯಾಜ್ ಹಾಗೂ ಇಮ್ರಾನ್ ಬಂಧಿತರು. ಇವರಿಂದ ₹ 44 ಲಕ್ಷ ನಗದು, 2 ಮೊಬೈಲ್, ದ್ವಿಚಕ್ರ ವಾಹನ, ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ..

'ರಿಯಲ್ ಎಸ್ಟೇಟ್ ಏಜೆಂಟ್ ಆಗಿರುವ ದೂರುದಾರ, ಜುಲೈ 13 ರಂದು ₹ 50 ಲಕ್ಷ ಹಣದ ಸಮೇತ ಹೊರಟಿದ್ದರು. ಈ ಬಗ್ಗೆ ತಿಳಿದಿದ್ದ ಆರೋಪಿಗಳು ಕಾರು ಬೆನ್ನಟ್ಟಿದ್ದರು.

'ಹೊಸ ಗುಡ್ಡದಹಳ್ಳಿ ಸಿಗ್ನಲ್‌ನಲ್ಲಿ, ದೂರುದಾರರ ಜೊತೆ ಜಗಳ ತೆಗೆದಿದ್ದರು. ಮಾರಕಾಸ್ತ್ರದಿಂದ ಕೈಗೆ ಹೊಡೆದಿದ್ದರು. ಆಗ ಆರೋಪಿಯೊಬ್ಬ, ಕಾರಿನ ಹಿಂಬದಿ ಗಾಜು ಒಡೆದು ಹಣದ ಬ್ಯಾಗ್ ಎತ್ತಿಕೊಂಡು ಓಡಿ ಹೋಗಿದ್ದ. ಇತ್ತ ಉಳಿದವರು ಪರಾರಿಯಾಗಿದ್ದರು' ಎಂದು ತಿಳಿಸಿವೆ.

'ಸುಲಿಗೆ ಪ್ರಕರಣ ದಾಖಲಿಸಿದ್ದು, ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಕಾರಿನ ಗಾಜು ಒಡೆದು ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ನಂಬರ್ ಕೊಡಲಿಲ್ಲವೆಂಬ ಕಾರಣಕ್ಕೆ ಮಹಿಳೆಯೊಬ್ಬರ ಕಾರಿನ ಗಾಜು ಒಡೆದು ಬೆದರಿಕೆಯೊಡ್ಡಲಾಗಿದ್ದು, ಈ ಸಂಬಂಧ ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಂಪನಿಯೊಂದರ ಉದ್ಯೋಗಿಯು ಶನಿವಾರ ರಾತ್ರಿ ನಡೆದಿರುವ ಘಟನೆ ಸಂಬಂಧ ದೂರು ನೀಡಿದ್ದಾರೆ. ತನಿಖೆ ನಡೆದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೊಬೈಲ್ ನಂಬರ್ ವಿಚಾರವಾಗಿ ಮಹಿಳೆ ಹಾಗೂ ಪಕ್ಕದ ಮನೆಯವರ ನಡುವೆ ಜಗಳ ಶುರುವಾಗಿತ್ತು. ಆರೋಪಿ, ಕಾರಿನ ಗಾಜು ಒಡೆದು ಬೆದರಿಕೆ ಹಾಕಿರುವುದಾಗಿ ಗೊತ್ತಾಗಿದೆ. ಘಟನೆಗೆ ಪ್ರಮುಖ ಕಾರಣವೇನು ಎಂಬುಂದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅತ್ಯಾಚಾರ ಎಸಗಿ ವಿಡಿಯೊ ಚಿತ್ರೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂನ 20 ವರ್ಷದ ಯುವತಿ ಮೇಲೆ ಅತ್ಯಾಚಾರ ಎಸಗಿ ವಿಡಿಯೊ ಚಿತ್ರೀಕರಿಸಿಕೊಂಡು ವೇಶ್ಯಾವಾಟಿಕೆ ದಂಧೆಗೆ ತಳ್ಳಲು ಯತ್ನಿಸಲಾಗಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಯುವತಿ ದೂರು ಆಧರಿಸಿ ಆರೋಪಿ ಶಾಹಿದ್‌ವುದ್ದೀನ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವತಿಗೂ ಆರೋಪಿ ಶಾಹಿದ್‌ವುದ್ದೀನ್‌ಗೂ ಕೆಲ ತಿಂಗಳ ಹಿಂದೆ ಪರಿಚಯವಾಗಿತ್ತು. ಪ್ರೀತಿಸಿ ಮದುವೆಯಾಗುವುದಾಗಿ ಹೇಳಿದ್ದ ಆರೋಪಿ, ಯುವತಿಯನ್ನು ಅಸ್ಸಾಂನಿಂದ ಬೆಂಗಳೂರಿಗೆ ಕರೆತಂದು ಮನೆಯೊಂದರಲ್ಲಿ ಇರಿಸಿದ್ದ' ಎಂದು ತಿಳಿಸಿವೆ.

'ಯುವತಿ ಮೇಲೆ ಅತ್ಯಾಚಾರ ಎಸಗಿ ವಿಡಿಯೊ ಚಿತ್ರೀಕರಿಸಿಟ್ಟುಕೊಂಡಿದ್ದ. ಕೆಲ ದಿನಗಳ ನಂತರ, ವೇಶ್ಯಾವಾಟಿಕೆ ಮಾಡಲು ಆಕೆಗೆ ಒತ್ತಾಯಿಸಿದ್ದ. ಯುವತಿ ವಿರೋಧಿಸಿದಾಗ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವುದಾಗಿ ಬೆದರಿಸಿದ್ದ'

'ಮನೆಯಿಂದ ತಪ್ಪಿಸಿಕೊಂಡಿದ್ದ ಯುವತಿ, ಸ್ಥಳೀಯ ದಂಪತಿಯೊಬ್ಬರ ಮುಂದೆ ಅಳಲು ತೋಡಿಕೊಂಡಿದ್ದರು. ಅವರ ಸಹಾಯದಿಂದ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಯುವತಿ ವಿಚಾರಕ್ಕೆ ಗಲಾಟೆ, ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿ ವಿಚಾರವಾಗಿ ಗಲಾಟೆ ಶುರುವಾಗಿ ಗಫರ್ ಎಂಬುವರ ಮೇಲೆ ಶನಿವಾರ ರಾತ್ರಿ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಹುಸೇನ್ ಸೇರಿ ಇಬ್ಬರನ್ನು ಭಾರತಿನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಗಾಯಗೊಂಡಿರುವ ಗಫರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹುಸೇನ್ ಹಾಗೂ ಮತ್ತೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗಫರ್ ಹಾಗೂ ಹುಸೇನ್, ಒಂದೇ ಯುವತಿ ಜೊತೆ ಸ್ನೇಹವಿಟ್ಟುಕೊಂಡಿದ್ದರು. ಯುವತಿ ತಂಟೆಗೆ ಹೋಗದಂತೆ ಪರಸ್ಪರ ಜಗಳವಾಡಿದ್ದರು. ಇಬ್ಬರ ನಡುವೆ ವೈಷಮ್ಯವಿತ್ತು. ಶನಿವಾರ ರಾತ್ರಿ ಕಂಟೋನ್ಮೆಂಟ್ ರೈಲು ನಿಲ್ದಾಣ ಬಳಿಯ ತಿಮ್ಮಯ್ಯ ವೃತ್ತದಲ್ಲಿ ಯುವತಿ ವಿಚಾರವಾಗಿ ಪುನಃ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಆಗ ಆರೋಪಿ ಬಿಯರ್ ಬಾಟಲಿ, ಕಲ್ಲಿನಿಂದ ಗಫರ್ ತಲೆಗೆ ಹೊಡೆದಿದ್ದ. ರಸ್ತೆಯಲ್ಲಿ ಬಿದ್ದು ನರಳಾಡುತ್ತಿದ್ದ ಗಫರ್‌ನನ್ನು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಆಸ್ಪತ್ರೆಗೆ ಸೇರಿಸಿದ್ದಾರೆ'.

'ಘಟನೆ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಭಾರತಿನಗರ ಠಾಣೆಗೆ ವರ್ಗಾಯಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಪಕ್ಷ ನಾಯಕರ ಸಭೆ: ಸಂಚಾರ ದಟ್ಟಣೆ ಸಾಧ್ಯತೆ

ಬೆಂಗಳೂರು: ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಜುಲೈ 17 ಹಾಗೂ 18ರಂದು ಕೇಂದ್ರದ ವಿರೋಧ ಪಕ್ಷಗಳ ನಾಯಕರ ಸಭೆ ನಡೆಯಲಿದ್ದು, ರೇಸ್‌ಕೋರ್ಸ್ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ.

ಪತ್ರಿಕಾ ಪ್ರಕಟಣೆ ನೀಡಿರುವ ಸಂಚಾರ ಪೊಲೀಸರು, 'ಸಾರ್ವಜನಿಕರು ಎರಡು ದಿನ ಪರ್ಯಾಯ ರಸ್ತೆಯಲ್ಲಿ ಸಂಚರಿಸಬೇಕು' ಎಂದು ಕೋರಿದ್ದಾರೆ.

'ರಾಜ್ಯ ಹಾಗೂ ಹೊರ ರಾಜ್ಯಗಳ ಗಣ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅನಿವಾರ್ಯ ಸಂದರ್ಭದಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗುವುದು. ಎಲ್ಲರೂ ಸಹಕರಿಸಬೇಕು' ಎಂದು ಹೇಳಿದ್ದಾರೆ.

'ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಕಬ್ಬನ್ ರಸ್ತೆ, ರಾಜಭವನ ರಸ್ತೆ, ಅರಮನೆ ರಸ್ತೆ, ರೇಸ್‌ಕೋರ್ಸ್ ರಸ್ತೆ, ಶೇಷಾದ್ರಿ ರಸ್ತೆ, ಬಳ್ಳಾರಿ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಉಂಟಾಗಬಹುದು' ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನ ನಿಲುಗಡೆ: 'ಡಾ.ಬಿ.ಆರ್. ಅಂಬೇಡ್ಕರ್, ರಾಜಭವನ ರಸ್ತೆ, ಬಳ್ಳಾರಿ ರಸ್ತೆ ಹಾಗೂ ರೇಸ್‌ಕೋರ್ಸ್ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಬಿಗಿ ಭದ್ರತೆ: ಹೋಟೆಲ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಳ್ಳಲಿದ್ದಾರೆ. ಹೋಟೆಲ್‌ಗೆ ಭೇಟಿ ನೀಡಿದ್ದ ಕಮಿಷನರ್ ಬಿ.ದಯಾನಂದ್, ಭದ್ರತೆ ಪರಿಶೀಲನೆ ನಡೆಸಿದರು.

ಪಿಟಿಸಿಎಲ್ ಕಾಯ್ದೆ ತಿದ್ದುಪಡಿ: ಸಿ.ಎಂ ನೇತೃತ್ವದಲ್ಲಿ ಇಂದು ಸಭೆ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲ ಜಮೀನುಗಳ ಪರಭಾರೆ ನಿಷೇಧ) (ಪಿಟಿಸಿಎಲ್) ಕಾಯ್ದೆಗೆ ತಿದ್ದುಪಡಿ ತರುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ಸಂಘಟನೆಗಳ ಪ್ರಮುಖರ ಜತೆ ಸೋಮವಾರ ಸಭೆ ನಡೆಸಲಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರಿಗೆ ಸರ್ಕಾರದಿಂದ ಮಂಜೂರಾದ ಜಮೀನುಗಳನ್ನು ಅನುಮತಿ ಇಲ್ಲದೇ ಮಾರಾಟ ಮಾಡುವುದನ್ನು ನಿರ್ಬಂಧಿಸಲಾಗಿತ್ತು. ಅಕ್ರಮ ಪರಭಾರೆಯನ್ನು ಪ್ರಶ್ನಿಸಿ ಮನವಿ ಸಲ್ಲಿಸುವುದಕ್ಕೆ ಪಿಟಿಸಿಎಲ್ ಕಾಯ್ದೆಯಲ್ಲಿ ಕಾಲಮಿತಿ ನಿಗದಿಪಡಿಸಿರಲಿಲ್ಲ. ಮೇಲ್ಮನವಿ ಸಲ್ಲಿಸುವುದಕ್ಕೆ ಕಾಲಮಿತಿ ನಿಗದಿಪಡಿಸದಿದ್ದರೆ ಅರ್ಜಿಗಳು ಮಾನ್ಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆ ಬಳಿಕ ಪಿಟಿಸಿಎಲ್ ಕಾಯ್ದೆ ಬಲ ಕಳೆದುಕೊಂಡಿತ್ತು.

ಕಾಯ್ದೆಗೆ ತಿದ್ದುಪಡಿ ತಂದು, ಅರ್ಜಿ ಸಲ್ಲಿಕೆಗೆ ಕಾಲಮಿತಿ ನಿಗದಿಪಡಿಸುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಜಮೀನು ರಕ್ಷಿಸಬೇಕು ಎಂದು ದಲಿತ ಸಂಘಟನೆಗಳು ಆಗ್ರಹಿಸುತ್ತಿವೆ. ಕಾಯ್ದೆಗೆ ತಿದ್ದುಪಡಿ ತರುವುದಾಗಿ ಸಿದ್ದರಾಮಯ್ಯ ಇದೇ 7ರಂದು ಮಂಡಿಸಿದ್ದ ಬಜೆಟ್‌ನಲ್ಲಿ ಪ್ರಕಟಿಸಿದ್ದರು.

ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರುವ ಸಂಬಂಧ ಕಾನೂನು ಇಲಾಖೆಯು ವರದಿ ನೀಡಿದೆ. 1965 ರ ಅಕ್ಟೋಬರ್ 2 ರಿಂದ ಈ ಕಾಯ್ದೆ ಜಾರಿಯಲ್ಲಿದೆ.

ಹಾಲಿನ ದರ ₹3 ಹೆಚ್ಚಿಸಲು ಚಿಂತನೆ

ಬೆಂಗಳೂರು: ಹಾಲಿನ ದರವನ್ನು ಪ್ರತಿ ಲೀಟರ್‌ಗೆ ₹3 ಹೆಚ್ಚಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಹಾಲಿನ ದರವನ್ನು ಕನಿಷ್ಠ ₹5ಕ್ಕೆ ಹೆಚ್ಚಿಸಬೇಕು ಎಂದು ಹಾಲು ಒಕ್ಕೂಟಗಳು ಒತ್ತಾಯಿಸುತ್ತಿವೆ.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಮೂಲಗಳ ಪ್ರಕಾರ ಕನಿಷ್ಠ ₹3 ಹೆಚ್ಚಿಸುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಅವರ ಅನುಮೋದನೆ ಬೇಕಾಗಿದೆ. ಅಧಿವೇಶನದ ಬಳಿಕ ಒಪ್ಪಿಗೆ ನೀಡುವ ಸಾಧ್ಯತೆ ಇದೆ ಎಂದು ತಿಳಿಸಿವೆ.

ನಿಶಾ ವಿರುದ್ಧ 30 ಮಂದಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸ್ಟರ್ ಆನಂದ್ ಅವರ ಪತ್ನಿ ಹಾಗೂ ಪುತ್ರಿ ಹೆಸರು ಹೇಳಿಕೊಂಡು ವಂಚಿಸುತ್ತಿದ್ದ ಆರೋಪಿ ನಿಶಾ ನರಸಪ್ಪ ವಿರುದ್ಧ 30 ಜನರು ದೂರು ನೀಡಿದ್ದು, ಸುಮಾರು ₹ 20 ಲಕ್ಷದಿಂದ ₹ 30 ಲಕ್ಷ ವಂಚನೆಯಾಗಿರುವುದಾಗಿ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಎನ್.ಎನ್. ಪ್ರೊಡಕ್ಷನ್ಸ್ ಸ್ಥಾಪಿಸಿದ್ದ ನಿಶಾ ಅವರು ಜಾಹೀರಾತು ಹಾಗೂ ಫೋಟೊಶೂಟ್ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸಿದ್ದಾರೆ' ಎಂದು ಆರೋಪಿಸಿ ಆನಂದ್ ಪತ್ನಿ ಯಶಸ್ವಿನಿ ಅವರು ಇತ್ತೀಚೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ನಿಶಾ ಅವರನ್ನು ಬಂಧಿಸಿದ್ದರು. ಸದ್ಯ ನಿಶಾ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಆರೋಪಿ ನಿಶಾ, ನಾಲ್ವರು ಪೋಷಕರಿಂದ ಹಣ ಪಡೆದಿದ್ದ ಮಾಹಿತಿ ಆರಂಭದಲ್ಲಿ ಗೊತ್ತಾಗಿತ್ತು. ಬಂಧನದ ನಂತರ ಮತ್ತಷ್ಟು ಮಂದಿ ಠಾಣೆಗೆ ಬಂದು ದೂರು ನೀಡುತ್ತಿದ್ದಾರೆ. ಇದುವರೆಗೂ 30 ಮಂದಿ ದೂರು ನೀಡಿದ್ದಾರೆ. ಈಗಾಗಲೇ ಒಂದು ಎಫ್‌ಐಆರ್ ದಾಖಲಾಗಿದೆ. ಹೀಗಾಗಿ, 30 ಮಂದಿಯನ್ನು ಸಾಕ್ಷಿದಾರರನ್ನಾಗಿ ಪರಿಗಣಿಸಲಾಗುವುದು' ಎಂದು ಪೊಲೀಸರು ಹೇಳಿದರು.

'ತಮ್ಮ ಮಕ್ಕಳಿಗೆ ರಿಯಾಲಿಟಿ ಶೋ, ಜಾಹೀರಾತುಗಳಲ್ಲಿ ನಟಿಸಲು ಅವಕಾಶ ಕೊಡಿಸಬೇಕೆಂದು ಪೋಷಕರು ನಿಶಾರನ್ನು ಸಂಪರ್ಕಿಸುತ್ತಿದ್ದರು. ಆದರೆ, ಆರೋಪಿ ಫೋಟೊಶೂಟ್ ಹೆಸರಿನಲ್ಲಿ ಹಣ ಪಡೆದು ವಂಚಿಸುತ್ತಿದ್ದರು. ಇತ್ತೀಚೆಗೆ ಆರೋಪಿ ಕೃತ್ಯ ಯಶಸ್ವಿನಿ ಅವರ ಗಮನಕ್ಕೆ ಬಂದಿತ್ತು. ಅವರೇ ಠಾಣೆಗೆ ಬಂದು ದೂರು ನೀಡಿದ್ದರು' ಎಂದು ತಿಳಿಸಿದರು.

'ಯಶಸ್ವಿನಿ, ಅವರ ಮಗಳು ವಂಶಿಕಾ ಹಾಗೂ ಇತರರ ಹೆಸರಿನಲ್ಲಿ ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಸಿನಿಮಾ ನಟರು ಹಾಗೂ ಇತರೆ ಪ್ರಮುಖರ ಹೆಸರಿನಲ್ಲಿ ವಂಚಿಸಿರುವುದಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲ. ಅಗತ್ಯಬಿದ್ದರೆ, ನ್ಯಾಯಾಂಗ ಬಂಧನದಲ್ಲಿರುವ ನಿಶಾ ಅವರನ್ನು ಕಸ್ಟಡಿಗೆ ಪಡೆದು ಪುನಃ ವಿಚಾರಣೆ ನಡೆಸಲಾಗುವುದು' ಎಂದರು.

ಪ್ರಿಯಕರನ ಎದುರೇ ಅತ್ಯಾಚಾರ: ಬಂಧನ

ಜೈಪುರ (ಪಿಟಿಐ): ರಾಜಸ್ಥಾನದ ಜೋಧಪುರದಲ್ಲಿ ಪ್ರಿಯಕರನ ಎದುರಲ್ಲೇ 17 ವರ್ಷದ ಪರಿಶಿಷ್ಟ ಜಾತಿಯ ಯುವತಿಯ ಮೇಲೆ ಮೂವರು ಕಾಲೇಜು ವಿದ್ಯಾರ್ಥಿಗಳು ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಆರೋಪಿಗಳನ್ನು ಬಂಧಿಸಿದ್ದು, ಇವರು ಅತ್ಯಾಚಾರಕ್ಕೂ ಮುನ್ನ ಯುವತಿಯ ಪ್ರಿಯಕರನ ಮೇಲೆ ಹಲ್ಲೆ ಎಸಗಿದ್ದರು ಎಂದು ಹೇಳಿದ್ದಾರೆ.

ಯುವತಿ ಪ್ರಿಯಕರನ ಜೊತೆ ಅಜ್ಮೀರ್‌ನಿಂದ ಶನಿವಾರ ಜೋಧಪುರಕ್ಕೆ ಓಡಿ ಹೋಗಿದ್ದು, ಅಲ್ಲಿನ ಪಾವಟ ಚೌರಾಹ ಎಂಬಲ್ಲಿಗೆ ತೆರಳಿದ್ದರು. ಅಲ್ಲಿ ಆರೋಪಿಗಳಾದ ಸಮಂದರ್ ಸಿಂಗ್ ಭಾಟಿ, ಧರ್ಮಪಾಲ್ ಸಿಂಗ್ ಮತ್ತು ಭಟ್ಟಂ ಸಿಂಗ್ ಇವರಿಗೆ ನೆರವಿನ ಭರವಸೆ ನೀಡಿದ್ದರು. ಬಳಿಕ ಇಬ್ಬರನ್ನೂ ವಿಶ್ವವಿದ್ಯಾಲಯವೊಂದರ ಮೈದಾನಕ್ಕೆ ಕರೆದೊಯ್ದಿದ್ದು, ಅಲ್ಲಿ ಕೃತ್ಯ ಎಸಗಿದ್ದಾರೆ ಎಂದು ವಿವರಿಸಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ವಿದ್ಯಾರ್ಥಿ ಮುಖಂಡನ ಪರವಾಗಿ ಈ ಆರೋಪಿಗಳು ಪ್ರಚಾರ ನಡೆಸುತ್ತಿದ್ದರು ಎಂದೂ ಹೇಳಿದ್ದಾರೆ. ಆದರೆ ಆರೋಪಿಗಳಿಗೂ ಎಬಿವಿಪಿಗೂ ಸಂಬಂಧವಿಲ್ಲ ಎಂದು ಅದರ ಮುಖಂಡರು ತಿಳಿದ್ದಾರೆ.

'ಬ್ರಾಹ್ಮಣರ ಸಮಾಜ ವಿಭಜಿಸಿದ ಕಾಂತರಾಜು ಆಯೋಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣ ಸಮುದಾಯವನ್ನೇ ವಿಭಜಿಸಿರುವ ಎಚ್.ಕಾಂತರಾಜು ಆಯೋಗದ ವರದಿಯನ್ನು ರಾಜ್ಯ ಸರ್ಕಾರವು ಯಥಾವತ್ತು ಅಂಗೀಕರಿಸಬಾರದು. ಬದಲಾವಣೆ ಮಾಡದೇ ವರದಿ ಸ್ವೀಕರಿಸಿದರೆ ಸಮುದಾಯಕ್ಕೆ ಅನ್ಯಾಯ ಆಗಲಿದೆ' ಎಂದು ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ ಭಾನುವಾರ ಹೇಳಿದರು.

'ಎಚ್.ಕಾಂತರಾಜು ಆಯೋಗದ ವರದಿ' ಕುರಿತು ವಿಶ್ವ ವಿಪ್ರತ್ರಯೀ ಪರಿಷತ್ ನಗರದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ಆಯೋಗದ ವರದಿಯನ್ನು ಅಂಗೀಕರಿಸುವುದಿದ್ದರೆ ಬ್ರಾಹ್ಮಣ ಸಮುದಾಯದ 44 ಉಪ ಜಾತಿಗಳನ್ನೂ ಒಟ್ಟಿಗೆ ಸೇರಿಸಬೇಕು. ಉಪ ಪಂಗಡಗಳನ್ನು ಬೇರ್ಪಡಿಸಿರುವ ವರದಿಗೆ ಬ್ರಾಹ್ಮಣ ಸಮುದಾಯದ ವಿರೋಧವಿದೆ' ಎಂದು ಹೇಳಿದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಭೆಯಲ್ಲಿ (ಎಡದಿಂದ) ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಎಚ್.ಎಸ್. ಚಿದಾನಂದಮೂರ್ತಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಬಬ್ಬೂರುಕಮ್ಮೆ ಸೇವಾ ಸಮಿತಿ ಅಧ್ಯಕ್ಷ ಎ.ವಿ.ಪ್ರಸನ್ನ, ವಿಶ್ವ ವಿಪ್ರತ್ರಯೀ ಪರಿಷತ್ ಅಧ್ಯಕ್ಷ ಎಸ್.ರಘುನಾಥ್ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

'ಅನ್ಯ ಕಾರಣಕ್ಕೆ ಮತಾಂತರಗಳು ನಡೆದಿವೆ. ಅವರೆಲ್ಲರೂ ಬ್ರಾಹ್ಮಣರೆಂದೇ ಗುರುತಿಸಿಕೊಳ್ಳುತ್ತಿದ್ದಾರೆ. ಆದರೆ, ಸಮೀಕ್ಷೆ ವೇಳೆ ಬ್ರಾಹ್ಮಣರಿಗೆ ಮಾತ್ರ ಸಂಖ್ಯೆ 200 ಎಂದು ನಮೂದಿಸಿ, ಉಳಿದವರಿಗೆ ಬೇರೆ ಸಂಖ್ಯೆ ನೀಡಲಾಗಿದೆ. ನಮ್ಮ ಸಮೀಕ್ಷೆಯಂತೆ ರಾಜ್ಯದಲ್ಲಿ ಬ್ರಾಹ್ಮಣರ ಜನಸಂಖ್ಯೆ 43 ಲಕ್ಷ ಇದೆ. ಆದರೆ, ವರದಿಯಲ್ಲಿ 12 ರಿಂದ 13 ಲಕ್ಷ ಎಂದು ತೋರಿಸಲಾಗಿದೆ ಎಂಬ ಮಾಹಿತಿ ಲಭಿಸಿದೆ' ಎಂದರು.

'ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ತಂದು ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸಿದೆ. ಕಾಂತರಾಜು ಆಯೋಗದ ವರದಿಯನ್ನು ಅಂಗೀಕರಿಸಿದರೆ, ಆ ಮೀಸಲಾತಿ ಸೌಲಭ್ಯದಿಂದ ಬ್ರಾಹ್ಮಣರನ್ನು ವಂಚಿಸಿದಂತೆ ಆಗಲಿದೆ' ಎಂದು ಹೇಳಿದರು.

> **ಸಮುದಾಯದ ನಾಯಕರನ್ನು ಅಧಿಕಾರದಿಂದ ದೂರವಿಡುವ ಕೆಲಸಗಳು ನಡೆಯುತ್ತಿವೆ. ಅಲ್ಲದೇ ಬೇರೆ ಕ್ಷೇತ್ರಗಳಲ್ಲೂ ಕಡೆಗಣಿಸಿ ತುಳಿಯುವ ಕೆಲಸ ಮಾಡಲಾಗುತ್ತಿದೆ**
> **ಡಾ.ಎ.ವಿ. ಪ್ರಸನ್ನ,**
> ಅಧ್ಯಕ್ಷ, ಬಬ್ಬೂರುಕಮ್ಮೆ ಸೇವಾ ಸಮಿತಿ

> **ಎಚ್.ಕಾಂತರಾಜು ಆಯೋಗದ ವರದಿ ಅಂಗೀಕರಿಸಿದರೆ ಕೇಂದ್ರ ಕಲ್ಪಿಸಿರುವ ಮೀಸಲಾತಿ ಸೌಲಭ್ಯದಿಂದಲೂ ಬ್ರಾಹ್ಮಣರು ವಂಚಿತರಾಗಬೇಕಾದಿತು**
> **ಎನ್.ಕುಮಾರ್,**
> ನಿವೃತ್ತ ನ್ಯಾಯಮೂರ್ತಿ, ಹೈಕೋರ್ಟ್

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಮಾತನಾಡಿ, 'ಹಿಂದೆ ಬ್ರಾಹ್ಮಣರು ಹಾಗೂ ಇತರೆ ವರ್ಗ ಎಂದಿತ್ತು. ಈಗ ಇತರೆ ವರ್ಗಕ್ಕೆ ನಾವೇ ಸೇರಿದ್ದೇವೆ. ಆಯೋಗದ ವರದಿ ಸರಿಯಿದೆ ಎಂದು ಸಮುದಾಯದ ಮುಖಂಡರೇ ಹೇಳುತ್ತಿದ್ದಾರೆ' ಎಂದು ವಿಷಾದಿಸಿದರು.

'ಆರ್ಥಿಕವಾಗಿ ಹಿಂದುಳಿದವರಿಗೆ ಕೇಂದ್ರವು ಶೇ 10ರಷ್ಟು ಮೀಸಲಾತಿ ಕಲ್ಪಿಸಿತ್ತು. ಅದನ್ನೂ ಕಸಿದುಕೊಳ್ಳುವ ಹುನ್ನಾರ ನಡೆಯುತ್ತಿದೆ. ಸಂವಿಧಾನಕ್ಕೆ ತಿದ್ದುಪಡಿ ತಂದಿರುವ ಕಾರಣಕ್ಕೆ ಭವಿಷ್ಯದಲ್ಲಿಯಾದರೂ ಸೌಲಭ್ಯ ಸಿಗಲಿದೆ' ಎಂದು ಹೇಳಿದರು.

ಬಬ್ಬೂರುಕಮ್ಮೆ ಸೇವಾ ಸಮಿತಿ ಅಧ್ಯಕ್ಷ ಎ.ವಿ.ಪ್ರಸನ್ನ ಮಾತನಾಡಿ, 'ಆಯೋಗವು ಬ್ರಾಹ್ಮಣ ಸಮುದಾಯದ ಸಂಖ್ಯೆಯ ನಿರ್ಣಯ ಮಾಡುವಲ್ಲಿ ಲೋಪ ಎಸಗಿದೆ. ಮೊದಲೇ ನಮ್ಮ ಜನಸಂಖ್ಯೆ ಕಡಿಮೆಯಿತ್ತು. ಆಯೋಗವು ಮತ್ತಷ್ಟು ಕಡಿತಗೊಳಿಸಿದೆ' ಎಂದು ಹೇಳಿದರು.

ಸಿರಿಕಲಾಮೇಳ ಬೆಂಗಳೂರು ವತಿಯಿಂದ ಎಪಿಐಟಿ ಸಂಸ್ಥಾಪಕ ಶಶಿಕುಮಾರ್ ತಿಮ್ಮಯ್ಯ ದಂಪತಿಯನ್ನು ಸನ್ಮಾನಿಸಲಾಯಿತು. ಕಲಾಪೋಷಕ ರವೀಂದ್ರ ಭಟ್, ಸಿರಿಕಲಾ ಮೇಳದ ಸಂಯೋಜಕ ಮಹಾಬಲೇಶ್ವರ, ಯಕ್ಷಗಾನ ಕಲಾವಿದ ವಿನಯ್ ಹೊಸತೋಟ, ಕರುನಾಡ ಬೆಳಕು ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆನಗಳ್ಳಿ ಕರುಣಾಕರ ಹೆಗ್ಡೆ, ಡಿವೈಎಸ್ಪಿ ಸುಧೀರ ಹೆಗಡೆ, ಸಿರಿಕಲಾಮೇಳದ ಸಂಚಾಲಕ ಸುರೇಶ ಹೆಗಡೆ, ಕರ್ನಾಟಕ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಶೇಖರ್ ಹೆಬ್ಬಾರ್, ಶ್ರೀ ನಾಟ್ಯ ವಿನಾಯಕ ದೇವಸ್ಥಾನದ ಪ್ರಧಾನ ವಿಶ್ವಸ್ಥ ವಿನಾಯಕ ಹೆಗಡೆ ಕಲಗದ್ದೆ, ಪತ್ರಕರ್ತ ರಾಘವೇಂದ್ರ ಬೆಟ್ಟಕೊಪ್ಪ ಇದ್ದರು — ಪ್ರಜಾವಾಣಿ ಚಿತ್ರ

'ಯಕ್ಷಗಾನ ಕಲೆಗೆ ಅಳಿವಿಲ್ಲ'

ಬೆಂಗಳೂರು: 'ಯಕ್ಷಗಾನ ಕಲೆ ಎಂದಿಗೂ ನಶಿಸುವುದಿಲ್ಲ. ಇದು ನಾಡಿನ ಹೆಮ್ಮೆಯ ಕಲೆ' ಎಂದು ಡಿವೈಎಸ್‌ಪಿ ಸುಧೀರ ಹೆಗಡೆ ಹೇಳಿದರು.

ಸಿರಿಕಲಾಮೇಳ ಆಯೋಜಿಸಿದ್ದ 'ಸಾಧಕನಿಗೆ ಸನ್ಮಾನ' ಮತ್ತು ಯಕ್ಷಗಾನ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೆಂಗಳೂರಿನಂಥ ನಗರಗಳಲ್ಲಿ ಯಕ್ಷಗಾನವು ಪ್ರದರ್ಶನಗೊಳ್ಳುತ್ತಿರುವುದನ್ನು ಕಂಡಾಗ ನಮ್ಮ ಹೆಮ್ಮೆಯ ಕಲೆ ನಶಿಸುವುದಿಲ್ಲ ಎನ್ನುವುದು ವೇದ್ಯವಾಗುತ್ತದೆ. ಹಿಂದೆ ಜಾತ್ರೆಗಳಲ್ಲಿ ಐದಾರು ಮೇಳಗಳು ವಾರಾನುಗಟ್ಟಲೆ ನಿತ್ಯ ಯಕ್ಷಗಾನ ಮಾಡುತ್ತಿದ್ದವು. ಇತ್ತೀಚೆಗೆ ಜಾತ್ರೆಯಲ್ಲಿ ಯಾವುದಾದರೂ ಒಂದು ಯಕ್ಷಗಾನ ಮಾತ್ರ ನಡೆಯುತ್ತಿರುತ್ತದೆ. ಇದನ್ನೆಲ್ಲ ನೋಡಿದಾಗ ಯಕ್ಷಗಾನ ಕಲೆ ನಶಿಸಿ ಹೋಗುತ್ತಿದೆಯೇ ಎಂಬ ಆತಂಕ ಉಂಟಾಗಿತ್ತು. ಆದರೆ, ಯಕ್ಷಗಾನ ಇನ್ನಷ್ಟು ಬೆಳೆದಿರುವುದು ಕಂಡಾಗ ಈ ಆತಂಕ ದೂರವಾಗಿದೆ' ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಅಧ್ಯಕ್ಷತೆ ವಹಿಸಿದ್ದರು. ದೊಡ್ಡಬಳ್ಳಾಪುರ ಎಪಿಟಿಐ ಸಂಸ್ಥಾಪಕ ಶಶಿಕುಮಾರ್ ತಿಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು. ಸ್ತೋತ್ರವಾಹಿನಿ ಯೂಟ್ಯೂಬ್ ಚಾನಲ್ ಲೋಕಾರ್ಪಣೆ ಮಾಡಲಾಯಿತು.

ಸಿರಿಕಲಾಮೇಳ ಮತ್ತು ಅತಿಥಿ ಕಲಾವಿದರಿಂದ 'ಲವಕುಶ' ಯಕ್ಷಗಾನ ನಡೆಯಿತು.

ಪಿಎಚ್‌.ಡಿ ಪ್ರವೇಶ ಪರೀಕ್ಷೆಯಲ್ಲಿ ಲೋಪ: ಕುಲಪತಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಭಾನುವಾರ ನಡೆಸಿದ್ದ ಪಿಎಚ್.ಡಿ ಪ್ರವೇಶ ಪರೀಕ್ಷೆಯ ವೇಳೆ ಅಕ್ರಮ ನಡೆದಿದ್ದು, ಅನ್ಯಾಯವಾಗಿದೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ.

'ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್‌ನಲ್ಲಿನ ಕೆಎಲ್‌ಇ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ನಡೆದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಸೀಲ್ ಮಾಡಿರಲಿಲ್ಲ. ಒಎಂಆರ್ ಉತ್ತರ ಪತ್ರಿಕೆಯಲ್ಲಿ ಕಾರ್ಬನ್ ಶೀಟ್ ಇರಲಿಲ್ಲ. ಮೊಬೈಲ್ ಕೊಂಡೊಯ್ಯಲು ಅವಕಾಶ ನೀಡಲಾಗಿತ್ತು. ಕೆಲ ಅಭ್ಯರ್ಥಿಗಳು ಮೊಬೈಲ್ ತೆಗೆದುಕೊಂಡು ಬಂದು ಪರೀಕ್ಷೆ ಬರೆದಿದ್ದಾರೆ' ಎಂದು ಅಭ್ಯರ್ಥಿಗಳು ಕುಲಪತಿ ಅವರಿಗೆ ದೂರು ನೀಡಿದ್ದಾರೆ.

'ಪರೀಕ್ಷೆ ನಡೆಸಿದ್ದ ಸಂಸ್ಥೆಯಿಂದ ಕರ್ತವ್ಯ ಲೋಪವಾಗಿರುವುದು ಕಂಡುಬಂದಿದೆ. ಕಷ್ಟಪಟ್ಟು ಓದಿದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಕುಲಪತಿಗಳು ಈ ಸಂಬಂಧ ತನಿಖೆ ನಡೆಸಬೇಕು. ಮರುಪರೀಕ್ಷೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ಪಿಎಚ್.ಡಿಗೆ ಅರ್ಜಿ ಸಲ್ಲಿಸಿದ್ದ 2 ಸಾವಿರ ಅಭ್ಯರ್ಥಿಗಳ ಪೈಕಿ 1,700 ಅಭ್ಯರ್ಥಿಗಳು ಭಾನುವಾರ ನಾಗರಬಾವಿ ಕೆಎಲ್‌ಇ ಕಾಲೇಜು ಮತ್ತು ಕೆಂಗೇರಿಯ ಶೇಷಾದ್ರಿಪುರ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಹಾಜರಾಗಿ ಪರೀಕ್ಷೆಗೆ ಹಾಜರಾಗಿದ್ದರು.

ಶೇಷಾದ್ರಿಪುರ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಬೆಳಿಗ್ಗೆ 11ಕ್ಕೆ ಪರೀಕ್ಷೆ ಆರಂಭವಾಗಿದ್ದರೂ ಅಭ್ಯರ್ಥಿಗಳಿಗೆ 15 ನಿಮಿಷ ತಡವಾಗಿ ಪ್ರಶ್ನೆ ಪತ್ರಿಕೆ ತಲುಪಿದೆ. ತಡವಾದ ಕಾರಣ 15 ನಿಮಿಷ ಹೆಚ್ಚಿನ ಸಮಯವಕಾಶ ನೀಡಲಾಗಿತ್ತು ಎಂದು ಮೂಲಗಳು ಹೇಳಿವೆ.

'ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮಗಳು ನಡೆದಿಲ್ಲ. ಮೊಬೈಲ್ ಪರಿಶೀಲಿಸಿಯೇ ಅಭ್ಯರ್ಥಿಗಳನ್ನು ಒಳಗೆ ಬಿಡಲಾಗಿದೆ. ಕೆಎಲ್‌ಇ ಕಾಲೇಜಿನಲ್ಲಿ ಅಭ್ಯರ್ಥಿಯೊಬ್ಬ ಮೊಬೈಲ್‌ಫೋನ್ ಇರಿಸಿಕೊಂಡಿದ್ದ ಬಗ್ಗೆ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ ಬಳಿಕ ಎಫ್‌ಐಆರ್ ದಾಖಲಿಸಲಾಗುವುದು. ಪರೀಕ್ಷೆಯಲ್ಲಿ ನಕಲು ಮಾಡದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. 5 ಮಾದರಿಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗುತ್ತದೆ. ಹೀಗಾಗಿ, ನಕಲು ಮಾಡುವುದು ಸುಲಭವಲ್ಲ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಸಿ.ಶ್ರೀನಿವಾಸ್ ತಿಳಿಸಿದ್ದಾರೆ.

ಐವರಿಗೆ 'ಮಡಿವಾಳ ಮಾಚಿದೇವ ಪ್ರಶಸ್ತಿ' ಪ್ರದಾನ

'ಮಡಿವಾಳ ಜನಾಂಗ ಪರಿಶಿಷ್ಟ ಜಾತಿಗೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ. ದೀಪಕ್ ಆಗ್ರಹಿಸಿದರು.

ಸಂಘವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮಹೇಂದ್ರ ಮುನ್ನೋತ್ ಜೈನ್, ಅಶೋಕ್ ದೊಮ್ಮಲೂರು, ಬಿ. ಶ್ರೀಧರ್, ಟಿ.ಎಂ. ಪ್ರಸಾದ್ ಹಾಗೂ ಮೈಲಾರಿ ಮಡಿವಾಳರ್ ಅವರಿಗೆ 'ಮಡಿವಾಳ ಮಾಚಿದೇವರ ಪ್ರಶಸ್ತಿ' ಪ್ರದಾನ ಮಾಡಲಾಯಿತು.

'ಮಡಿವಾಳ ಜನಾಂಗ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಪ್ರಗತಿ ಹೊಂದಬೇಕಾದರೆ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕು. ಈ ಬಗ್ಗೆ ದಶಕಗಳ ಹೋರಾಟದ ನಂತರ 2009–10ರಲ್ಲಿ ಡಾ. ಅನ್ನಪೂರ್ಣ ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು. ಜನಾಂಗದ ಸ್ಥಿತಿಗತಿಯ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ಮಾಡಿ, ವರದಿ ಸಲ್ಲಿಸಲಾಗಿತ್ತು. ಆದರೆ, ಈ ವರದಿಯನ್ನು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡದೆ ನನೆಗುದಿಗೆ ಬೀಳುವಂತೆ ಮಾಡಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಟಿ.ಎಂ.ಪ್ರಸಾದ್, ಅಶೋಕ್ ದೊಮ್ಮಲೂರು, ಬಿ.ಶ್ರೀಧರ್, ಮೈಲಾರಿ ಮಡಿವಾಳರ್ ಹಾಗೂ ಮಹೇಂದ್ರ ಮುನ್ನೋತ್ ಜೈನ್ ಅವರಿಗೆ 'ಮಡಿವಾಳ ಮಾಚಿದೇವರ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬಸವ ಮಾಚಿದೇವ ಸ್ವಾಮೀಜಿ, ಕಾಂಗ್ರೆಸ್ ಮುಖಂಡರಾದ ಕೆ.ವಿ.ಅಮರನಾಥ್, ರಾಜು ಎಂ.ತಲ್ಲೂರ್, ಜೆ.ಡಿ.ಗೋಪಾಲ್, ವಿ. ದೀಪಕ್ ಹಾಗೂ ಪದಾಧಿಕಾರಿಗಳಿದ್ದಾರೆ —ಪ್ರಜಾವಾಣಿ ಚಿತ್ರ

ಈ ಬಗ್ಗೆ ಅವರು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಸಚಿವರು, 'ಈ ವಿಚಾರವನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತರುತ್ತೇನೆ. ನಮ್ಮ ಸರ್ಕಾರವು ಮಡಿವಾಳ ಜನಾಂಗಕ್ಕೆ ಸ್ಪಂದಿಸಲಿದೆ' ಎಂದು ಭರವಸೆ ನೀಡಿದರು.

ಚಿತ್ರದುರ್ಗದ ಮಡಿವಾಳ ಮಠದ ಬಸವ ಮಾಚಿದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನೂ ಪ್ರದಾನ ಮಾಡಲಾಯಿತು.

ಪ್ರೇಮ ಪ್ರಕರಣ: ಪೆಟ್ರೋಲ್ ಸುರಿದು ಕೊಲೆಗೆ ಯತ್ನ

ರಾಮನಗರ: ಕುಟುಂಬದ ಯುವತಿಯನ್ನು ಪ್ರೀತಿಸಿದ್ದ ಯುವಕನನ್ನು ಅಪಹರಿಸಿದ ಆಕೆಯ ಸಂಬಂಧಿಕರು ಪೆಟ್ರೋಲ್ ಸುರಿದು ಕೊಲೆಗೆ ಯತ್ನಿಸಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಸಮೀಪದ ಕಣಿಮಿಣಿಕೆ ಟೋಲ್ ಬಳಿಯ ನಿರ್ಜನ ಪ್ರದೇಶದಲ್ಲಿ ಜುಲೈ 15ರಂದು ಈ ಘಟನೆ ನಡೆದಿದೆ. ತೀವ್ರ ಸುಟ್ಟಗಾಯಗಳಾಗಿರುವ ಬೆಂಗಳೂರಿನ ರಾಜರಾಜೇಶ್ವರಿ ನಗರದ ಶಶಾಂಕ್ (18) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ರಾಜರಾಜೇಶ್ವರಿ ನಗರದ ಎಸಿಎಸ್ ಕಾಲೇಜಿನಲ್ಲಿ ಕಂಪ್ಯೂಟರ್ ವಿಜ್ಞಾನ ಓದುತ್ತಿರುವ ಶಶಾಂಕ್, ಸಂಬಂಧಿಯೂ ಆದ ಮೈಸೂರಿನ ಯುವತಿಯನ್ನು ಪ್ರೀತಿಸುತ್ತಿದ್ದರು ಎಂದು ಕುಂಬಳಗೋಡು ಪೊಲೀಸರು ತಿಳಿಸಿದರು.

ಶನಿವಾರ ಕಾಲೇಜಿನಿಂದ ಮನೆಗೆ ಹೋಗಲು ಶಶಾಂಕ್ ಬಸ್‌ಗಾಗಿ ಕಾಯುತ್ತಿದ್ದಾಗ ಅಪಹರಿಸಿ, ಮೈ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ, ಪರಾರಿಯಾಗಿದ್ದರು. ನೆಲದ ಮೇಲೆ ಹೊರಳಾಡಿ ಬೆಂಕಿ ನಂದಿಸಿಕೊಂಡಿರುವ ಶಶಾಂಕ್ ಸ್ನೇಹಿತರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಈ ಸಂಬಂಧ ಮನು ಹಾಗೂ ಇತರ 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ನಾಗರಿಕ ಸೌಲಭ್ಯಗಳಿಗೆ ಮೀಸಲಿಟ್ಟಿದ್ದ 94 ನಿವೇಶನಗಳ ಮಾರ್ಪಾಡು

ನಿವೇಶನ ಪರಿವರ್ತನೆ: ಮರು ತನಿಖೆ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಗಳಿಗೆ (ಸಿ.ಎ) ಮೀಸಲಿಟ್ಟದ್ದ ಜಾಗವನ್ನು ವಸತಿ ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಿರುವ ಪ್ರಕರಣದ ಮರುತನಿಖೆಗೆ ಸರ್ಕಾರ ಮುಂದಾಗಿದೆ.

ಹಿಂದಿನ ಸರ್ಕಾರದ ಅವಧಿಯಲ್ಲೂ ತನಿಖೆ ನಡೆದಿದ್ದು, ಅಕ್ರಮ ಎಸಗಿರುವುದು ಬಯಲಾಗಿತ್ತು. ಬಿಡಿಎಗೆ ಆಗಿರುವ ನಷ್ಟ ಹಾಗೂ ಅಧಿಕಾರಿಗಳ ಪಾತ್ರದ ಬಗ್ಗೆ ಮತ್ತೆ ತನಿಖೆ ನಡೆಸಲು ಈಗಿನ ಕಾಂಗ್ರೆಸ್ ಸರ್ಕಾರವು ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ. ಸಿ.ಎ ನಿವೇಶನಗಳನ್ನು ಪರಿವರ್ತಿಸಿದ್ದ ಬಿಡಿಎ ಅಧಿಕಾರಿಗಳು ಅವುಗಳನ್ನು ಮಾರಾಟ ಮಾಡಿ, ಪ್ರಾಧಿಕಾರಕ್ಕೆ ವಂಚಿಸಿರುವ ಪ್ರಕರಣ ಇದಾಗಿದೆ.

ಸಿ.ಎ ನಿವೇಶನಗಳನ್ನು ಶಾಲೆ, ಕಾಲೇಜು ನಿರ್ಮಾಣ, ಆಸ್ಪತ್ರೆ ನಿರ್ಮಾಣ, ಬಿಡಿಎ ಕಾಂಪ್ಲೆಕ್ಸ್ ಸೇರಿದಂತೆ ಸಾರ್ವಜನಿಕ ಉಪಯೋಗಕ್ಕೆ ಮೀಸಲಿಡಲಾಗುತ್ತಿದೆ. ಬಿಡಿಎ ಈ ಜಾಗವನ್ನು ಗುತ್ತಿಗೆ ರೂಪದಲ್ಲಿ ನೀಡುತ್ತದೆ. ಇದರಿಂದ ಬಿಡಿಎಗೆ ಆದಾಯ ಬರುತ್ತದೆ. ಆದರೆ, ಕೆಂಪೇಗೌಡ ಬಡಾವಣೆಯಲ್ಲಿ ಇಂತಹ

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಡೆಯುತ್ತಿರುವ ಕಾಮಗಾರಿ

ನಿವೇಶನಗಳನ್ನೂ ಪರಿವರ್ತಿಸಿ ಮಾರಾಟ ಮಾಡಲಾಗಿದೆ. ಕೆಲವು ಕಡೆ ರೈತರಿಗೆ ಹಂಚಿಕೆ ಮಾಡಿದ್ದರೆ, ಮತ್ತೆ ಕೆಲವೆಡೆ ನಿವೇಶನ ಹರಾಜು ಹಾಕಲಾಗಿದೆ ಎಂದು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಆರೋಪಿಸಿದೆ.

2014ರಲ್ಲಿ ಬಡಾವಣೆ ನಿರ್ಮಾಣಕ್ಕೆ 4,043ಎಕರೆ ಭೂಸ್ವಾಧೀನದ ಪ್ರಕ್ರಿಯೆ ಆರಂಭಗೊಂಡಿತ್ತು. ನಿಯಮದಂತೆ 147 ಸಿ.ಎ ನಿವೇಶನಗಳಿಗೆ ಒಟ್ಟು 387 ಎಕರೆ 20 ಗುಂಟೆ ಜಾಗ ಮೀಸಲಿಡಲು ನಿರ್ಧರಿಸಲಾಗಿತ್ತು. ಆದರೆ, ನಾನಾ ಕಾರಣಕ್ಕೆ ಭೂಸ್ವಾಧೀನ ವಿಳಂಬವಾಗಿದೆ. ಪ್ರಸ್ತುತ ಸ್ವಾಧೀನ ಪಡಿಸಿಕೊಂಡಿರುವ 2,694 ಎಕರೆ 26 ಗುಂಟೆಯಲ್ಲಿ 177 ಸಿ.ಎ (232 ಎಕರೆ) ನಿವೇಶನ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಆ ಪೈಕಿ 150 ಎಕರೆಯಲ್ಲಿ 107 ಸಿ.ಎ ನಿವೇಶನ ರೂಪಿಸಲಾಗಿದೆ. ಅದರಲ್ಲಿ ಅಕ್ರಮ ನಡೆದಿರುವುದು ಪತ್ತೆಯಾಗಿದೆ.

'ಬಡಾವಣೆ ನಿರ್ಮಿಸುವ ವೇಳೆ ಒಳಚರಂಡಿ, ಸಂಸ್ಕರಣಾ ಘಟಕ, ರಸ್ತೆ, ಉದ್ಯಾನ, ವಾಣಿಜ್ಯ ನಿವೇಶನ, ಸ್ಮಶಾನ, ವಸತಿ ನಿವೇಶನಗಳಿಗಾಗಿ 64 ಎಕರೆಯಲ್ಲಿ 94 ನಿವೇಶನ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಬಿಡಿಎ ಅಧಿಕಾರಿಗಳು ಸುಳ್ಳು ಮಾಹಿತಿ ನೀಡಿದ್ದಾರೆ. ಶಾಸಕ ಎಸ್.ಸುರೇಶ್ ಕುಮಾರ್ ಅವರು ನಿವೇಶನ ಪರಿವರ್ತನೆ ಕುರಿತು ಕೇಳಿದ್ದ ಮಾಹಿತಿಗೂ ತಪ್ಪು ಮಾಹಿತಿ ನೀಡಿದ್ದಾರೆ. ವಾಸ್ತವದಲ್ಲಿ ಇದಕ್ಕಿಂತಲೂ ಹೆಚ್ಚಿನ ಪ್ರದೇಶದಲ್ಲಿ ಸಿ.ಎ ನಿವೇಶನ ಪರಿವರ್ತಿಸಿ ಮಾರಾಟ ಮಾಡಲಾಗಿದೆ. ಸಮಗ್ರ ತನಿಖೆ ನಡೆದರೆ ವಾಸ್ತವ ಸ್ಥಿತಿ ತಿಳಿಯಲಿದೆ' ಎಂದು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಸೂರ್ಯಕಿರಣ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದ್ದ ತನಿಖೆಯಲ್ಲಿ, ಸಾರ್ವಜನಿಕ ಪ್ರಕಟಣೆ ನೀಡದೆ 12 ಸಿ.ಎ ನಿವೇಶನಗಳನ್ನು ಪರಿವರ್ತಿಸಿರುವುದು ಪತ್ತೆಯಾಗಿತ್ತು. ವಾಣಿಜ್ಯ, ದೊಡ್ಡ ವಸತಿ ಸಂಕೀರ್ಣಗಳಿಗೆ ಮೀಸಲಾಗಿದ್ದ ಪ್ರದೇಶವನ್ನು ಸಾಮಾನ್ಯ ನಿವೇಶನಗಳನ್ನಾಗಿ ಪರಿವರ್ತಿಸಲಾಗಿತ್ತು. ಮಾಗಡಿ ರಸ್ತೆ, ಮೈಸೂರು ರಸ್ತೆ ಸಂಪರ್ಕಿಸುವ 100 ಅಡಿ ರಸ್ತೆಗೆ ಹೊಂದಿಕೊಂಡಂತೆಯೇ ಈ ಅಕ್ರಮ ಎಸಗಿದ್ದು ಕಂಡುಬಂದಿತ್ತು.

ಬಡಾವಣೆ ವೇದಿಕೆಯ ವಾದ ಏನು?

- ನಗರ ಯೋಜನೆ ಮಾನದಂಡದ ಪ್ರಕಾರ ಬಡಾವಣೆ ನಿರ್ಮಿಸುವಾಗ ಒಟ್ಟು ಸ್ವಾಧೀನಪಡಿಸಿಕೊಳ್ಳುವ ಭೂಮಿಯಲ್ಲಿ ಶೇ 15ರಷ್ಟು ಸಿ.ಎ ನಿವೇಶನ ಹಾಗೂ ಉದ್ಯಾನಕ್ಕೆ ಜಾಗ ಕಾಯ್ದಿರಿಸಬೇಕು.
- ಬಡಾವಣೆಯ ಎಲ್ಲ 9 ಬ್ಲಾಕ್‌ಗಳಲ್ಲೂ ಸಿ.ಎ ಮತ್ತು ಉದ್ಯಾನ ಅತ್ಯವಶ್ಯಕ. ಇದು ಬಡಾವಣೆಯ ಸಮತೋಲಿತ ಬೆಳವಣಿಗೆಗೆ ಪೂರಕವಾಗಿರುತ್ತದೆ.
- 2,694 ಎಕರೆ ಪ್ರದೇಶದಲ್ಲಿ ಈಗಾಗಲೇ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುವುದರಿಂದ ಸಿ.ಎ ಮತ್ತು ಉದ್ಯಾನಕ್ಕೆ ಆದ್ಯತೆ ಕೊಡಲು ಸಾಧ್ಯವೇ ಇಲ್ಲ.

ಸಿಎ ನಿವೇಶನ ಪರಿವರ್ತನೆಯಿಂದ ಬಿಡಿಎಗೆ ಎಷ್ಟು ನಷ್ಟವಾಗಿದೆ, ಪ್ರಕರಣದಲ್ಲಿ ಯಾವ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂಬ ಬಗ್ಗೆ ಕುರಿತು ತನಿಖೆ ನಡೆಸಲಾಗುವುದು

ಡಿ.ಕೆ.ಶಿವಕುಮಾರ್, ಬೆಂಗಳೂರು ನಗರಾಭಿವೃದ್ಧಿ ಸಚಿವ

ಪರಿವರ್ತನೆ ಮಾಡಲಾದ ಸಿ.ಎ ನಿವೇಶನಗಳು

ಬ್ಲಾಕ್	ನಿವೇಶನಗಳ ಸಂಖ್ಯೆ	ವಿಸ್ತೀರ್ಣ (ಎಕರೆಯಲ್ಲಿ)
1	13	10
2	7	8
3	10	3
4	10	4
5	9	2
6	10	2
7	9	6
8	13	18
9	13	7

(ಬಿಡಿಎ ಮಾಹಿತಿ)

ಸುದ್ದಿ 2 ನಿಮಿಷ

₹4.5 ಕೋಟಿ ಮೌಲ್ಯದ ಸರ್ಕಾರಿ ಜಮೀನು ವಶ: ಜಿಲ್ಲಾಧಿಕಾರಿ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿ ಮಾಡಿಕೊಂಡಿದ್ದ ₹4.5 ಕೋಟಿ ಮೌಲ್ಯದ ಸರ್ಕಾರಿ ಜಮೀನನ್ನು ಜಿಲ್ಲಾಡಳಿತ ವಶಕ್ಕೆ ಪಡೆದಿದೆ.

'ನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಕೆರೆ, ಕುಂಟೆ, ಗೋಮಾಳ, ಸ್ಮಶಾನ ಹಾಗೂ ರಾಜಕಾಲುವೆ ಒತ್ತುವರಿ ಆಗಿತ್ತು. ಒಟ್ಟು 1 ಎಕರೆ 13 ಗುಂಟೆ ಒತ್ತುವರಿ ತೆರವು ಮಾಡಲಾಗಿದೆ' ಎಂದು ಜಿಲ್ಲಾಧಿಕಾರಿ ಕೆ.ಎ.ದಯಾನಂದ ಮಾಹಿತಿ ನೀಡಿದ್ದಾರೆ.

ಯಲಹಂಕ ತಾಲ್ಲೂಕಿನಲ್ಲಿ ಸರ್ಕಾರಿ ಗೋಮಾಳ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಬೀಳು ಜಮೀನು, ಬೆಂಗಳೂರು ಉತ್ತರ, ಆನೇಕಲ್ ತಾಲ್ಲೂಕಿನಲ್ಲಿ ಖರಾಬು ಜಮೀನು2, ಯಲಹಂಕ ಹಾಗೂ ಆನೇಕಲ್‌ನಲ್ಲಿ ಸ್ಮಶಾನ ಜಮೀನು ಒತ್ತುವರಿ ಆಗಿತ್ತು ಎಂದು ವಿವರಿಸಿದ್ದಾರೆ.

ಪ್ರಕರಣ ಇತ್ಯರ್ಥಕ್ಕೆ ಸಹಕಾರ ಅಗತ್ಯ

ಬೆಂಗಳೂರು: 'ಸರ್ಕಾರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಗೊಳಿಸಲು ಸರ್ಕಾರಿ ವಕೀಲರು ಸಹಕರಿಸಬೇಕು' ಎಂದು ಸರ್ಕಾರದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ತಿಳಿಸಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಅಡ್ವೋಕೇಟ್ ಜನರಲ್ ಕಚೇರಿ, ಕಾನೂನು ಇಲಾಖೆ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಹಮ್ಮಿಕೊಂಡಿದ್ದ 'ಕರ್ನಾಟಕ ರಾಜ್ಯ ವಿವಾದ ನಿರ್ಣಯ ನೀತಿ-2021' ಕಾರ್ಯಾಗಾರದಲ್ಲಿ ಮಾತನಾಡಿದರು.

ಸರ್ಕಾರದ ಪ್ರಕರಣಗಳ ಸಂಖ್ಯೆ ಅಧಿಕವಿದೆ. ಹೆಚ್ಚು ಆಸಕ್ತಿ ವಹಿಸಿ ಪ್ರಕರಣಗಳನ್ನು ವಿಲೇ ಮಾಡಬೇಕು. ಇದರಿಂದ ನೊಂದವರಿಗೆ ನ್ಯಾಯ ಸಿಗುತ್ತದೆ. ಜೊತೆಗೆ ನ್ಯಾಯಾಲಯದಲ್ಲಿ ಪ್ರಕರಣಗಳ ಸಂಖ್ಯೆ ಕಡಿಮೆ ಯಾಗುತ್ತದೆ ಎಂದು ವಿವರಿಸಿದರು.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪ್ರಭಾವತಿ ಎಂ. ಹಿರೇಮಠ್, 'ಸರ್ಕಾರದ ಪರ ಅಥವಾ ವಿರುದ್ಧದ ಎಲ್ಲ ವ್ಯಾಜ್ಯಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಬೇಕು' ಎಂದು ಸಲಹೆ ನೀಡಿದರು.

ಸರ್ಕಾರದ ವಿಶೇಷ ಕಾರ್ಯದರ್ಶಿ, ಅಭಿಯೋಗ ಹಾಗೂ ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕ ಎಚ್.ಕೆ. ಜಗದೀಶ್ ಇದ್ದರು. ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ನಿರ್ದೇಶಕ ಕೆ.ದ್ವಾರಕನಾಥ್ ಬಾಬು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ರೇವಯ್ಯ ಒಡೆಯರ್ ನಿರೂಪಿಸಿದರು.

ಸಂಭ್ರಮಕ್ಕೆ ಸಾಕ್ಷಿಯಾದ 'ಸಮ್ಮಿಲನ'

ನವೋದಯ ವಿದ್ಯಾಲಯ: 5,000ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಯಲಹಂಕ: 'ಶೈಕ್ಷಣಿಕ ಕ್ಷೇತ್ರದಲ್ಲಿ ನವೋದಯ ವಿದ್ಯಾಲಯವು ಮಹತ್ವದ ಮೈಲುಗಲ್ಲು ಸಾಧಿಸಿದೆ. ಇಲ್ಲಿ ಕಲಿತಿರುವ ಹಲವಾರು ವಿದ್ಯಾರ್ಥಿಗಳು ದೇಶ ಹಾಗೂ ವಿದೇಶಗಳಲ್ಲಿ ಹಲವು ರಂಗಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ' ಎಂದು ನವೋದಯ ವಿದ್ಯಾಲಯದ ನೋಯ್ಡಾ ವಲಯದ ಆಯುಕ್ತ ವಿನಾಯಕ್ ಗರ್ಗ್ ಹೇಳಿದರು.

ನವೋದಯ ವಿದ್ಯಾಲಯ ಸಮಿತಿಯ ಹೈದರಾಬಾದ್ ವಲಯದ ವತಿಯಿಂದ ಬಾಗಲೂರಿನಲ್ಲಿರುವ ಜವಾಹರ್ ನವೋದಯ ವಿದ್ಯಾಲಯದಲ್ಲಿ ಆಯೋಜಿಸಿದ್ದ ಪ್ರಾದೇಶಿಕ ಮಟ್ಟದ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೈದರಾಬಾದ್ ವಲಯದ ಉಪ ಆಯುಕ್ತ ಟಿ.ಗೋಪಾಲಕೃಷ್ಣ ಅವರು, 'ಹೈದರಾಬಾದ್ ವಲಯದ ವಿದ್ಯಾಲಯಗಳು ಅತ್ಯುತ್ತಮ ಸಾಧನೆ ಮಾಡಿವೆ. ಕರ್ನಾಟಕ ದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವು ಹೆಚ್ಚು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ ಎಂದು ತಿಳಿಸಿದರು.

ಹಳೆಯ ವಿದ್ಯಾರ್ಥಿ ಹಾಗೂ ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಅವರು, 'ನವೋದಯ ವಿದ್ಯಾಲಯದ ವಿದ್ಯಾರ್ಥಿಗಳು ಎಲ್ಲ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿನ ವಿದ್ಯಾರ್ಥಿಯಾಗಿದ್ದು ನನ್ನ ಪುಣ್ಯ' ಎಂದು ನೆನಪು ಮಾಡಿಕೊಂಡರು.

ಬಾಗಲೂರು ಗ್ರಾ.ಪಂ ಮಾಜಿ ಅಧ್ಯಕ್ಷ ಜೆ.ಮುನೇಗೌಡ, ಹೈದರಾಬಾದ್ ವಲಯದ ಸಹಾಯಕ ಆಯುಕ್ತ ಅಭಿಜಿತ್ ಬೇರ, ಜಂಟಿ ಪೊಲೀಸ್ ಆಯುಕ್ತ (ಅಪರಾಧ) ಶರಣಪ್ಪ, ವಾಣಿಜ್ಯ ತೆರಿಗೆ ಇಲಾಖೆ ಉಪಆಯುಕ್ತ ಕೆ.ಕಿರಣ್ ಕುಮಾರ್, ಪ್ರಾಂಶುಪಾಲ ಎಸ್.ಕಣ್ಣನ್ ಮಾತನಾಡಿದರು.

ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಲಕ್ಷದ್ವೀಪ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ 77 ಜವಾಹರ್ ನವೋದಯ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದ 5000ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕೃಷಿ, ಶಿಕ್ಷಣ, ಕೌಶಲ ಅಭಿವೃದ್ಧಿ ತರಬೇತಿ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ 56 ಮಳಿಗೆಗಳಿದ್ದವು. ನವೋದಯ ವಿದ್ಯಾಲಯ ಹಾಗೂ ಲಯನ್ಸ್ ರಕ್ತನಿಧಿ, ಮಹಾವೀರ್ ಜೈನ್ ಆಸ್ಪತ್ರೆಯ ಸಹಯೋಗದೊಂದಿಗೆ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ 104 ಯುನಿಟ್ ರಕ್ತ ಸಂಗ್ರಹಿಸಲಾಯಿತು. ಹಳೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಬಾಗಲೂರು ಜವಾಹರ್ ನವೋದಯ ವಿದ್ಯಾಲಯದಲ್ಲಿ ಆಯೋಜಿಸಿದ್ದ ಪ್ರಾದೇಶಿಕ ಮಟ್ಟದ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಸಮಾರಂಭವನ್ನು ನವೋದಯ ವಿದ್ಯಾಲಯದ ನೋಯ್ಡಾ ವಲಯದ ಆಯುಕ್ತ ವಿನಾಯಕ್ ಗರ್ಗ್ ಉದ್ಘಾಟಿಸಿದರು. ಬಾಗಲೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜೆ. ಮುನೇಗೌಡ, ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್, ಹೈದರಾಬಾದ್ ವಲಯದ ಉಪಆಯುಕ್ತ ಟಿ. ಗೋಪಾಲಕೃಷ್ಣ, ಸಹಾಯಕ ಆಯುಕ್ತ ಅಭಿಜಿತ್ ಬೇರ, ಪ್ರಾಂಶುಪಾಲ ಎಸ್. ಕಣ್ಣನ್ ಇದ್ದರು

ನಗರದಲ್ಲಿ ಭಾನುವಾರ ಸಂಗೀತ ರತ್ನ ವಿದ್ಯಾಲಯ ಹಾಗೂ ಟಿ. ಉದಯ ಶಂಕರ್ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಯಕಿಯರಾದ ಎಲ್.ಆರ್. ಈಶ್ವರಿ ಮತ್ತು ಪಿ.ಸುಶೀಲ ಅವರನ್ನು ಸನ್ಮಾನಿಸಲಾಯಿತು. (ನಿಂತವರು ಎಡದಿಂದ) ಡಿಎಸ್ ಮ್ಯಾಕ್ಸ್ ಮುಖ್ಯಸ್ಥ ದಯಾನಂದ್, ರಮಣಶ್ರೀ ಗ್ರೂಪ್ ಸಂಸ್ಥಾಪಕ ಎಸ್. ಷಡಕ್ಷರಿ, ನಟಿ ಭಾರತಿ ವಿಷ್ಣುವರ್ಧನ್, ಪ್ರತಿಷ್ಠಾನದ ಸಂಚಾಲಕ ಕೆ.ವಿ.ನಾಗರಾಜ ಮೂರ್ತಿ, ನಟಿ ಬಿ.ಸರೋಜಾ ದೇವಿ, ಪ್ರತಿಷ್ಠಾನದ ಅಧ್ಯಕ್ಷ ಸಿ.ಸೋಮಶೇಖರ್, ಸಾಹಿತಿ ದೊಡ್ಡರಂಗೇಗೌಡ ಇದ್ದರು ಪ್ರಜಾವಾಣಿ ಚಿತ್ರ

ಕೇದಾರನಾಥಕ್ಕೆ ಹೋಗಿದ್ದ ಯಾತ್ರಿ ಸಾವು

ಮಾಗಡಿ: ಪಟ್ಟಣದಿಂದ ಉತ್ತರ ಭಾರತದ ಪುಣ್ಯಕ್ಷೇತ್ರಗಳಿಗೆ ಯಾತ್ರೆ ಹೋಗಿದ್ದ ಹೊಸಪೇಟೆ ನಿವಾಸಿ ಎಚ್. ಆರ್.ಬ್ಯಾಟಪ್ಪ (62) ಕೇದಾರನಾಥದಲ್ಲಿ ಭಾನುವಾರ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಮೃತರಿಗೆ ಮೂವರು ಪುತ್ರಿಯರು, ಪತ್ನಿ ಇದ್ದಾರೆ.

ಶನಿವಾರ ರಾತ್ರಿ ಕೇದಾರನಾಥ ದೇವಾಲಯದ ಬಳಿ ವಸತಿಗೃಹದಲ್ಲಿ ಇದ್ದಾಗ ಎದೆನೋವು ಕಾಣಿಸಿಕೊಂಡಿದ್ದು ಮುಂಜಾನೆ 4:30ರ ಸುಮಾರಿನಲ್ಲಿ ಮೃತಪಟ್ಟಿದ್ದಾರೆ ಎಂದು ಜತೆಯಲ್ಲಿದ್ದ ಯಾತ್ರಿ ಸಿದ್ದೇಗೌಡ, ನರಸಿಂಹ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

'ವಿದ್ಯಾಪೀಠ ಮುಖ್ಯರಸ್ತೆ ಸರಿಪಡಿಸಿ'

ವಿದ್ಯಾಪೀಠ ಮುಖ್ಯರಸ್ತೆ ಹಾಳಾಗಿರುವುದು

ಕತ್ರಿಗುಪ್ಪೆಯಿಂದ ಬಸವನಗುಡಿಗೆ ಸಂಪರ್ಕ ಕಲ್ಪಿಸುವ ವಿದ್ಯಾಪೀಠ ಮುಖ್ಯರಸ್ತೆಯು ಸಂಪೂರ್ಣ ಕಿತ್ತು ಹೋಗಿದೆ. ಇಲ್ಲಿ ಸಂಚರಿಸಲು ದ್ವಿಚಕ್ರ ವಾಹನ ಸವಾರರು ಪರದಾಟ ನಡೆಸಬೇಕಾಗಿದೆ. ವಿಧಾನಸಭೆ ಚುನಾವಣೆ ವೇಳೆ ಈ ರಸ್ತೆಯ ಕಾಮಗಾರಿಯನ್ನು ಬಿಬಿಎಂಪಿ ಕೈಗೆತ್ತಿಕೊಂಡಿತ್ತು. ಕತ್ರಿಗುಪ್ಪೆ ವೃತ್ತದಿಂದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ವರೆಗೆ ಡಾಂಬರೀಕರಣ ಮಾಡಿ, ಅರ್ಧಕ್ಕೆ ಬಿಡಲಾಗಿದೆ. ಚುನಾವಣೆ ಬಳಿಕ ಈ ಕಾಮಗಾರಿಯನ್ನು ಪೂರ್ಣಗೊಳಿಸಲಿಲ್ಲ. ರಸ್ತೆ ಹಾಳಾಗಿದ್ದು, ಗುಂಡಿಗಳು ಆವರಿಸಿವೆ. ಮಳೆ ಬಂದಲ್ಲಿ ಗುಂಡಿಗಳಲ್ಲಿ ನೀರು ತುಂಬಿ, ಅಪಾಯ ತಂದೊಡ್ಡುವ ಸಾಧ್ಯತೆ ಇರುತ್ತದೆ. ಕೂಡಲೇ ಇನ್ನುಳಿದ ಕಾಮಗಾರಿಯನ್ನು ಕೈಗೆತ್ತಿಕೊಂಡು, ಪೂರ್ಣಗೊಳಿಸಬೇಕು.

ಮಂಜುನಾಥ್, ವಿದ್ಯಾಪೀಠ ನಿವಾಸಿ

'ಗುಂಡಿಗಳಿಂದ ಕೂಡಿದ ರಸ್ತೆ'

ರಾಮಕೃಷ್ಣ ಆಶ್ರಮದ ವೃತ್ತದ ಬಳಿ ಬುಲ್ ಟೆಂಪಲ್ ರಸ್ತೆ ಗುಂಡಿಗಳಿಂದ ಆವೃತ್ತವಾಗಿದೆ. ಗಾಂಧಿ ಬಜಾರ್ ರಸ್ತೆ ಸೇರಿ ವಿವಿಧ ಕಾಮಗಾರಿಗಳು ನಡೆಯುತ್ತಿದೆ. ಬುಲ್ ಟೆಂಪಲ್ ರಸ್ತೆಗೆ ಸಂಪರ್ಕ ಕಲ್ಪಿಸುವ ಸ್ಥಳದಲ್ಲೂ ಅಗೆದು ಹಾಗೇ ಬಿಡಲಾಗಿದೆ. ಇದರಿಂದಾಗಿ ದ್ವಿಚಕ್ರ ವಾಹನ ಸವಾರರು ಇಲ್ಲಿ ಬಿದ್ದು, ಗಾಯಗೊಂಡ ಘಟನೆಗಳೂ ನಡೆದಿವೆ. ಇಷ್ಟಾದರೂ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ನಗರದ ಹೃದಯ ಭಾಗದಲ್ಲಿರುವ ರಸ್ತೆಯೇ ಈ ಸ್ಥಿತಿಯಲ್ಲಿದ್ದರೂ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿ, ಸಮಸ್ಯೆ ನಿವಾರಿಸದಿರುವುದು ವಿಪರ್ಯಾಸ.

ರಾಘವೇಂದ್ರ, ಬಸವನಗುಡಿ



ಬುಲ್ ಟೆಂಪಲ್ ರಸ್ತೆ ಗುಂಡಿ ಬಿದ್ದಿರುವುದು

ಜಯಪ್ರಕಾಶ್ ನಾರಾಯಣ್ ಉದ್ಯಾನದಲ್ಲಿ ನಾಯಿಗಳ ಗುಂಪು

'ನಾಯಿ ಹಾವಳಿ ನಿಯಂತ್ರಿಸಿ'

ಮತ್ತಿಕೆರೆಯ ಜಯಪ್ರಕಾಶ್ ನಾರಾಯಣ್ ಉದ್ಯಾನದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ವಾಯುವಿಹಾರಿಗಳಿಗೆ ಇಲ್ಲಿ ಸಂಚರಿಸುವುದು ಕಷ್ಟವಾಗುತ್ತಿದೆ. ಕೆಲ ಶ್ವಾನ ಪ್ರೇಮಿಗಳೂ ವಾಯು ವಿಹಾರಕ್ಕೆ ನಾಯಿಗಳನ್ನೂ ತರುತಿದ್ದಾರೆ. ಇದರಿಂದಾಗಿ ಭಯದಲ್ಲಿ ಹೆಜ್ಜೆ ಹಾಕಬೇಕಾಗಿದೆ. ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಸಮಸ್ಯೆ ಎದುರಿಸುತ್ತಿದ್ದಾರೆ. ದಿನದಿಂದ ದಿನಕ್ಕೆ ನಾಯಿಗಳ ಸಂಖ್ಯೆ ಹೆಚ್ಚುತ್ತಿದೆ. ಹೀಗೆ ಮುಂದುವರಿದಲ್ಲಿ ಇದು ನಾಯಿಗಳ ಉದ್ಯಾನವಾಗಿ ಮಾರ್ಪಡಲಿದೆ. ನಾಯಿ ಹಾವಳಿ ತಡೆಗೆ ಬಿಬಿಎಂಪಿ ಕ್ರಮ ಕೈಗೊಳ್ಳಬೇಕು.

ಗುರುರಾಜ್ ಡಿ., ಮತ್ತಿಕೆರೆ

ಮ್ಯಾನ್‌ಹೋಲ್ ಸಮಸ್ಯೆಗೆ ಮುಕ್ತಿ

ವರದಿ ಪರಿಣಾಮ

ವಿಜಯನಗರ ವಿಧಾನಸಭಾ ಕ್ಷೇತ್ರದ ಕೆಂಪಾಪುರ ಅಗ್ರಹಾರ ವಾರ್ಡ್ ನಂಬರ್ 122ರ 8ನೇ ಅಡ್ಡರಸ್ತೆಯ ಗಂಗಾ ಲೂಮ್ಸ್ ಸಮೀಪದ ರಸ್ತೆಯಲ್ಲಿ ಮ್ಯಾನ್‌ಹೋಲ್ ಬಾಯ್ತೆರೆದಿತ್ತು. ಈ ಬಗ್ಗೆ 'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ವರದಿ ಪ್ರಕಟವಾದ ಬಳಿಕ ಕ್ರಮ ಕೈಗೊಂಡ ಅಧಿಕಾರಿಗಳು, ಮ್ಯಾನ್ ಹೋಲ್ ಮುಚ್ಚಿಸಿದ್ದಾರೆ.

ಮ್ಯಾನ್‌ಹೋಲ್ ಮುಚ್ಚಿರುವುದು

ಜಯದೇವ: ಮಂಜುನಾಥ್ ಸೇವಾವಧಿ 19ಕ್ಕೆ ಮುಕ್ತಾಯ

ಪ್ರಜಾವಾಣಿ ವಾರ್ತೆ

ಡಾ.ಸಿ.ಎನ್. ಮಂಜುನಾಥ್

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರ ಸೇವಾವಧಿ ಇದೇ 19ಕ್ಕೆ ಮುಕ್ತಾಯಗೊಳ್ಳಲಿದೆ.

ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರೂ ಆದ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದಲ್ಲಿ ಇದೇ ಸೋಮವಾರ ಸಭೆ ನಡೆಯಲಿದ್ದು, ಮಂಜುನಾಥ್ ಅವರ ಸೇವಾವಧಿ ಮುಂದುವರಿಕೆ ಅಥವಾ ಹೊಸ ನಿರ್ದೇಶಕರ ನೇಮಕದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

2007ರಿಂದ ಜಯದೇವ ಆಸ್ಪತ್ರೆಯ ನಿರ್ದೇಶಕರಾಗಿ ಡಾ.ಸಿ. ಎನ್. ಮಂಜುನಾಥ್ ಕಾರ್ಯನಿರ್ವಹಿಸಿದ್ದಾರೆ. ಅವರ ಸೇವಾವಧಿ ಕಳೆದ ವರ್ಷವೇ ಮುಕ್ತಾಯಗೊಂಡಿತ್ತು. ಆಸ್ಪತ್ರೆ ಸಿಬ್ಬಂದಿ ಒತ್ತಾಯದ ಮೇರೆಗೆ ಒಂದು ವರ್ಷ ಮುಂದುವರಿಸಲಾಗಿತ್ತು.

ನಗರದಲ್ಲಿ ಇಂದು

ಭೀಮನ ಅಮಾವಾಸ್ಯೆ ಪ್ರಯುಕ್ತ ದೊಡ್ಡಮಾವಳ್ಳಿ ಬನಶಂಕರಿ ದೇವಿಗೆ ವಿಶೇಷ ಪೂಜೆ: ಚಂಡಿಕಾ ಹೋಮ, ಆಯೋಜನೆ: ಬನಶಂಕರಿ ದೇವಸ್ಥಾನದ ಸೇವಾ ಟ್ರಸ್ಟ್, ದೊಡ್ಡಮಾವಳ್ಳಿ, ಬೆಳಿಗ್ಗೆ 6.30ರಿಂದ

ನಬಾರ್ಡ್ 42ನೇ ಸಂಸ್ಥಾಪನಾ ದಿನಾಚರಣೆ ಮತ್ತು ರೈತ ಉತ್ಪಾದಕ ಸಂಸ್ಥೆ ಹಾಗೂ ರಾಗಿ ಬೆಳೆ ಉತ್ಪಾದಕ ಸಂಸ್ಥೆಗಳಿಗೆ ಸನ್ಮಾನ: ಮುಖ್ಯ ಅತಿಥಿಗಳು: ಇ.ವಿ.ರಮಣ ರೆಡ್ಡಿ, ಟಿ.ಸುರೇಶ್, ಪಿ.ಎನ್.ರಘುನಾಥ್, ಎಸ್.ವಿ.ಸುರೇಶ್, ಮುರಳಿ ಕೃಷ್ಣ, ಆಯೋಜನೆ ಹಾಗೂ ಸ್ಥಳ: ನಬಾರ್ಡ್ ಸಭಾಂಗಣ, ನಬಾರ್ಡ್ ಟವರ್ಸ್, ಕೆ.ಜಿ. ರಸ್ತೆ, ಬೆಳಿಗ್ಗೆ 11.30

ರಮಣರೆಡ್ಡಿ

ನಿಧನ ವಾರ್ತೆ

ಬಿ.ಎಂ.ರವಿಶಂಕರ್

ರವಿಶಂಕರ್

ಬೆಂಗಳೂರು: ರಾಜ್ಯ ಪೊಲೀಸ್ ಮಹಾ ನಿರ್ದೇಶಕರ (ಡಿಜಿ–ಐಜಿಪಿ) ಪ್ರಧಾನ ಕಚೇರಿಯಲ್ಲಿ ನಿಯೋಜಿತರಾಗಿದ್ದ ಹೆಡ್ ಕಾನ್‌ಸ್ಟೆಬಲ್ ಬಿ.ಎಂ.ರವಿಶಂಕರ್ (49) ಅವರು ಹೃದಯಾಘಾತದಿಂದಾಗಿ ಭಾನುವಾರ ನಿಧನ ಹೊಂದಿದರು.

ಹೊಸಕೋಟೆ ಬಳಿಯ ಬೆನಕನಹಳ್ಳಿಯ ರವಿಶಂಕರ್ ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಕೆಲಸ ಮುಗಿಸಿ ಮನೆಗೆ ಹೊರಟಿದ್ದ ವೇಳೆ ಎದೆನೋವು ಕಾಣಿಸಿಕೊಂಡಿತ್ತು ಎಂದು ಸಹೋದ್ಯೋಗಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

PART TIME Job SMS Typing Work Laptop, Sellphone, Simcard Company Provide (Fee 1099): 6395537135/ 6397285477

Wanted

LOOKING FOR Telecallers for Insurance/ Car Loan Process /Field Executive Basaveshwarnagar/ Peenya/ Kengeri: 9611450180

BUSINESS

Business Offers

Finance

WE INVITE exclusively retired -central, state, public, private sector, bankers; VRS, housewives to spare time and earn fixed salary, PF and medical coverage (ESI). Call 9480030569.

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

REAL ESTATE SELLING

Residential/ Commercial

Multiple Locations

PROPERTIES IN Mangalore 44.50cents Pandeshwara percents 6,50,000/- .14.50cents commercial Kinnigoli percents 4,50,000/-. Buying, Selling, Investment. Contact: 9535328233. Mail : land.business.construction@gmail.com

PERSONAL

Change of Name

CHANGE OF NAME
I, AMMINI M and AMMINI AMMA dependent (Mother) of Balakrishnan M, residing at Moochitharakkal House, Pulappatta, Palakkad, Kerala-678632. that both above names AMMINI M and AMMINI AMMA pertains to one andthe same person only. vide affidavit dated 10.07.2023 before notary Chandrakala, Bangalore, and changed my name from AMMINI M to AMMINI AMMA for all future purposes.

VIJAYALAXMI ISHWARAPPA KARISAKRANNAVAR, Wife/o ISHWARAPPA KARISAKRANNAVAR, Vill - Kadadi, Gadag, Karnataka changed name VITTAWWA NIRWANEPPA BHOVI to VIJAYALAXMI ISHWARAPPA KARISAKRANNAVAR, Affidavit Certificate No: IN-KA27117942489011V, 14/07/2023, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD | ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
conditions apply*
@ 803/-* Per Sqcm Single Column
@ 825/-* Per Sqcm Multi Column
For more information Contact:
9845114560 : 9731810277
9901641752 : 9886213331
080 - 45557163 / 164

ಮೈತ್ರಿ ಕುರಿತು ವರಿಷ್ಠರು–ದೇವೇಗೌಡರ ಜೊತೆ ಮಾತುಕತೆ ನಡೆದಿದೆ: ಬಸವರಾಜ ಬೊಮ್ಮಾಯಿ

‘ಸ್ವಂತ ಬಲವಿಲ್ಲದ ಪ್ರತಿಪಕ್ಷಗಳು’

ಪ್ರಜಾವಾಣಿ ವಾರ್ತೆ

ಬಸವರಾಜ ಬೊಮ್ಮಾಯಿ

ಹುಬ್ಬಳ್ಳಿ: ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಣಿಸಬೇಕೆನ್ನುವ ಏಕೈಕ ಉದ್ದೇಶದಿಂದ ದೇಶದಲ್ಲಿ ಪ್ರತಿಪಕ್ಷಗಳು ಒಂದಾಗುತ್ತಿವೆ. ಸ್ವಂತ ಬಲವಿಲ್ಲದ ಅವುಗಳ ಒಕ್ಕೂಟದಿಂದಾಗಿ, ಸಭೆಯಿಂದಾಗಲಿ ರಾಜಕೀಯ ಲಾಭವಾಗದು’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸೋಮವಾರದಿಂದ ಎರಡು ದಿನ ಪ್ರತಿಪಕ್ಷಗಳು ಬೆಂಗಳೂರಿನಲ್ಲಿ ನಡೆಸಲು ಉದ್ದೇಶಿಸಿರುವ ಸಭೆಯಲ್ಲಿ ಪ್ರಾದೇಶಿಕ ಪಕ್ಷಗಳೇ ಹೆಚ್ಚಾಗಿದ್ದು, ಅವು ಆಯಾ ರಾಜ್ಯಗಳಲ್ಲಿ ಪ್ರತಿಪಕ್ಷಗಳಾಗಿ ಕೆಲಸ ಮಾಡುತ್ತಿವೆ. ಮೋದಿ ಅವರ ಕಾರ್ಯಕ್ರಮ, ಜನಪ್ರಿಯತೆ ಇಡೀ ದೇಶಕ್ಕೆ ತಿಳಿದಿದೆ’ ಎಂದರು.

‘ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವ ಕುರಿತು ಎಚ್‌.ಡಿ.ಕುಮಾರಸ್ವಾಮಿ ಈಗಾಗಲೇ ತಮ್ಮ ಭಾವನೆ ವ್ಯಕ್ತಪಡಿಸಿದ್ದಾರೆ. ಪಕ್ಷದ ವರಿಷ್ಠರ ಮತ್ತು ದೇವೇಗೌಡರ ಜೊತೆ ಮಾತುಕತೆ ನಡೆದಿದೆ. ಅದರ ಫಲಶ್ರುತಿ ಆಧಾರದ ಮೇಲೆ ಮುಂದಿನ ರಾಜಕೀಯ ಬೆಳವಣಿಗೆ ನಡೆಯಲಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ನಿರ್ದಿಷ್ಟ ರೂಪುರೇಷೆ ಇಲ್ಲದ ‘ಗೃಹಲಕ್ಷ್ಮಿ’ ಯೋಜನೆ ಈಗಾಗಲೇ ಎಡವಟ್ಟಾಗಿದ್ದು, ಉದ್ಘಾಟನೆ ದಿನಾಂಕ ಮುಂದೂಡುತ್ತಲೇ ಇದ್ದಾರೆ. ದೊಡ್ಡ ಆರ್ಥಿಕ ಹೊರೆ ಆಗುವುದರಿಂದ ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡುವ ಉದ್ದೇಶ ಸಹ ರಾಜ್ಯ ಸರ್ಕಾರಕ್ಕಿಲ್ಲ. ಕೆಲವೇ ಕೆಲವು ಮಂದಿ ಯೋಜನೆಯ ಫಲಾನುಭವಿಯಾಗಲಿದ್ದಾರೆ. ರಾಜ್ಯದ ಹೆಣ್ಣು ಮಕ್ಕಳಿಗೆ ಭ್ರಮನಿರಸನ ಮಾಡುವ ಯೋಜನೆ ಇದಾಗಿದೆ’ ಎಂದು ಟೀಕಿಸಿದರು.

ವಿರೋಧ ಪಕ್ಷದ ನಾಯಕನ ಆಯ್ಕೆ ಕುರಿತು ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಜುಲೈ 18ರ ನಂತರ ಹೆಸರು ಘೋಷಣೆಯಾಗಬಹುದು’ ಎಂದರು.

ಮೈತ್ರಿ ಬಗ್ಗೆ ಮೇಲ್ಮಟ್ಟದಲ್ಲಿ ಚರ್ಚೆ ಆಗಿದ್ದರೆ ಗೊತ್ತಿಲ್ಲ– ಸಿ.ಟಿ.ರವಿ

ಸಿ.ಟಿ.ರವಿ

ಚಿಕ್ಕಮಗಳೂರು: ‘ರಾಜಕಾರಣ ಹರಿಯುವ ನೀರು, ಇಲ್ಲಿ ಶತ್ರುಗಳೂ ಇಲ್ಲ, ಮಿತ್ರರೂ ಇಲ್ಲ. ಜೆಡಿಎಸ್ ಜತೆ ಮೈತ್ರಿ ವಿಷಯ ಮೇಲ್ಮಟ್ಟದಲ್ಲಿ ಆಗಿದ್ದರೆ ನನಗೆ ಗೊತ್ತಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

‘ನರೇಂದ್ರ ಮೋದಿ ಅವರ ಜನಪರ ಕೆಲಸ ಮೆಚ್ಚಿ ಯಾರು ಬೇಕಾದರೂ ಬಿಜೆಪಿ ಜತೆ ಬರಬಹುದು. ನಾವು ಯಾರನ್ನೂ ದೂರವಿಟ್ಟು ರಾಜಕಾರಣ ಮಾಡುವುದಿಲ್ಲ. ಆ ಸಿದ್ಧಾಂತದ ಮೇಲೆ ನಂಬಿಕೆ ಇಲ್ಲ. ಆದರೂ, ಜೆಡಿಎಸ್ ಜೊತೆ ಮೈತ್ರಿ ಕುರಿತಂತೆ ನಮ್ಮ ಹಂತದಲ್ಲಿ ಯಾವುದೇ ಚರ್ಚೆ ನಡೆದಿಲ್ಲ’ ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಅನಭಿಷಿಕ್ತ ರಾಜನಿದ್ದಂತೆ. ನರಿಗಳು ಘೀಳಿಟ್ಟರೆ ಕಾಡಿನ ರಾಜ ಬೆದರುವುದುಂಟೆ? ಪ್ರಜಾಪ್ರಭುತ್ವದಲ್ಲಿ ಜನರ ಹೃದಯದಲ್ಲಿ ಸ್ಥಾನ ಪಡೆದ ಸಾಮ್ರಾಟ ಅವರು. ನರೇಂದ್ರ ಮೋದಿ ಅವರ ಬಗ್ಗೆ ವಿಪಕ್ಷಗಳಿಗೆ ಭಯ. ಆದ್ದರಿಂದಲೇ ನೂರು ಪಕ್ಷಗಳು ಒಟ್ಟಾಗಿವೆ. ಆ ಒಗ್ಗಟ್ಟಿನಲ್ಲಿ ದೇಶದ ಹಿತಾಸಕ್ತಿ ಇಲ್ಲ. ಅವರಿಗೆ ಹೆದರುವ ಅಗತ್ಯವೂ ಇಲ್ಲ’ ಎಂದು ಹೇಳಿದರು.

ಎಚ್‌.ಡಿ.ಕುಮಾರಸ್ವಾಮಿ ವಿರೋಧ ಪಕ್ಷದ ನಾಯಕ ಆಗುವರೇ ಎಂಬ ಬಗ್ಗೆ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜಕಾರಣದಲ್ಲಿ ಈ ರೀತಿಯ ಸುದ್ದಿಗಳು ಕಾರಣವಿಲ್ಲದೆ ಹರಿದಾಡುವುದಿಲ್ಲ. ಈಗ ಅದರ ಬಗ್ಗೆ ವಿಶ್ಲೇಷಣೆ ಬೇಡ’ ಎಂದರು.

ಎನ್‌ಡಿಎ ಸಭೆಗೆ ಎಚ್‌ಡಿಕೆ?

ಎನ್‌.ರವಿ ಕುಮಾರ್

ಬೆಂಗಳೂರು: ಇದೇ 18 ರಂದು ದೆಹಲಿಯಲ್ಲಿ ನಡೆಯಲಿರುವ ಎನ್‌ಡಿಎ ಸಭೆಗೆ ಜೆಡಿಎಸ್ ವರಿಷ್ಠರಾದ ಎಚ್‌.ಡಿ.ದೇವೇಗೌಡ ಮತ್ತು ಎಚ್‌.ಡಿ.ಕುಮಾರಸ್ವಾಮಿ ಭಾಗವಹಿಸುವ ಸಾಧ್ಯತೆ ಇದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್‌.ರವಿ ಕುಮಾರ್ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಎನ್‌ಡಿಎ ಸಭೆಗೆ ಆಹ್ವಾನ ನೀಡಲಾಗುವುದು. ನನಗೆ ತಿಳಿದಿರುವ ಮಾಹಿತಿ ಪ್ರಕಾರ ದೇವೇಗೌಡ, ಕುಮಾರಸ್ವಾಮಿ ಅವರು ದೆಹಲಿಗೆ ಹೋಗಲಿದ್ದಾರೆ ಎಂದರು.

ಎನ್‌ಡಿಎ ಸೇರ್ಪಡೆ ಬಗ್ಗೆ ಅಮಿತ್ ಶಾ ಮತ್ತು ಜೆ.ಪಿ.ನಡ್ಡಾ ಅವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ದೇಶದ ಒಳಿತನ್ನು ಗಮನಿಸಿ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಅದಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇವೆ ಎಂದು ಪ್ರತಿಕ್ರಿಯಿಸಿದರು.

‘ಅಧಿಕಾರದ ಲಾಲಸೆಯ ಸಭೆ’: ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಅಧಿಕಾರ ಹಿಡಿಯಬೇಕು ಎಂಬ ಏಕೈಕ ಉದ್ದೇಶದಿಂದ ತತ್ತ್ವ-ಸಿದ್ಧಾಂತಗಳಿಗೆ ತಿಲಾಂಜಲಿ ನೀಡಿ ಇದೇ 17 ಮತ್ತು 18 ರಂದು ಸಭೆ ನಡೆಸುತ್ತಿವೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಟೀಕಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪರಸ್ಪರ ವಿರೋಧಾಭಾಸಗಳಿಂದ ಕೂಡಿರುವ ಈ ಪಕ್ಷಗಳಿಗೆ ದೇಶದ ಹಿತಕ್ಕಿಂತ ತಮ್ಮ ಕುಟುಂಬದ ರಕ್ಷಣೆಯ ಹಿತಾಸಕ್ತಿಯೇ ಮುಖ್ಯವಾಗಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿಯವರು 2047ರ ವೇಳೆಗೆ ಭಾರತವನ್ನು ವಿಶ್ವದ ನಂ 1 ರಾಷ್ಟ್ರವಾಗಿ ಪರಿವರ್ತಿಸುವ ದೂರದೃಷ್ಟಿ ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಹಗಲು ರಾತ್ರಿ ಎನ್ನದೇ ಕೆಲಸ ಮಾಡುತ್ತಿದ್ದಾರೆ. ಈ ಮೂಲಕ ಎಲ್ಲ ಪ್ರಜೆಗಳು ಅಭಿವೃದ್ಧಿ ಹೊಂದುವುದೇ ಅವರ ಏಕೈಕ ಕನಸು. ತಮ್ಮ ಕುಟುಂಬದ ಬೆಳವಣಿಗೆ, ಸಂಪತ್ತಿನ ಕ್ರೋಡೀಕರಣ ಮತ್ತು ಮತಬ್ಯಾಂಕ್ ದೃಢೀಕರಣ ಉದ್ದೇಶ ಅವರಿಗಿಲ್ಲ. ಅವೆಲ್ಲ ಏನಿದ್ದರೂ ವಿಪಕ್ಷಗಳದ್ದು’ ಎಂದು ಹೇಳಿದರು.

ಜಾರಿಕೊಳ್ಳುವ ಯತ್ನ

ಹಾವೇರಿ: ‘ಅಧಿಕಾರಿಗಳ ವರ್ಗಾವಣೆಯಲ್ಲಿ ಮಂತ್ರಿಮಂಡಲದ ಸದಸ್ಯರು, ಹಿಂಬಾಲಕರು ಹಣ ತೆಗೆದುಕೊಳ್ಳುತ್ತಿರುವುದು ಸ್ಪಷ್ಟವಾಗಿದ್ದು ಅಧಿಕಾರಿಗಳ ವಲಯದಲ್ಲಿಯೂ ಚರ್ಚೆ ಆಗುತ್ತಿದೆ. ಅದನ್ನು ಮುಚ್ಚಿ ಹಾಕಲು ‘ನಾನು ಹಣ ತೆಗೆದುಕೊಂಡಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಕೊಳ್ಳುತ್ತಿದ್ದಾರೆ’ ಎಂದು ಬಸವರಾಜ ಬೊಮ್ಮಾಯಿ ಆರೋಪಿಸಿದರು.

‘ಮುಖ್ಯಮಂತ್ರಿ ಕಚೇರಿಯಿಂದ ಹಿಡಿದು ಎಲ್ಲ ಕಡೆಯಲ್ಲೂ ಹೊರಗಿನವರು ಹಸ್ತಕ್ಷೇಪ ಮಾಡುತ್ತಿದ್ದಾರೆ. ‘ಸ್ವಂತಕ್ಕೆ ಹಣ ತೆಗೆದುಕೊಂಡಿದ್ದರೆ ರಾಜಕೀಯ ನಿವೃತ್ತಿ ಪಡೆಯುವೆ’ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಅಂದರೆ, ಸರ್ಕಾರದಲ್ಲಿ ಬೇರೆಯವರು ಹಣ ತೆಗೆದುಕೊಂಡರೆ ಅದರಲ್ಲಿ ಸಿ.ಎಂ ಜವಾಬ್ದಾರಿಯಲ್ಲವೇ’ ಎಂದು ಪ್ರಶ್ನಿಸಿದರು.

‘ಜನಸೇವಾ ಟ್ರಸ್ಟ್ ಶಿಕ್ಷಣದಲ್ಲಿ ಮಹತ್ತರವಾದ ಕೆಲಸ ಮಾಡಿದೆ. ಬಡವರ ಮಕ್ಕಳಿಗೆ, ಅನಾಥರಿಗೆ ದೊಡ್ಡ ಸಹಾಯ ಆಗುತ್ತಿತ್ತು. ಆದರೆ, ಕಾಂಗ್ರೆಸ್ ನಾಯಕರು ಸೇಡಿನ ರಾಜಕಾರಣ ಮಾಡುತ್ತಿದ್ದಾರೆ’ ಎಂದು ಜನಸೇವಾ ಟ್ರಸ್ಟ್‌ಗೆ ನೀಡಿದ್ದ ಜಮೀನು ಸರ್ಕಾರ ಹಿಂಪಡೆದ ವಿಚಾರಕ್ಕೆ ಕಿಡಿಕಾರಿದರು.

ದೂದ್‌ಸಾಗರ ನೋಡಲು ಬಂದವರಿಗೆ ಬಸ್ಕಿ ಶಿಕ್ಷೆ!

ಪ್ರಜಾವಾಣಿ ವಾರ್ತೆ

ಕಾರವಾರ: ಕರ್ನಾಟಕ–ಗೋವಾ ರಾಜ್ಯದ ಗಡಿಭಾಗದಲ್ಲಿರುವ ದೂದ್‌ಸಾಗರ ಜಲಪಾತ ವೀಕ್ಷಣೆಗೆ ಭಾನುವಾರ ಬಂದಿದ್ದ ನೂರಾರು ಪ್ರವಾಸಿಗರು ಜಲಪಾತ ಕಣ್ತುಂಬಿ ಕೊಳ್ಳುವ ಬದಲು ಬಸ್ಕಿ ಶಿಕ್ಷೆ ಎದುರಿಸಿದರು.

ವಾರಾಂತ್ಯದ ದಿನವಾಗಿದ್ದ ಕಾರಣ ಕರ್ನಾಟಕ, ಗೋವಾ ಸೇರಿದಂತೆ ವಿವಿಧೆಡೆಯಿಂದ ಪ್ರವಾಸಿಗರು ಜಲಪಾತ ವೀಕ್ಷಣೆಗೆ ಬಂದಿದ್ದರು. ನಿರ್ಬಂಧದ ನಡುವೆಯೂ ರೈಲ್ವೆ ಹಳಿಯ ಗುಂಟ ನಡೆದು ಬಂದ ಪ್ರವಾಸಿಗರಿಗೆ ನೈರುತ್ಯ ರೈಲ್ವೆ ಪೊಲೀಸರು ಬಸ್ಕಿ ಶಿಕ್ಷೆ ವಿಧಿಸಿದರು.

ಹತ್ತಾರು ಪ್ರವಾಸಿಗರಿಗೆ ರೈಲ್ವೆ ಪೊಲೀಸರು ಬಸ್ಕಿ ತೆಗೆಸುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣ ದಲ್ಲಿಯೂ ಹರಿದಾಡುತ್ತಿದೆ. ದೂದ್‌ಸಾಗರ ವೀಕ್ಷಣೆಗೆ ತೆರಳುವುದನ್ನು ಗೋವಾ ಅರಣ್ಯ ಇಲಾಖೆ ಈಗಾಗಲೇ ನಿರ್ಬಂಧಿಸಿದೆ.

ಗೋವಾದಿಂದ ಬರುವವರು ಕೊಲೆಮ್ ರೈಲು ನಿಲ್ದಾಣದಿಂದ, ಕರ್ನಾಟಕ ಭಾಗದಿಂದ ಸಾಗಲು ಜೊಯಿಡಾ ತಾಲ್ಲೂಕಿನ ಕ್ಯಾಸಲ್‌ರಾಕ್‌ನಿಂದ ರೈಲ್ವೆ ಮಾರ್ಗವಾಗಿ ಅಥವಾ ರೈಲ್ವೆ ಹಳಿ ಗುಂಟ ಟ್ರೆಕ್ಕಿಂಗ್ ಮೂಲಕ ಸಾಗಬೇಕಾಗುತ್ತದೆ.

ದೂದ್‌ಸಾಗರ ಜಲಪಾತ ವೀಕ್ಷಣೆಗೆ ಬಂದಿದ್ದ ಪ್ರವಾಸಿಗರು

ರೈಲ್ವೆ ಹಳಿಯ ಗುಂಟ ನಡೆದು ಸಾಗಲು ನೈರುತ್ಯ ರೈಲ್ವೆ ನಿರ್ಬಂಧಿಸಿದೆ.

‘ನಿರ್ಬಂಧ ವಿಧಿಸಿದ್ದರೂ ನೂರಾರು ಜನರು ಜಲಪಾತ ವೀಕ್ಷಣೆಗೆ ಬಂದಿದ್ದರು. ವಾರಾಂತ್ಯದ ದಿನವಾಗಿದ್ದರಿಂದ ಏಕಾಏಕಿ ದಟ್ಟಣೆ ಉಂಟಾಗಿತ್ತು. ರೈಲು ಹಳಿಯ ಪಕ್ಕದಿಂದ ನಡೆದು ಬಂದಿದ್ದಕ್ಕೆ ರೈಲ್ವೆ ಪೊಲೀಸರು, ಗೋವಾದ ಅರಣ್ಯ ಇಲಾಖೆ ಸಿಬ್ಬಂದಿ ಪ್ರವಾಸಿಗರನ್ನು ತಡೆದು ಬಸ್ಕಿ ಶಿಕ್ಷೆ ವಿಧಿಸಿದ್ದರು’ ಎಂದು ಸ್ಥಳಕ್ಕೆ ತೆರಳಿದ್ದ ಪ್ರವಾಸಿಗರೊಬ್ಬರು ತಿಳಿಸಿದರು.

ಕಳಪೆ ಮೊಟ್ಟೆ: ತನಿಖಾ ತಂಡ ರಚನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಅಂಗನವಾಡಿ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಕಳಪೆ ಗುಣಮಟ್ಟದ ಕೋಳಿಮೊಟ್ಟೆ ಸರಬರಾಜಾಗಿರುವ ಆರೋಪದ ಹಿನ್ನೆಲೆಯಲ್ಲಿ ಲೋಪ-ದೋಷಗಳನ್ನು ಪರಿಶೀಲಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ತನಿಖಾ ತಂಡ ರಚಿಸಿ, ವರದಿ ಸಲ್ಲಿಸಲು ಆದೇಶಿಸಿದೆ.

ಹಾವೇರಿ, ರಾಮನಗರ, ಕೊಡಗು ಜಿಲ್ಲೆ ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿಯೂ ಸಹ ಅಂಗನವಾಡಿ ಫಲಾನುಭವಿಗಳಿಗೆ ಕಳಪೆ ಗುಣಮಟ್ಟದ ಕೋಳಿಮೊಟ್ಟೆ ಸರಬರಾಜಾಗಿರುವುದು ಕಂಡು ಬಂದಲ್ಲಿ, ಆ ಜಿಲ್ಲೆಗಳಿಗೂ ಭೇಟಿ ನೀಡಿ ಪರಿಶೀಲಿಸುವಂತೆ ಸೂಚಿಸಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್) ಜಂಟಿ ನಿರ್ದೇಶಕಿ ಡಾ.ಬಿ.ಉಷಾ, ಡಿಡಿ ಬಿ.ಎಚ್. ನಿಶ್ಚಲ್, ಹಿರಿಯ ಸಹಾಯಕ ನಿರ್ದೇಶಕಿ ಹೇಮಾವತಿ, ಎಫ್‌ಡಿಎ ಪಂಚಾಕ್ಷರಿ., ಲೆಕ್ಕಪರಿಶೋಧಕ ಕಿರಣ್ ಸೇರಿದಂತೆ ಐವರು ಸದಸ್ಯರ ತಂಡ ರಚಿಸಲಾಗಿದೆ.

ಪ್ರತ್ಯೇಕ ಪ್ರಕರಣ: ಹಾವು ಕಚ್ಚಿ ಇಬ್ಬರು ಮಹಿಳೆಯರು ಸಾವು

ಹೂವಿನಹಡಗಲಿ: ತಾಲ್ಲೂಕಿನ ಹಿರೇಬನ್ನಿಮಟ್ಟಿ ಮತ್ತು ಅಂಗೂರು ಗ್ರಾಮಗಳಲ್ಲಿ ಭಾನುವಾರ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಹಾವು ಕಡಿತಕ್ಕೆ ಸಕಾಲಿಕ ಚಿಕಿತ್ಸೆ ದೊರೆಯದೇ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ಗ್ರಾಮದ ಜಮೀನಲ್ಲಿ ಮೆಕ್ಕೆಜೋಳದ ತೆನೆ ಕಟಾವು ಮಾಡುವಾಗ ಕೂಲಿ ಕಾರ್ಮಿಕ ಮಹಿಳೆ ವೀಣಾ ಲಿಂಗನಗೌಡ್ರ (26) ಅವರಿಗೆ ಹಾವು ಕಚ್ಚಿದೆ. ಕೂಡಲೇ ಹೊಳಲು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರೂ ಅಲ್ಲಿ ವೈದ್ಯರು ಲಭ್ಯವಿರದೇ ಗುತ್ತಲ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಅಂಗೂರು ಗ್ರಾಮದ ಹುಲಿಗೆಮ್ಮ ಚಿಂಚಲಿ (49) ಅವರಿಗೆ ಹೊಲದಲ್ಲಿ ಕೆಲಸ ಮಾಡುವಾಗ ಹಾವು ಕಚ್ಚಿದೆ. ಮಹಿಳೆಯನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತರುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ.

ಗಾಂಜಾ: 25 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಮಕ್ಕಂದೂರಿನ ಹೋಂ ಸ್ಟೇಯೊಂದರಲ್ಲಿ ಗಾಂಜಾ ಸೇವಿಸುತ್ತಿದ್ದ ಆರೋಪದ ಮೇಲೆ 14 ಮಂದಿ ಹಾಗೂ ಹೋಂ ಸ್ಟೇ ಮಧ್ಯವರ್ತಿ, ಮಾಲೀಕ ಸೇರಿದಂತೆ ಒಟ್ಟು 25 ಮಂದಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಆರೋಪಿಗಳಿಂದ 1 ಕೆ.ಜಿ 702 ಗ್ರಾಂ ಗಾಂಜಾ ಹಾಗೂ 9 ಎಲ್‌ಎಸ್‌ಡಿ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ. ಇನ್ನು ಮುಂದೆ ಹೋಂಸ್ಟೇ, ರೆಸಾರ್ಟ್ ಹಾಗೂ ಹೋಟೆಲ್‌ಗಳಲ್ಲಿ ಗಾಂಜಾ ಸೇವನೆ ಕಂಡು ಬಂದಲ್ಲಿ ಮಾಲೀಕರನ್ನೂ ಬಂಧಿಸಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದ್ದಾರೆ.

₹ 50,000 ಲಂಚ: ಹೆಡ್ ಕಾನ್‌ಸ್ಟೆಬಲ್ ಬಂಧನ

ಮಹೇಶ್

ಬೆಂಗಳೂರು: ವಂಚನೆ ಪ್ರಕರಣದಲ್ಲಿ ಆರೋಪಿಯಾಗಿರುವ ವ್ಯಕ್ತಿಯೊಬ್ಬರ ಪರ ಅನುಕೂಲಕರ ವರದಿ ನೀಡಲು ₹ 2.5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು ₹ 50 ಸಾವಿರ ಮುಂಗಡ ಪಡೆಯುತ್ತಿದ್ದ ರಾಮನಗರ ಜಿಲ್ಲಾ ಸೈಬರ್ ಅಪರಾಧ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಹೇಶ್ ಮತ್ತು ಅವರ ಪರವಾಗಿ ಹಣ ಪಡೆದ ಮಧ್ಯವರ್ತಿ ರಮೇಶ್ ಡಿ. ಎಂಬುವವರನ್ನು ಲೋಕಾಯುಕ್ತ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಉತ್ತರಹಳ್ಳಿಯ ವೈಷ್ಣವಿ ಪಾರ್ಟಿ ಹಾಲ್‌ನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಆರೋಪಿ, ಅಲ್ಲಿಯೇ ದೂರುದಾರ ಮಂಜೇಗೌಡರನ್ನು ಭೇಟಿ ಮಾಡಿದರು. ಆರೋಪಿಯು ಸ್ನೇಹಿತ ರಮೇಶ್ ಮೂಲಕ ಲಂಚದ ಹಣ ಪಡೆದರು. ಲೋಕಾಯುಕ್ತ ಪೊಲೀಸರು ಇಬ್ಬರನ್ನೂ ಬಂಧಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿ–ಸರ್ಕಾರದ ಮಧ್ಯೆ ಸಂಘರ್ಷ

ಒಂದನೇ ಪುಟದಿಂದ...

ಬಿಜೆಪಿ ಸರ್ಕಾರದ ಅವಧಿಯಲ್ಲಿ, ನಿಗದಿತ ಅರ್ಹತೆ ಇಲ್ಲದೇ ಇದ್ದರೂ ಡಾ. ಶಾಂತ್ ತಿಮ್ಮಯ್ಯ ಅವರನ್ನು ಮಂಡಳಿಯ ಅಧ್ಯಕ್ಷ ಹುದ್ದೆಗೆ ನಾಮನಿರ್ದೇಶನ ಮಾಡಲಾಗಿತ್ತು. ಇದು ವಿವಾದಕ್ಕೆ ಕಾರಣವಾಗಿತ್ತು. ಆಗ ಐಎಫ್‌ಎಸ್ ಅಧಿಕಾರಿ ಎಚ್‌.ಸಿ. ಗಿರೀಶ್ ಅವರನ್ನು ಸದಸ್ಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜೂನ್ 7ರಂದು ಗಿರೀಶ್ ಅವರನ್ನು ಕಿಯೋನಿಕ್ಸ್‌ಗೆ ವರ್ಗ ಮಾಡಲಾಯಿತು. ಈ ಹುದ್ದೆಗೆ ಐಎಫ್‌ಎಸ್ ಹಿರಿಯ ಶ್ರೇಣಿಯ ಅಧಿಕಾರಿಯನ್ನೇ ನೇಮಕ ಮಾಡಬೇಕು ಎಂದು ನಿಯಮಗಳಲ್ಲಿದೆ. ಹಾಗಿದ್ದರೂ ಮಂಡಳಿಯ ಮಾಹಿತಿ ತಂತ್ರಜ್ಞಾನ (ಐ.ಟಿ) ವಿಭಾಗದ ವ್ಯವಸ್ಥಾಪಕ ಸೂರಿ ಪಾಯಲ್ ಅವರಿಗೆ ಅದೇ ದಿನ ಹೆಚ್ಚುವರಿಯಾಗಿ ಸದಸ್ಯ ಕಾರ್ಯದರ್ಶಿ ಹುದ್ದೆಯ ಪ್ರಭಾರವನ್ನು ನೀಡಲಾಯಿತು.

ಸೂರಿ ಪಾಯಲ್ ಅವರು ಮಂಡಳಿಯ ಎಲ್ಲ ಅಧಿಕಾರವನ್ನು ತಮ್ಮದೇ ಆದೇಶದ ಮೂಲಕ ಕೈವಶ ಮಾಡಿಕೊಳ್ಳಲು ಮುಂದಾದರು. ಪ್ರತಿಯೊಂದು ಕಡತವೂ ತಮ್ಮ ಗಮನಕ್ಕೆ ಬರದೇ ಹೋಗಕೂಡದು ಎಂದು ಜೂನ್ 21ರಂದು ಸುತ್ತೋಲೆ ಹೊರಡಿಸಿದರು.

ಇದನ್ನು ಸಹಿಸದ ಅಧ್ಯಕ್ಷ ಶಾಂತ್ ತಿಮ್ಮಯ್ಯ, ಜುಲೈ 3ರಂದು ಆದೇಶವೊಂದನ್ನು ಹೊರಡಿಸಿ, ಸದಸ್ಯ ಕಾರ್ಯದರ್ಶಿ ಹೊರಡಿಸಿದ ಎಲ್ಲ ಆದೇಶಗಳನ್ನೂ ವಾಪಸ್ ಪಡೆಯಲಾಗಿದೆ ಎಂದು ಸೂಚಿಸಿದರು. ಇದು ಸಂಘರ್ಷದ ವಾತಾವರಣವನ್ನು ಸೃಷ್ಟಿಸಿತು. ಈ ಬೆನ್ನಲ್ಲೇ, ‘ಅಧ್ಯಕ್ಷರು ಅಕ್ರಮ ಎಸಗಿದ್ದಾರೆ’ ಎಂದು ಸದಸ್ಯ ಕಾರ್ಯದರ್ಶಿ, ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ದೂರು ನೀಡಿದರು. ಜುಲೈ 15ರಂದು ಆದೇಶ ಹೊರಡಿಸಿದ ಅಧ್ಯಕ್ಷ ಶಾಂತ್ ತಿಮ್ಮಯ್ಯ, ಸೂರಿ ಪಾಯಲ್‌ಗೆ ನೀಡಿದ್ದ ಸದಸ್ಯ ಕಾರ್ಯದರ್ಶಿ ಹುದ್ದೆಯ ಪ್ರಭಾರ ಅಧಿಕಾರವನ್ನು ವಾಪಸ್ ಪಡೆದಿದ್ದಾರೆ.

ಸೂರಿ ಪಾಯಲ್ ಅಧಿಕಾರವನ್ನು ಹಿಂಪಡೆದ ಬೆನ್ನಲ್ಲೇ ಅರಣ್ಯ ಇಲಾಖೆಯು ಶಾಂತ್ ತಿಮ್ಮಯ್ಯ ವಿರುದ್ಧ ಕ್ರಮಕ್ಕೆ ಮುಂದಾಗಿದೆ. ಜುಲೈ 15ರಂದು ನೋಟಿಸ್ ನೀಡಿರುವ ಇಲಾಖೆ, 20 ವರ್ಷ ಬಳಿಕ, 2003ರಲ್ಲಿ ವಲಯ ವಿಂಗಡಿಸಿ, ಜಲಾನಯನ ಪ್ರದೇಶವನ್ನು ಸಂರಕ್ಷಿಸಲು ಕ್ರಮಕೈಗೊಳ್ಳಲು ವಿಫಲವಾಗಿದ್ದಕ್ಕೆ ಕಾರಣ ಕೇಳಿದೆ.

₹17.85 ಕೋಟಿ ಅಕ್ರಮ ಆರೋಪ: ಮಂಡಳಿಯ ಅಧ್ಯಕ್ಷ ಶಾಂತ್ ತಿಮ್ಮಯ್ಯ ನೇತೃತ್ವದ ‘ಸಿಂಗಲ್ ಸೋರ್ಸ್ ಕಮಿಟಿ’ ಜನವರಿ 30ರಂದು ನಡೆಸಿದ ಸಭೆಯಲ್ಲಿ ₹17.85 ಕೋಟಿ ಮೌಲ್ಯದ ಜಾಗೃತಿ ಕಾರ್ಯಕ್ರಮದ ಪ್ರಚಾರಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ -1999 ಅನ್ನು (ಕೆಟಿಪಿಪಿ) ಉಲ್ಲಂಘಿಸಿ, ಏಜೆನ್ಸಿಗಳಿಗೆ ನೇರವಾಗಿ ನೀಡಿದೆ ಎಂಬುದು ಪ್ರಮುಖ ಆರೋಪ.

ಟೆಂಡರ್ ಕರೆಯದೇ ತಮಗೆ ಬೇಕಾದ ನಾಲ್ಕು ಸಂಸ್ಥೆಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಇದರಲ್ಲಿ ಭಾರಿ ಅಕ್ರಮ ನಡೆದಿದೆ. ಈ ಬಗ್ಗೆ ವಿಚಾರಣೆ ನಡೆಸಿ ಕ್ರಮ ಜರುಗಿಸಬೇಕು ಎಂದು ಜುಲೈ 3ರಂದು ಅಂದು ಸದಸ್ಯ ಕಾರ್ಯದರ್ಶಿಯಾಗಿದ್ದ ಸೂರಿ ಪಾಯಲ್ ಪತ್ರ ಬರೆದಿದ್ದರು. ಅಲ್ಲದೇ, ಸಂಬಂಧಿಸಿದ ದಾಖಲೆಗಳನ್ನೂ ನೀಡಿದ್ದರು.

> **ಮಂಡಳಿ ಅಧ್ಯಕ್ಷ, ಕೆಲವು ಅಧಿಕಾರಿಗಳು ಹಿಂದಿನ ಸರ್ಕಾರದ ಅವಧಿಯಲ್ಲಿ ಹಣ ದುರುಪಯೋಗ ಪಡಿಸಿಕೊಳ್ಳುವ ಹುನ್ನಾರ ನಡೆಸಿದ್ದರು. ಈ ಬಗ್ಗೆ ತನಿಖೆ ನಡೆಸಬೇಕು**
> **ಪಿ.ಆರ್.ರಮೇಶ್,** ವಿಧಾನ ಪರಿಷತ್ ಮಾಜಿ ಸದಸ್ಯ

> **ಜಾಗೃತಿ ಕಾರ್ಯಕ್ರಮಗಳನ್ನು ನೇರವಾಗಿ ಕೈಗೊಳ್ಳಲು ಕಾಯ್ದೆಯಲ್ಲಿ ಅವಕಾಶವಿದೆ. ಯಾವ ಅಕ್ರಮ ನಡೆದಿಲ್ಲ. ಇನ್ನೂ ಬಿಲ್‌ಗಳ ಪರಿಶೀಲನೆ ನಡೆದಿದ್ದು, ಹಣ ಪಾವತಿಸಿಲ್ಲ**
> **ಡಾ. ಶಾಂತ್ ತಮ್ಮಯ್ಯ**
> ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

‘ಅಧ್ಯಕ್ಷ ಸ್ಥಾನ ನೀಡದಿದ್ದರೆ ಮುಂದಿನ ತೀರ್ಮಾನ’

ಪ್ರಜಾವಾಣಿ ವಾರ್ತೆ

ಸೋಮಣ್ಣ

ಬೆಂಗಳೂರು: ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನ ನೀಡದೇ ಹೋದರೆ, ಕಾರ್ಯಕರ್ತರ ಅಭಿಪ್ರಾಯ ಪಡೆದು ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ಮಾಜಿ ಸಚಿವ ವಿ.ಸೋಮಣ್ಣ ಹೇಳಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಪಕ್ಷವು ಅಧ್ಯಕ್ಷ ಸ್ಥಾನ ಕೊಟ್ಟರೆ ಹಗಲಿರುಳು ಶ್ರಮಿಸುವೆ. ಆದ್ದರಿಂದ, ಅಧ್ಯಕ್ಷ ಸ್ಥಾನ ಕೊಡಬೇಕು ಎಂದರು.

‘ಕಳೆದ 40 ವರ್ಷಗಳಿಂದ ರಾಜ್ಯ ರಾಜಕಾರಣದ ಆಗುಹೋಗುಗಳ ಮಾಹಿತಿ ಗೊತ್ತು. 365 ದಿನಗಳೂ ಜನರ ನಡುವೆ ಇದ್ದು ಜನ ಸಂಘಟನೆ ಮಾಡಿದ ಅನುಭವವಿದೆ. ಆದ್ದರಿಂದ ರಾಜ್ಯಾಧ್ಯಕ್ಷ ಸ್ಥಾನಕೊಡಿ ಎಂದು ಕೇಳಿದ್ದೇನೆ’ ಎಂದರು.

ಗಡ್ಕರಿಗೆ ಬೆದರಿಕೆ: ಅಫ್ಸರ್ ವಶಕ್ಕೆ

ಬೆಳಗಾವಿ: ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿಗೆ ಕೊಲೆ ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ, ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿದ್ದ ಕೈದಿಯನ್ನು ಮಹಾರಾಷ್ಟ್ರದ ನಾಗ್ಪುರ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

‘ಲಷ್ಕರ್-ಎ-ತಯಬಾ ಮತ್ತು ಪಿಎಫ್‌ಐ ಜೊತೆ ನಂಟು ಹೊಂದಿರುವ ಶಂಕೆಯಿಂದ ಕೈದಿ ಅಫ್ಸರ್ ಪಾಷಾ ಎಂಬಾತನನ್ನು ವಶಕ್ಕೆ ಪಡೆದು ನಾಗ್ಪುರಕ್ಕೆ ಕರೆದೊಯ್ಯಲಾಗಿದೆ. ಅಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿ ಹಿಂಡಲಗಾ ಕಾರಾಗೃಹದಲ್ಲಿದ್ದ ಜಯೇಶ್ ಪೂಜಾರಿ ಎಂಬಾತ, ನಾಗ್ಪುರದಲ್ಲಿರುವ ನಿತಿನ್ ಗಡ್ಕರಿ ಕಚೇರಿಗೆ ಕರೆ ಮಾಡಿ ಬೆದರಿಕೆಯೊಡ್ಡಿದ್ದ. ತನ್ನ ಪಕ್ಕದ ಸೆಲ್‌ನಲ್ಲಿರುವ ಅಫ್ಸರ್ ಪಾಷಾ ಸೂಚನೆ ಮೇರೆಗೆ ಈ ಕರೆ ಮಾಡಿದ್ದಾನೆ ಎಂಬ ಸುಳಿವು ಪೊಲೀಸರಿಗೆ ಸಿಕ್ಕಿದೆ. ಈಗಾಗಲೇ ಜಯೇಶ್ ವಶಕ್ಕೆ ಪಡೆದಿದ್ದ ಪೊಲೀಸರು, ಈಗ ಅಫ್ಸರ್‌ನನ್ನು ವಶಕ್ಕೆ ಪಡೆದಿದ್ದಾರೆ.

ಶಿವಮೊಗ್ಗದಲ್ಲಿ ಭಾನುವಾರ ನಡೆದ ಎಸ್‌ಸಿ, ಎಸ್‌ಟಿ, ಇತರೆ ಹಿಂದುಳಿದ ಸಮುದಾಯಗಳ ರಾಜ್ಯಮಟ್ಟದ ಧಾರ್ಮಿಕ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಸಿಗಂದೂರು ಚೌಡೇಶ್ವರಿ ದೇವಸ್ಥಾನದ ಧರ್ಮದರ್ಶಿ ರಾಮಪ್ಪ, ಕೆ.ಎಸ್ ಈಶ್ವರಪ್ಪ, ಕವಲುಗುಡ್ಡ ಮಠದ ಅಮರೇಶ್ವರ ಸ್ವಾಮೀಜಿ ಭಾಗವಹಿಸಿದ್ದರು

ಸೆ.17ರಿಂದ ಅರ್ಚಕರಿಗೆ ತರಬೇತಿ ಶಿಬಿರ

ಶಿವಮೊಗ್ಗ: ರಾಜ್ಯದ ಹಿಂದುಳಿದ ಸಮುದಾಯಗಳ ಒಡೆತನದ ಹಾಗೂ ನೇತೃತ್ವದ ದೇವಾಲಯಗಳಲ್ಲಿನ ಅರ್ಚಕರಿಗೆ ತರಬೇತಿ ನೀಡುವ ಉದ್ದೇಶದಿಂದ ‘ಧಾರ್ಮಿಕ ತರಬೇತಿ ಶಾಲೆ’ ತೆರೆಯಲು ನಿರ್ಧರಿಸಲಾಗಿದೆ ಎಂದು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಕವಲುಗುಡ್ಡ ಮಠದ ಅಮರೇಶ್ವರ ಸ್ವಾಮೀಜಿ ಹೇಳಿದರು.

ಭಾನುವಾರ ಆಯೋಜಿಸಲಾಗಿದ್ದ ಎಸ್‌ಸಿ, ಎಸ್‌ಟಿ, ಇತರೆ ಹಿಂದುಳಿದ ಸಮುದಾಯಗಳ ರಾಜ್ಯ ಮಟ್ಟದ ಧಾರ್ಮಿಕ ಮುಖಂಡರ ಪೂರ್ವಭಾವಿ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಅರ್ಚಕ ವೃತ್ತಿಯಲ್ಲಿ ಕೆಲ ಬದಲಾವಣೆಗಳನ್ನು ತರುವ ಅಗತ್ಯವಿದೆ. ಈ ಉದ್ದೇಶದಿಂದ ಸೆ. 17ರಂದು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಕವಲುಗಡ್ಡ ಮಠದ ತರಬೇತಿ ಶಾಲೆಯಲ್ಲಿ ಅರ್ಚಕರ ಶಿಬಿರ ಆರಂಭಿಸಲಾಗುವುದು’ ಎಂದರು.

ಶಿವಗಂಗೆಯ ಮಹಾಲಕ್ಷ್ಮೀ ತಿಗಳರ ಪೀಠದ ಜ್ಞಾನಾನಂದಪುರಿ ಸ್ವಾಮೀಜಿ, ಮೈಸೂರು ಮುಕ್ಕಣೇಶ್ವರ ಸ್ವಾಮಿ ಮಠದ ಸ್ವಾಮೀಜಿ ಸೇರಿದಂತೆ ರಾಜ್ಯದ ವಿವಿಧ 12 ಮಠಗಳ ಸ್ವಾಮೀಜಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನವಿಲುತೀರ್ಥ ಜಲಾಶಯಕ್ಕೆ ಒಳಹರಿವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬೆಳಗಾವಿ ಜಿಲ್ಲೆಯ ಖಾನಾಪುರ, ಚನ್ನಮ್ಮನ ಕಿತ್ತೂರು ತಾಲ್ಲೂಕಿನಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಮಲಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚುತ್ತಿದ್ದು, ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯಕ್ಕೆ ಭಾನುವಾರದಿಂದ ಒಳಹರಿವು ಆರಂಭವಾಗಿದೆ. 587 ಕ್ಯುಸೆಕ್ ಒಳಹರಿವು ಇದ್ದು, 194 ಕ್ಯುಸೆಕ್ ಹೊರಹರಿವಿದೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಭಾಗದಲ್ಲಿ ಉತ್ತಮ ಮಳೆಯಾಗಿದ್ದು, ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಸಾಧಾರಣ ಮಳೆಯಾಗಿದೆ. ಹುಬ್ಬಳ್ಳಿ ನಗರ, ಗ್ರಾಮೀಣ ಭಾಗ ಸೇರಿದಂತೆ ವಿವಿಧೆಡೆ ರಭಸದ ಮಳೆಯಾಗಿದೆ. ಗದಗ ಬೆಟಗೇರಿ ಅವಳಿ ನಗರದಲ್ಲಿ ಸಂಜೆ ಅರ್ಧ ತಾಸು ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	89.40	2,863	397
ಹಾರಂಗಿ	2,859	2,844.10	1,904	50
ಕಬಿನಿ	2,284	2,270.29	1,943	800
ಹೇಮಾವತಿ	2,922	2,893.50	1,994	200
ಲಿಂಗನಮಕ್ಕಿ	1,819	1,755.90	9,135	2,220
ಸೂಪಾ (ಮೀ)	564	528.00	8,702.40	3,704.40
ಮಾಣಿ	595	573.98	1,440	00
ತುಂಗಭದ್ರಾ	1,633	1,588.09	5,450	195
ಮಲಪ್ರಭಾ	2,079.50	2,043.05	587	194
ಘಟಪ್ರಭಾ	2,175	2,090.56	4,425	91
ಭದ್ರಾ	186	141.3	499	164
ಆಲಮಟ್ಟಿ (ಮೀ)	519.60	508.77	8,547	561
ನಾರಾಯಣಪುರ (ಮೀ)	492.25	486.80	00	50

* ನೆಲಮಟ್ಟದಿಂದ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009					
1.	ಉತ್ತರ–2	ಬೆಂಜಮಂ/ಇಎನ್‌ಟಿಇ/ ಸಅ–1/315/2023–24 ದಿನಾಂಕ: 11.07.2023	₹ 5,29,927/- / ₹ 13,300/-	31.07.2023ರ ಮಧ್ಯಾಹ್ನ 3:00 ಗಂಟೆಯವರೆಗೆ	01.08.2023ರ ಸಂಜೆ 4:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ–2)					
ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009					
2.	ಉತ್ತರ ಪಶ್ಚಿಮ–2	ಬೆಂಜಮಂ/ಕಾನಿಅ(ಉಪ–2)/ ತಾಂಅ/ಪಿಬಿ/834/2023–24 ದಿನಾಂಕ: 14.07.023	₹ 58,93,297/- / ₹ 1,27,100/-	25.07.2023ರ ಸಂಜೆ 4:00 ಗಂಟೆಯವರೆಗೆ	27.07.2023ರ ಸಂಜೆ 4:30 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪಶ್ಚಿಮ–2)					
ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯನೀರು–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009					
3.	(ತ್ಯಾನೀನಿ–ಯೋ) ಕೆ&ಟಿ ವ್ಯಾಲಿ	ಬೆಂಜಮಂ/ಕಾನಿಅ (ತ್ಯಾನೀನಿ–ಯೋ)ಕೆ&ಟಿ/ ಸಅ/215/2023–24 ದಿನಾಂಕ: 14.07.023	₹ 28,01,151/- / ₹ 66,107/-	25.07.2023ರ ಸಂಜೆ 4:00 ಗಂಟೆಯವರೆಗೆ	26.07.2023ರ ಸಂಜೆ 4:05 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಯೋ) ಕೆ&ಟಿ ವ್ಯಾಲಿ					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/568/2023–24

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
ಶಾಖಾ ಕಛೇರಿ: ನಂ.9/1, 2ನೇ ಮಹಡಿ, ಸಾಹುಕಾರ್ ಚನ್ನಯ್ಯ ರಸ್ತೆ, ಶ್ರೀ ಕೃಷ್ಣಧಾಮ ಎದುರು, ಸರಸ್ವತಿಪುರಂ, ಮೈಸೂರು–570009. ದೂರವಾಣಿ: 2344930/2344524 E-mail: mys@ksfc.co

ಆಧಾರ ಸ್ವತ್ತಿನ ಇ–ಹರಾಜು (e-Auction) ಮಾರಾಟ ಪ್ರಕಟಣೆ

ಈ ಕೆಳಗೆ ಕಾಣಿಸಿರುವ ಘಟಕಗಳ ಆಸ್ತಿಗಳನ್ನು ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆ 1951 ಸೆಕ್ಷನ್ 29 ರ ಅಡಿಯಲ್ಲಿ ಸಂಸ್ಥೆಯ ವಶಕ್ಕೆ ಪಡೆದಿದ್ದು “ಅವು ಎಲ್ಲಿ ಹೇಗಿವಿಯೋ ಅದೇ ಸ್ಥಿತಿಯಲ್ಲಿ” ಇ–ಹರಾಜು ಮೂಲಕ ಮಾರಾಟಕ್ಕೆ ಲಭ್ಯವಿರುತ್ತದೆ.

1) ಮೆ: ನಾಡಿಗ್ ಪ್ರಮೋಟರ್ಸ್ ಅಂಡ್ ಡೆವೆಲಪರ್ಸ್ ಪ್ರೈ.ಲಿ. ಮೈಸೂರು ಜಿಲ್ಲೆ. ನಿರ್ದೇಶಕರುಗಳು: (1) ಶ್ರೀ ರಾಘವ್ ಎಸ್ ನಾಡಿಗ್ ಮತ್ತು (2) ಶ್ರೀಮತಿ ಜಯಲಕ್ಷ್ಮಿ ಸತ್ಯನಾರಾಯಣ ನಾಡಿಗ್, (KSFC/2023-24/AUCTION2) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ದೊಡ್ಡಕಾಡನಹಳ್ಳಿ, ಫೇಸ್–3, ಇಲ್ಲಿರುವ ಕೆಳಕಂಡ ವಿಭಿನ್ನ ಅಳತೆಯ 17 ವಸತಿ ನಿವೇಶನಗಳು **“ಅವು ಎಲ್ಲಿ ಹೇಗಿವಿಯೋ ಅದೇ ಸ್ಥಿತಿಯಲ್ಲಿ”** ಇ–ಹರಾಜು ಮೂಲಕ ಮಾರಾಟಕ್ಕೆ ಲಭ್ಯವಿರುತ್ತವೆ.
ಪರೀವಿಕ್ಷಣೆಯ ದಿನಾಂಕ: 20.07.2023 ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ

Sl. No	Site No.	Dimension in Ft. E-W	Dimension in Ft. N-S	Total Sft.	Reserve Price in Rs.	EMD in Rs.	e-auction ID
1	2	50	60	3000	1395000/-	139500/-	(KSFC/2023 -24/AUCTION2)
2	3	50	60	3000	1395000/-	139500/	(KSFC/2023 -24/AUCTION2)
3	4	50	60	3000	1395000/-	139500/	(KSFC/2023 -24/AUCTION2)
4	5	50	60	3000	1395000/-	139500/	(KSFC/2023 -24/AUCTION2)
5	6	50	60	3000	1395000/-	139500/	(KSFC/2023 -24/AUCTION2)
6	7	50	60	3000	1395000/-	139500/	(KSFC/2023 -24/AUCTION2)
7	8	50	60	3000	1395000/-	139500/	(KSFC/2023 -24/AUCTION2)
8	9	50	60	3000	1395000/-	139500/	(KSFC/2023 -24/AUCTION2)
9	28	80	50	4000	1860000/-	186000/-	(KSFC/2023 -24/AUCTION2)
10	51	60	50	3000	1395000/-	139500/	(KSFC/2023 -24/AUCTION2)
11	52	60	50	3000	1395000/-	139500/	(KSFC/2023 -24/AUCTION2)
12	53	60	50	3000	1395000/-	139500/	(KSFC/2023 -24/AUCTION2)
13	58	60	50	3000	1395000/-	139500/	(KSFC/2023 -24/AUCTION2)
14	69	70	50	3500	1627500/	162750/	(KSFC/2023 -24/AUCTION2)
15	10	(50+40)/2	60	2700	1255500/-	125550/-	(KSFC/2023 -24/AUCTION2)
16	40	(60+61)/2	(107+83)/2	5747.50	2672588/-	267258/-	(KSFC/2023 -24/AUCTION2)
17	61	(70+71)/2	(82.3+77.6)/2	5636.48	2620498/-	262050/-	(KSFC/2023 -24/AUCTION2)

2] ಮೆ: ಎಸ್.ಎಸ್.ಎ. ಎಂಟರ್ ಪ್ರೈಸಸ್, : ಪ್ಲಾಟ್ ನಂ.410–413/28–ಎ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಏರಿಯ, ಹೆಬ್ಬಾಳ, ಮೈಸೂರು ಪಾಲುದಾರರು ಶ್ರೀ ಹೆಚ್.ಆರ್.ಮಧು, ಶ್ರೀಮತಿ ನಳಿನಿ ಕೆ.ಆರ್. ಶ್ರೀಮತಿ ಕೋಕಿಲ ಕೆ.ಎನ್. (KSFC/2023-24/AUCTION4) ಅ) ಭೂಮಿ ಮತ್ತು ಕಟ್ಟಡ: ಪ್ಲಾಟ್ ನಂ.410–413/28–ಎ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಏರಿಯ, ಹೆಬ್ಬಾಳ, ಮೈಸೂರು 13.44 ಗುಂಟೆ ಭೂಮಿ ಹಾಗೂ ಅದರ ಮೇಲಿನ ಕೆಳಕಂಡ ಕಟ್ಟಡಗಳು (1) 29'x30' ಅಳತೆಯ ಎ ಸಿ ಶೀಟ್ ಚಾವಣಿಯುಳ್ಳ ಕೈಗಾರಿಕಾ ಕಟ್ಟಡ (2) 18'x14' ಅಳತೆಯ ಗೋದಾಮು, (3) 13'x23' ಅಳತೆಯ ಎ ಸಿ ಶೀಟ್ ಚಾವಣಿಯುಳ್ಳ ತೆರೆದ ಶೆಡ್, (4) ಕಾಂಪೌಡ್‌ವಾಲ್ ವಿತ್ ಗೇಟ್.
ಭೂಮಿ, ಕಟ್ಟಡ ನಿಗಧಿಪಡಿಸಿದ ಮೀಸಲು ಬೆಲೆಯು ರೂ 1,45,00,00/– ಆಗಿದ್ದು ಇದರ ಇ.ಎಂ.ಡಿ. ಹಣ ರೂ 14,50,000/–.
ಆ) ಯಂತ್ರೋಪಕರಣಗಳು; ಒಂದು ಲಾಟ್ ಖಾಲಿ ಪ್ಲಾಸ್ಟಿಕ್ ಬ್ಯಾರಲ್‌ಗಳು, ಮುರಿದ ಪೀಠೋಪಕರಣಗಳು ಹಾಗೂ ಯಂತ್ರೋಪಕರಣಗಳ ಶೀತಿಲಗೊಂಡ ಭಾಗಶ: ಬಿಡಿ ಭಾಗಗಳು.
ಯಂತ್ರೋಪಕರಣಗಳಿಗೆ ನಿಗಧಿಪಡಿಸಿದ ಮೀಸಲು ಬೆಲೆಯು ರೂ 15,000/– ಆಗಿದ್ದು ಇದರ ಇ.ಎಂ.ಡಿ. ಹಣ ರೂ 1,500/–.
ಪರೀವಿಕ್ಷಣೆಯ ದಿನಾಂಕ: 21.07.2023 ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ

3) ಮೆ: ಭಾಗ್ಯ ಇಂಡಕ್ಷನ್ಸ್: ಪ್ಲಾಟ್ ನಂ.269– M, ಹೆಬ್ಬಾಳ ಕೈಗಾರಿಕಾ ಪ್ರದೇಶ, RPGಹಿಂಭಾಗ, ಮೈಸೂರು–570018. **(KSFC/2023-24/AUCTION5)**
ಭೂಮಿ ಮತ್ತು ಕಟ್ಟಡ: 1047 ಚದರ ಮೀಟರ್ ಅಳತೆಯ ಕೈಗಾರಿಕಾ ಭೂಮಿ ಹಾಗೂ ಇದರ ಮೇಲೆ ಕೆಳಕಂಡ ಕಟ್ಟಡಗಳು. (1) 231.40 ಚದರ ಮೀಟರ್ ಅಳತೆಯ ಶೀಟ್ ರೋಫಡ್ ಕೈಗಾರಿಕಾ ಕಟ್ಟಡ **(2) 157.94** ಚದರ ಮೀಟರ್ ಅಳತೆಯ ಆರ್‌ಸಿಸಿ ರೋಫಡ್ ಕೈಗಾರಿಕಾ ಕಟ್ಟಡ **(3) 44.70** ಚದರ ಮೀಟರ್ ಅಳತೆಯ ಆರ್‌ಸಿಸಿ ರೋಫಡ್ ಕಛೇರಿ ಕಟ್ಟಡ.
ನಿಗಧಿಪಡಿಸಿದ ಮೀಸಲು ಬೆಲೆ: ರೂ.1,07,57,000/–,ಇ.ಎಂ.ಡಿ. ಮೊತ್ತ ರೂ.10,75,700/–.
ಯಂತ್ರೋಪಕರಣಗಳು: ಇಂಡಕ್ಷನ್ ಅರ್ಡ್ನಿಂಗ್ ಮತ್ತು ಪ್ರಿಸ್ಸಿಷನ್ ಮೆಷನಿಂಗ್ ಕೈಗಾರಿಕಾ ಘಟಕಕ್ಕೆ ಬಳಸುವ ಯಂತ್ರೋಪಕರಣಗಳು (ವಿವರಗಳನ್ನು ಇ ಪೋರ್ಟ್‌ಲ್‌ನಲ್ಲಿ ವಿಕ್ಷೀಸಬಹುದಾಗಿರುತ್ತದೆ).
ನಿಗಧಿಪಡಿಸಿದ ಮೀಸಲು ಬೆಲೆ: ರೂ.13,77,000/–,ಇ.ಎಂ.ಡಿ. ಮೊತ್ತ ರೂ.1,37,700/–.
ಪರೀವಿಕ್ಷಣೆಯ ದಿನಾಂಕ: 21.07.2023 ರಂದು ಮಧ್ಯಾಹ್ನ 2.30 ರಿಂದ 4.30 ಗಂಟೆಯವರೆಗೆ

4) ಮೆ: ಸಿ.ಸಿ.ಜಿ. ಗ್ರೂಪ್ಸ್: ಹಳೇ ಸರ್ವೆ ನಂ.18/1, ರೀಸರ್ವೆ ನಂ.18/5, ಬನ್ನಿಕುಪ್ಪೆಗ್ರಾಮ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ. **(KSFC/2023-24/AUCTION6) ಭೂಮಿ ಮತ್ತು ಕಟ್ಟಡ:** ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಯಾಗಿರುವ ಒಂದು ಎಕರೆ ಭೂಮಿ ಹಾಗೂ ಈ ಭೂಮಿಯ ಮೇಲೆ ಹೋಟೆಲ್ ಉದ್ಯಮಕ್ಕೆ ಸೂಕ್ತವಾದ ಕಟ್ಟಡಗಳು ಹಾಗೂ ಕಾರ್ ಪಾರ್ಕಿಂಗ್ ಜಾಗ ಈ ಭೂಮಿ ಮತ್ತು ಕಟ್ಟಡಗಳು ನೋಂದಾಯಿತ ಬೋಗ್ಯದ ಆಧಾರದ ಮೇಲೆ ದಿನಾಂಕ: **18.03.2033** ರ ಅವಧಿಯವರೆಗೆ ಎಲ್ಲಿ ಹೇಗಿವೆಯೋ ಹಾಗೇ ಮಾರಾಟಕ್ಕೆ ಲಭ್ಯವಿದೆ. **ನೋಂದಾಯಿತ ಬೋಗ್ಯದ ಕರಾರಿನ ವಿವರ ಹಾಗೂ ಕಟ್ಟಡಗಳ ವಿವರಗಳನ್ನು ಇ ಪೋರ್ಟ್‌ಲ್‌ನಲ್ಲಿ ವಿಕ್ಷೀಸಬಹುದಾಗಿರುತ್ತದೆ.**
ನಿಗಧಿಪಡಿಸಿದ ಮೀಸಲು ಬೆಲೆ: ರೂ.1,21,40,000/–, ಇ.ಎಂ.ಡಿ. ಮೊತ್ತ ರೂ.12,14,000/–.
ಪಿಠೋಪಕರಣಗಳು ಹಾಗೂ ಅಡುಗೆ ಮನೆ ಪಾತ್ರೆಗಳು ಹಾಗೂ ಯಂತ್ರೋಪಕರಣಗಳು: ಹೋಟೆಲ್ ಉದ್ಯಮಕ್ಕೆ ಸೂಕ್ತವಾದ ನೂತನ ಪಿಠೋಪಕರಣಗಳು ಹಾಗೂ ಅಡುಗೆ ಮನೆ ಪಾತ್ರೆಗಳು ಹಾಗೂ ಯಂತ್ರೋಪಕರಣಗಳು (ವಿವರಗಳನ್ನು ಇ ಪೋರ್ಟ್‌ಲ್‌ನಲ್ಲಿ ವಿಕ್ಷೀಸಬಹುದಾಗಿರುತ್ತದೆ).
ನಿಗಧಿಪಡಿಸಿದ ಮೀಸಲು ಬೆಲೆ: ರೂ.62,17,000/–, ಇ.ಎಂ.ಡಿ. ಮೊತ್ತ ರೂ.6,21,700/–.
ಮಹೀಂದ್ರ ಎಂಜಿನ್ ಮತ್ತು ಕ್ರಾಂಪ್ಟನ್ ಆವರ್ತಕ ವಿರುವ 30 ಕೆ ವಿ ಎ ಡಿ ಜಿ ಸೆಟ್ :
ನಿಗಧಿಪಡಿಸಿದ ಮೀಸಲು ಬೆಲೆ: ರೂ.2,96,000/–, ಇ.ಎಂ.ಡಿ. ಮೊತ್ತ ರೂ.29,600/–.
ಪರೀವಿಕ್ಷಣೆಯ ದಿನಾಂಕ: 20.07.2023 ರಂದು ಮಧ್ಯಾಹ್ನ 2.30 ರಿಂದ 4.30 ಪಿ.ಎಂ ಗಂಟೆಯವರೆಗೆ
ಮೇಲ್ಕಾಣಿಸಿದ ಎಲ್ಲಾ ಘಟಕಗಳ ಇ–ಹರಾಜು ಪ್ರಕ್ರಿಯೆ **ದಿನಾಂಕ: 27.07.2023 ರಂದು ಬೆಳಗ್ಗೆ 11.00 ಘಂಟೆಗೆ** ಪ್ರಾರಂಭವಾಗಿ **ದಿನಾಂಕ: 19.08.2023 ರಂದು ಬೆಳಗ್ಗೆ 11.30 ಗಂಟೆಗೆ ಮುಕ್ತಾಯವಾಗುತ್ತದೆ. ದಿನಾಂಕ 18.08.2023 ರ ಸಂಜೆ 5.00 ಘಂಟೆಯೊಳಗೆ** ಇ.ಎಂ.ಡಿ ಹಣವನ್ನು ಪಾವತಿಸತಕ್ಕದ್ದು.

ಇ–ಹರಾಜಿನ ಹೆಚ್ಚಿನ ನಿಯಮ ಮತ್ತು ಷರತ್ತುಗಳಿಗೆ ವೆಬ್‌ಸೈಟ್ **eproc.karnataka. gov.in** ನ್ನು ಭೇಟಿ ನೀಡುವುದು. ಆಸಕ್ತಿಯುಳ್ಳ ಖರೀದಿದಾರರು ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಯಾವಾಣಿ ಸಂಖ್ಯೆ: 080–23010900/23010901 ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸೆಲ್, ರೂಂ ನಂ. 141, ಗೇಟ್ ನಂ.2, ಎಂ. ಎಸ್. ಬಿಲ್ಡಿಂಗ್, ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರ ಸಹಾಯವನ್ನು ಪಡೆಯಬಹುದು, ಅಥವಾ ಅಧಿಕೃತ ಆಧಿಕಾರಿಗಳು ಮತ್ತು ಸಹಾಯಕ ಪ್ರಧಾನ ವ್ಯವಸ್ಥಾಪಕರು ಕೆ.ಎಸ್.ಎಫ್.ಸಿ. ಶಾಖಾ ಕಛೇರಿ, ಮೈಸೂರು ಇವರನ್ನು ಸಂಪರ್ಕಿಸಬಹುದು. ಮೊಬೈಲ್ ಸಂಖ್ಯೆ: 9448348195.

ದಿನಾಂಕ : 17.07.2023
ಸ್ಥಳ: ಮೈಸೂರು

ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು





ವಿದೇಶಿ ವಿ.ವಿ ಪ್ರವೇಶಕ್ಕಾಗಿ ಭಾಷಾ ಪ್ರವೇಶ ಪರೀಕ್ಷೆಗಳು

ಟೋಫೆಲ್ ಪರೀಕ್ಷಾ ವಿಧಗಳು

ಇಂಗ್ಲಿಷ್ ಮಾತನಾಡುವ ವಿದೇಶಗಳ ವಿಶ್ವವಿದ್ಯಾಲಯಗಳ ಪ್ರವೇಶ ಬಯಸುವ ಭಾರತೀಯ ವಿದ್ಯಾರ್ಥಿಗಳು ಎದುರಿಸಬೇಕಾದ ಟೋಫೆಲ್(TOEFL) ಪರೀಕ್ಷೆ ಕುರಿತು ಕಳೆದ ಸಂಚಿಕೆಯಲ್ಲಿ ಪ್ರಾಥಮಿಕ ಮಾಹಿತಿ ನೀಡಲಾಗಿತ್ತು. ಈ ಸಂಚಿಕೆಯಲ್ಲಿ ಪರೀಕ್ಷೆಯ ವಿಧಗಳು, ಎಲ್ಲೆಲ್ಲಿ ಈ ಪರೀಕ್ಷೆಗೆ ಮಾನ್ಯತೆ ಇದೆ.. ಇಂಥ ಹಲವು ಮಾಹಿತಿಗಳ ಬಗ್ಗೆ ತಿಳಿದುಕೊಳ್ಳೋಣ.

ಗುರುರಾಜ್ ಎಸ್. ದಾವಣಗೆರೆ

ಟೋಫೆಲ್ ಪರೀಕ್ಷೆಗೆ ನೋಂದಣಿ ಮಾಡಿಕೊಂಡವರು ನಾಲ್ಕು ವಿವಿಧ ಬಗೆಯ ಪರೀಕ್ಷೆ ಎದುರಿಸಬಹುದು.

1. ಇಟಿಎಸ್ ಟೋಫೆಲ್ ಐಬಿಟಿ(ETS TOEFL IBT)– ಐಬಿಟಿ ಎಂದರೆ ಇಂಟರ್‌ನೆಟ್ ಬೇಸ್ಡ್ ಟೆಸ್ಟ್ ಎಂದರ್ಥ. ಈ ವಿಧಾನದಲ್ಲಿ ನೋಂದಣಿ ಮಾಡಿಕೊಂಡ ನಿಗದಿತ ಪರೀಕ್ಷಾ ಕೇಂದ್ರಕ್ಕೆ ತೆರಳಿ ಅಲ್ಲಿನ ಪರೀಕ್ಷಾ ಕೊಠಡಿಯಲ್ಲಿ ಇಂಟರ್‌ನೆಟ್ ಆಧಾರಿತ ಪರೀಕ್ಷೆ ಬರೆಯಬಹುದು.
2. ಟೋಫೆಲ್ ಐಬಿಟಿ ಹೋಮ್ ಎಡಿಷನ್ (TOEFL iBT home edition)– ಅಂದರೆ ಪರೀಕ್ಷಾ ಕೇಂದ್ರಕ್ಕೆ ತೆರಳದೆ ಮನೆಯಿಂದಲೇ ಆನ್‌ಲೈನ್ ಮೂಲಕ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.
3. ಟೋಫೆಲ್ ಟೆಸ್ಟ್ ಆನ್ ಪೇಪರ್ (TOEFL Test on Paper) – ಅಂದರೆ ನೋಂದಣಿ ಮಾಡಿಕೊಂಡ ಪರೀಕ್ಷಾ ಕೇಂದ್ರಕ್ಕೆ ತೆರಳಿ ಪೆನ್ನು, ಪೇಪರ್ ಬಳಸಿ 90 ಅಂಕಗಳ ಓದುವ, ಕೇಳಿಸಿಕೊಳ್ಳುವ ಮತ್ತು ಬರೆಯುವ ಪರೀಕ್ಷೆಗಳನ್ನೆದುರಿಸಬಹುದು. ಆದರೆ ಮಾತನಾಡುವ (ಸಂಭಾಷಣೆ) ಪರೀಕ್ಷೆಯನ್ನು ಮನೆಯಿಂದ ಅಥವಾ ಕಂಪ್ಯೂಟರ್ ಸೆಂಟರ್‌ಗಳಿಂದ ಆನ್‌ಲೈನ್ ಮಾದರಿಯಲ್ಲಿ ತೆಗೆದುಕೊಳ್ಳಬಹುದು. ಸಂಭಾಷಣೆ ಪರೀಕ್ಷೆಯನ್ನು ಇನ್ನೊಂದು ಬದಿಯಿಂದ ಅಧ್ಯಾಪಕರೇ ನಡೆಸುತ್ತಾರೆ. ಉಳಿದೆರಡು ಮಾದರಿಗಳಲ್ಲೂ ಸಂಭಾಷಣೆ ಪರೀಕ್ಷೆ ನಡೆಸುವ ಅಧ್ಯಾಪಕರ ಸಹಯೋಗದಲ್ಲೇ ನಡೆಯುತ್ತದೆ.
4. ಟೋಫೆಲ್ ಎಸೆನ್ಷಿಯಲ್ಸ್ ಟೆಸ್ಟ್(TOEFL Essentials Test)- ಇದು ಮೊದಲ ಎರಡು ಮಾದರಿಗಳಲ್ಲಿ ಲಭ್ಯವಿರುವ ಪರೀಕ್ಷೆ. ಇದರಲ್ಲಿ ಓದುವ, ಬರೆಯುವ, ಮಾತನಾಡುವ ಮತ್ತು ಕೇಳಿಸಿಕೊಳ್ಳುವ ಪ್ರಶ್ನಾ ವಿಭಾಗಗಳ ಜೊತೆಗೆ ಅಭ್ಯರ್ಥಿಯು ತನ್ನ ಕುರಿತಾದ ಐದು ನಿಮಿಷದ ವಿಡಿಯೊ ಹೇಳಿಕೆ ನೀಡಬೇಕಾಗುತ್ತದೆ. ಪರೀಕ್ಷೆಯ ಅವಧಿ 90 ನಿಮಿಷಗಳು.

ಇಂಗ್ಲಿಷ್ ಭಾಷಾ ಪರೀಕ್ಷೆಗಳು

ಇಂಗ್ಲಿಷ್‌ನ್ನು ಮೂಲಭಾಷೆಯನ್ನಾಗಿ ಮಾತನಾಡುವ ದೇಶಗಳ ವಿವಿಗಳಲ್ಲಿ ಪ್ರವೇಶ ಪಡೆಯಲು ನಾಲ್ಕು ವಿವಿಧ ಹೆಸರಿನ ಪರೀಕ್ಷೆಗಳಿವೆ.

ಭಾರತದಿಂದ ಎಷ್ಟು ವಿದ್ಯಾರ್ಥಿಗಳು?

ಭಾರತದಲ್ಲಿ ಕಳೆದ ವರ್ಷ ಏಳೂವರೆ ಲಕ್ಷ ವಿದ್ಯಾರ್ಥಿಗಳು ವಿವಿಧ ಪರೀಕ್ಷೆಗಳನ್ನು ಬರೆದು ವಿದೇಶಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಆಯ್ಕೆಯಾಗಿದ್ದರು. ಆರು ವರ್ಷಗಳಲ್ಲಿ 30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದೇಶಗಳ ವಿವಿಗಳಿಗೆ ತೆರಳಿದ್ದಾರೆ. ಭಾರತದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಇಟಿಎಸ್‌ನವರು 'ಇಟಿಎಸ್ ಇಂಡಿಯ' ಎಂಬ ಪ್ರತ್ಯೇಕ ವ್ಯವಸ್ಥೆ ಮಾಡಿದ್ದಾರೆ.

ಅಮೆರಿಕದ ಎಲ್ಲ ವಿವಿಗಳಲ್ಲೂ ಟೋಫೆಲ್ ಐಬಿಟಿ ಪರೀಕ್ಷೆಯ ಫಲಿತಾಂಶವನ್ನು ಮಾನ್ಯ ಮಾಡಲಾಗುತ್ತದೆ. ವಿಶ್ವದ 200 ದೇಶಗಳ 9000 ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳಲ್ಲಿ ವಾರದ ಆರು ದಿನಗಳಲ್ಲಿ ಪರೀಕ್ಷೆ ನಡೆಯುತ್ತದೆ. ವಿದೇಶ ವಿದ್ಯಾಭ್ಯಾಸಕ್ಕಾಗಿ ಭಾರತದ ವಿದ್ಯಾರ್ಥಿಗಳು ವಾರ್ಷಿಕ 8200 ಕೋಟಿ ಡಾಲರ್ ಹಣ ವ್ಯಯಿಸುತ್ತಾರೆ ಎಂಬುದು ತಿಳಿದು ಬಂದಿದೆ.

1. ಟೋಫೆಲ್(TOEFL) – Test of English as Foreign Language (3 ಗಂಟೆ 30 ನಿಮಿಷ)
2. ಐಲ್ಟ್ಸ್(IELTS) – International English Language Testing system (180 ನಿಮಿಷ)
3. ಪಿಟಿಇ(PTE)– Pearson Test of English (120 ನಿಮಿಷ)
4. ಡಿಇಟಿ (DET)– Duolingo English Test (60 ನಿಮಿಷ)

ಎಲ್ಲೆಲ್ಲಿ ಮಾನ್ಯತೆ?

ಟೋಫೆಲ್ ಪರೀಕ್ಷೆ ಅಮೆರಿಕ, ಕೆನಡ ದೇಶಗಳಲ್ಲಿ ಹೆಚ್ಚಿನ ಮಾನ್ಯತೆ ಪಡೆದಿದ್ದು ವಿಶ್ವದ 160 ದೇಶಗಳ ವಿಶ್ವ ವಿದ್ಯಾಲಯಗಳಲ್ಲಿ ಪ್ರವೇಶಾತಿ ನೀಡಲಾಗುತ್ತದೆ. ಅಮೆರಿಕದ ಎಲ್ಲ ವಿವಿಗಳೂ ಸೇರಿ 11 ಸಾವಿರಕ್ಕೂ ಹೆಚ್ಚು ಕಾಲೇಜುಗಳು ಟೋಫೆಲ್ ಪರೀಕ್ಷೆಯ ಫಲಿತಾಂಶವನ್ನು ಪರಿಗಣಿಸುತ್ತವೆ.

ಐಲ್ಟ್ಸ್(ILETS) ಪರೀಕ್ಷೆ ಕೆನಡ, ಬ್ರಿಟನ್ ಮತ್ತು ಆಸ್ಟ್ರೇಲಿಯಾಗಳಲ್ಲಿ ಜನಪ್ರಿಯವಾಗಿದೆ. ಪಿಟಿಇ ಪರೀಕ್ಷೆಗೆ ಬ್ರಿಟನ್, ಆಸ್ಟ್ರೇಲಿಯಾ, ಅಮೆರಿಕ ಮತ್ತು ಕೆನಡಗಳಲ್ಲಿ ಮಾನ್ಯತೆ ಇದೆ. ಡುಯೊಲಿಂಗೊ ಪರೀಕ್ಷೆಯು ಅಮೆರಿಕ ಕೆನಡಗಳಿಗೆ ಸೀಮಿತವಾಗಿದೆ.

ಟೋಫೆಲ್ ಪರೀಕ್ಷೆ ವಿಶ್ವದ ಮುಕ್ಕಾಲು ಪಾಲು ದೇಶಗಳಲ್ಲಿ ಮಾನ್ಯತೆ ಪಡೆದಿದೆ ಮತ್ತು ಅಭ್ಯರ್ಥಿಯ ಕ್ಷಮತೆಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಉದಾಹರಣೆಗೆ 30 ಅಂಕಗಳ 'ಓದುವ'(Reading) ಪರೀಕ್ಷಾ ವಿಭಾಗದಲ್ಲಿ ಮೊದಲ ಎರಡು – ಮೂರು ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಲಾಗದಿದ್ದರೆ ಮುಂದಿನ ವಿಭಾಗಕ್ಕೆ ಅಂದರೆ 'ಬರೆಯುವ' ಇಲ್ಲವೆ 'ಕೇಳಿಸಿಕೊಳ್ಳುವ' ವಿಭಾಗದಲ್ಲಿ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸಿ ಉತ್ತಮ ಅಂಕ ಗಳಿಸಬಹುದು.

ತರಬೇತಿ ಇದೆಯೇ?

ಟೋಫೆಲ್ ಪರೀಕ್ಷೆ ತೆಗೆದುಕೊಳ್ಳುವವರು ನಿಗದಿತ ಶುಲ್ಕ ಪಾವತಿಸಿ ಅಗತ್ಯ ಪರೀಕ್ಷಾ ಪೂರ್ವ ತರಬೇತಿ ಪಡೆಯಬಹುದು. ಪರೀಕ್ಷೆ ನಡೆಸುವ ಇಟಿಎಸ್‌ನವರೇ ಆನ್‌ಲೈನ್ ಮಾದರಿಯಲ್ಲಿ ಟೋಫೆಲ್ ಪ್ರಾಕ್ಟೀಸ್ ಆನ್‌ಲೈನ್ (TOEFL Practice Online –TPO)ಎಂಬ ವಿಶೇಷ ತರಬೇತಿ ನಿಡುತ್ತಾರೆ. ಇವರದೇ ಅಂಗಸಂಸ್ಥೆಯಾದ 'ದಿ ಇನ್‌ಸ್ಪೈರ್ಸ್ ಗೈಡ್' ವಿಭಾಗವು ಆರು ವಾರಗಳ ಸಮಗ್ರ ತರಬೇತಿ ನೀಡಿ ವಿದ್ಯಾರ್ಥಿಗಳನ್ನು ಟೋಫೆಲ್ ಪರೀಕ್ಷೆಗೆ ಅಣಿಗೊಳಿಸುತ್ತದೆ. ಕ್ವಿಜ್, ವಿಡಿಯೊ ಮತ್ತು ನುರಿತ ಅಧ್ಯಾಪಕರೊಂದಿಗೆ ಸಂವಾದಗಳ ಮೂಲಕ ತರಬೇತಿ ಇರುತ್ತದೆ. ನಿಗದಿತ ಪರೀಕ್ಷೆಗೆ ಮುನ್ನ ಅಭ್ಯಾಸ ಪರೀಕ್ಷೆ (Practice Test) ಗಳಿಗೂ ಅವಕಾಶವಿದೆ. ಇದಲ್ಲದೆ ಟೋಫೆಲ್ ಐಬಿಟಿ ಪ್ರೆಪ್ ಪ್ಲಾನರ್(TOEFL iBT Test Prep Planner) ಎಂಬ ಎಂಟು ವಾರಗಳ ಸಮಗ್ರ ತರಬೇತಿಯೂ ಇಟಿಎಸ್ ಕಡೆಯಿಂದ ಲಭ್ಯವಿದೆ. ತರಬೇತಿ ಕುರಿತ ಮಾಹಿತಿಗಾಗಿ https://www.preply.com v2.ereg.ets.org, www.udemy.com ಈ ಜಾಲತಾಣಗಳನ್ನು ನೋಡಬಹುದು.

ಪರೀಕ್ಷಾ ಶುಲ್ಕ

ದೇಶದ ಯಾವುದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅಭ್ಯರ್ಥಿಗಳು ನೋಂದಣಿ ಶುಲ್ಕವಾಗಿ 195 ಡಾಲರ್ (₹16,000) ಹಣ ಸಂದಾಯಮಾಡಬೇಕಾಗುತ್ತದೆ. ನೋಂದಣಿ ಮಾಡಿದ ದಿನಾಂಕ ಮತ್ತು ಕೇಂದ್ರದ ಬದಲಾವಣೆಗೆ ಹೆಚ್ಚುವರಿಯಾಗಿ 60 (₹4924.65) ರಿಂದ 190 ಡಾಲರ್ (₹15594.73) ಶುಲ್ಕ ಭರಿಸಬೇಕಾಗುತ್ತದೆ. ನೋಂದಣಿ ವಿಳಂಬವಾದರೆ, 40(₹3283.10) ರಿಂದ 80 (₹6566.20) ಡಾಲರ್ ಖರ್ಚು ತಗುಲುತ್ತದೆ.

ಪರೀಕ್ಷೆ ಫಲಿತಾಂಶ ಸುಧಾರಣೆ

ಪರೀಕ್ಷೆಯ ನಂತರ ದೊರಕಿದ ಫಲಿತಾಂಶ ತೃಪ್ತಿಯಾಗದೆ ಮತ್ತೊಂದು ಪರೀಕ್ಷೆ ಬರೆದು, ಅದರ ಅಂಕಗಳು ಮೊದಲ ಪರೀಕ್ಷೆಗಿಂತ ಕಡಿಮೆ ಬಂದಲ್ಲಿ, ಮೊದಲಿನ ಅಂಕಗಳನ್ನೇ ಪಡೆಯಲು 20 ಡಾಲರ್(₹1641.55) ಸಂದಾಯ ಮಾಡಬೇಕು. ಬರೆಯುವ ಮತ್ತು ಮಾತನಾಡುವ ಪರೀಕ್ಷೆಯ ಅಂಕಗಳ ಪುನರ್‌ಪರಿಶೀಲನೆಗೆ 80 ಡಾಲರ್(₹6566.20) ಶುಲ್ಕ ಪಾವತಿಸಬೇಕು.

'ಮೈ ಬೆಸ್ಟ್ ಸ್ಕೋರ್' ಅವಕಾಶ

ಅಭ್ಯರ್ಥಿಯು ಮೊದಲ ಸಲ ಪರೀಕ್ಷೆ ಎದುರಿಸಿದಾಗ ನಾಲ್ಕು ವಿಭಾಗಗಳ ಪೈಕಿ ಎರಡಕ್ಕೆ ಉತ್ತಮ ಅಂಕ ಬಂದು ಉಳಿದೆರೆಡಕ್ಕೆ ಬರದಿದ್ದಾಗ, ಮತ್ತೊಮ್ಮೆ ಪರೀಕ್ಷೆ ಎದುರಿಸಬಹುದು. ಎರಡನೇ ಪ್ರಯತ್ನದಲ್ಲಿ, ಕಡಿಮೆ ಅಂಕ ಬಂದ ವಿಭಾಗಗಳಲ್ಲಿ ಸುಧಾರಣೆಯಾಗಿ, ಚೆನ್ನಾಗಿ ಅಂಕಗಳಿಸಿದ್ದ ವಿಭಾಗಗಳಲ್ಲಿ ಕಡಿಮೆ ಅಂಕ ಬರಬಹುದು. ಒಂದೊಂದು ಸಲ ಒಂದೊಂದು ಫಲಿತಾಂಶ ಬಂದಾಗ ಎರಡು ವರ್ಷಗಳ ಅವಧಿಯಲ್ಲಿ ಅಭ್ಯರ್ಥಿ ಎದುರಿಸಿದ ಪರೀಕ್ಷೆಗಳಲ್ಲಿ ಗಳಿಸಿದ ವಿಭಾಗವಾರು ಹೆಚ್ಚು ಅಂಕಗಳನ್ನು ಕ್ರೋಢೀಕರಿಸಿಕೊಳ್ಳಬಹುದು. ಇದನ್ನು 'ಮೈ ಬೆಸ್ಟ್ ಸ್ಕೋರ್ಸ್' ಎನ್ನುತ್ತಾರೆ. 2019ರ ಆಗಸ್ಟ್‌ನಿಂದ ಈ ವಿಧಾನ ಜಾರಿಯಲ್ಲಿದೆ.

ಮಧ್ಯಾಹ್ನವೂ ಪರೀಕ್ಷೆ

ಮೊದಲೆಲ್ಲ ಟೋಫೆಲ್ ಪರೀಕ್ಷೆ ಆಯ್ದ ಪರೀಕ್ಷಾ ಕೇಂದ್ರಗಳಲ್ಲಿ ಬೆಳಗಿನ 10 ರಿಂದ ಮಧ್ಯಾಹ್ನ 1.30 ರ ವರೆಗೆ ಮಾತ್ರ ನಡೆಯುತ್ತಿತ್ತು. ಈಗ ಪರೀಕ್ಷೆಗೆ ಹಾಜರಾಗುವವರ ಸಂಖ್ಯೆ ಹೆಚ್ಚಾಗಿರುವ ಪರಿಣಾಮ, ಮಧ್ಯಾಹ್ನದ ವೇಳೆಯೂ ಪರೀಕ್ಷೆಗಳು ನಡೆಯುತ್ತಿವೆ.

ಟೋಫೆಲ್ ಎಸೆನ್ಶಿಯಲ್ಸ್ ಟೆಸ್ಟ್ (TOEFL Essentials Test)

ವಿಭಾಗ	ಪ್ರಶ್ನೆಗಳು	ಅಂದಾಜು ಸಮಯ
ರೀಡಿಂಗ್ (ಓದುವುದು)	20 - 45	22-33 ನಿಮಿಷ
ಲಿಸನಿಂಗ್ (ಕೇಳಿಸಿಕೊಳ್ಳುವುದು)	30 - 45	21-34 ನಿಮಿಷ
ಸ್ಪೀಕಿಂಗ್ (ಮಾತನಾಡುವುದು)	03	13 ನಿಮಿಷ
ರೈಟಿಂಗ್ (ಬರೆಯುವುದು)	15 - 19	24-30 ನಿಮಿಷ

ಟೋಫೆಲ್ ಐಬಿಟಿ – 2023 (ಆನ್‌ಲೈನ್ ಮಾದರಿ)

ಇದೇ ಜುಲೈ ತಿಂಗಳಿನಿಂದ ಟೋಫೆಲ್ ಪರೀಕ್ಷೆಯ ಅವಧಿಯನ್ನು 116 ನಿಮಿಷಗಳಿಗೆ ಇಳಿಸಲಾಗಿದ್ದು ಪ್ರತಿ ವಿಭಾಗದ ಪರೀಕ್ಷಾ ಸ್ವರೂಪ ಈ ಕೆಳಗಿನಂತಿರುತ್ತದೆ.

ವಿಭಾಗ	ಪ್ರಶ್ನೆಗಳು	ಅಂದಾಜು ಸಮಯ
ರೀಡಿಂಗ್ (ಓದುವುದು)	20	35 ನಿಮಿಷ
ಲಿಸನಿಂಗ್ (ಕೇಳಿಸಿಕೊಳ್ಳುವುದು)	28	36 ನಿಮಿಷ
ಸ್ಪೀಕಿಂಗ್ (ಮಾತನಾಡುವುದು)	04	16 ನಿಮಿಷ
ರೈಟಿಂಗ್ (ಬರೆಯುವುದು)	02	29 ನಿಮಿಷ

(ಲೇಖಕರು – ಪ್ರಾಚಾರ್ಯರು,ವಿದಿಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು)

(ಮುಗಿಯಿತು)

ಮ್ಯಾನೇಜ್ (MANAGE) ಇಂಟರ್ನ್‌ಷಿಪ್ 2023

ಹೈದರಾಬಾದ್‌ನಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಎಕ್ಸ್‌ಟೆನ್ಷನ್ ಮ್ಯಾನೇಜ್‌ಮೆಂಟ್ (MANAGE- ಮ್ಯಾನೇಜ್) ಸಂಸ್ಥೆ ಸ್ನಾತಕೋತ್ತರ ಅಥವಾ ಪಿ.ಎಚ್‌ಡಿ ಪದವೀಧರರಿಂದ 'ಮ್ಯಾನೇಜ್ ಇಂಟರ್ನ್‌ಷಿಪ್-2023' ಗಾಗಿ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಕೃಷಿ ವಿಸ್ತರಣೆ/ಕೃಷಿ ಮಾರುಕಟ್ಟೆ / ಹೋಮ್ ಸೈನ್ಸ್ ಎಕ್ಸ್‌ಟೆನ್ಷನ್ / ಅಗ್ರಿ-ಬಿಸಿನೆಸ್ ಮ್ಯಾನೇಜ್‌ಮೆಂಟ್ / ಅಗ್ರಿಕಲ್ಚರಲ್ ಎಕನಾಮಿಕ್ಸ್ /ಪಶುವೈದ್ಯಕೀಯ ವಿಸ್ತರಣೆ / ಫಿಷರೀಸ್ ಎಕ್ಸ್‌ಟೆನ್ಶನ್/ಅರಣ್ಯಶಾಸ್ತ್ರ / ಫುಡ್ ಟೆಕ್ನಾಲಜಿ/ ಅಗ್ರಿಕಲ್ಚರ್ ಎಂಜಿನಿಯರಿಂಗ್/ಮಾಸ್ ಕಮ್ಯುನಿಕೇಷನ್ ಆ್ಯಂಡ್ ಜರ್ನಲಿಸಂ /ಐಟಿ / ಅಗ್ರಿಕಲ್ಚರ್ ಎಂಜಿನಿಯರಿಂಗ್ /ಆಹಾರ ಸಂಸ್ಕರಣೆ ಈ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಅಥವಾ ಪಿಎಚ್.ಡಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ದಾರರು ಈ ಕೋರ್ಸ್‌ಗಳಲ್ಲಿ ಶೇ 80 ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. ಆರ್ಥಿಕ ನೆರವು: ಮಾಸಿಕ ₹35,000ವರೆಗೆ

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಕೊನೆ ದಿನ: ವರ್ಷದಲ್ಲಿ ಯಾವಾಗ ಬೇಕಾದರೂ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ: www.b4s.in/praja/MEP2

ಕೃಪೆ: www.buddy4study.com

'ಕೃಷಿ ಉದ್ಯಮಿ' ಕೋರ್ಸ್‌ಗೆ ಅರ್ಜಿ ಆಹ್ವಾನ

ಕೃಷಿಯಲ್ಲಿ ಖರ್ಚನ್ನು ಕಡಿಮೆ ಮಾಡಿ ಮತ್ತು ಲಾಭ ಹೆಚ್ಚಿಸಲು ಸಾಧ್ಯವಾಗುವ ಕಿರು ಉದ್ಯಮಗಳನ್ನು ಪ್ರಾರಂಭಿಸಲು ಪ್ರೇರೇಪಿಸುವ ಮತ್ತು ಬೆಂಬಲ ನೀಡಲು ಸಂವಾದ-ಬದುಕು ಸೆಂಟರ್ ಫಾರ್ ಲೈವ್ಲಿಹುಡ್ ಲರ್ನಿಂಗ್ ಸಂಸ್ಥೆ, 'ಕೃಷಿ ಉದ್ಯಮಿ' ಎಂಬ ಮೂರು ತಿಂಗಳ ಸೆಮಿ ರೆಸಿಡೆನ್ಸಿಯಲ್ ಕೋರ್ಸ್ ಆಯೋಜಿಸಿದೆ.

ಈ ಮೂಲಕ ಬೇಸಾಯ ಮಾಡುವವರ ಕೈಯಲ್ಲಿ ಒಂದಿಷ್ಟು ಹಣ ಉಳಿಯುವಂತೆ ಮಾಡುವುದು ಕೋರ್ಸ್‌ನ ಉದ್ದೇಶ.

ಕೋರ್ಸ್‌ನಲ್ಲಿ ಸಾವಯವ ಗೊಬ್ಬರ, ಬೀಜ ಮತ್ತಿತರ ಕೃಷಿ ಒಳಸುರಿಗಳ ಉತ್ಪಾದನೆ ಮತ್ತು ಮಾರುಕಟ್ಟೆ ಕುರಿತ ತರಬೇತಿ. ಕೃಷಿ ಉಪಕರಣಗಳು ಮತ್ತು ಬೇಸಾಯಕ್ಕೆ ಅಗತ್ಯವಿರುವ ಬೆಂಬಲ ಸೇವೆಗಳು, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸೇರಿದಂತೆ ವಿವಿಧ ಹಂತಗಳಲ್ಲಿ, ಕೃಷಿ ಕ್ಷೇತ್ರದ ಕಿರು ಉದ್ಯಮ ಸಾಧ್ಯತೆಗಳ ಪರಿಚಯ ಮಾಡಿಸುವುದು. ಕೃಷಿ ಕೇಂದ್ರಿತ ಉದ್ಯಮಗಳ ಪ್ರಾರಂಭ, ಮಾರುಕಟ್ಟೆ ನಿರ್ವಹಣೆ, ಉದ್ಯಮ ನಿರ್ವಹಣೆ , ಹಣಕಾಸು ನಿರ್ವಹಣೆ ಕೌಶಲಗಳನ್ನು ಕಲಿಸಲಾಗುವುದು.

ಅನುಭವಿ ಉದ್ಯಮಿಗಳ ಕ್ಷೇತ್ರ ಭೇಟಿ, ಕ್ಷೇತ್ರದ ತಜ್ಞರೊಂದಿಗೆ ಮಾತುಕತೆ, ಪ್ರಾಯೋಗಿಕ ತರಗತಿಗಳು ಕೋರ್ಸ್‌ನ ಕಲಿಕಾ ವಿಧಾನವಾಗಿದೆ. ಈ ಮೂಲಕ, ಯುವಜನರು ಕೃಷಿ ಕ್ಷೇತ್ರದಲ್ಲಿ ಬದುಕನ್ನು ಕಟ್ಟಿಕೊಳ್ಳುವಂತೆ ಉತ್ತೇಜಿಸುವುದು ಮತ್ತು ಕೃಷಿಕರ ಆರ್ಥಿಕ ಸ್ಥಿತಿ ಸುಧಾರಿಸಲು ನೆರವಾಗುವಂತೆ ಮಾಡುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ.

ಆಸಕ್ತರು ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜುಲೈ 22 ಕೊನೆಯ ದಿನ. ಆಯ್ಕೆ ಪ್ರಕ್ರಿಯೆ ನಂತರ ಆಗಸ್ಟ್ ಮೊದಲ ವಾರದಿಂದ ಕೋರ್ಸ್ ಪ್ರಾರಂಭವಾಗಲಿದೆ.

ಮಾಹಿತಿಗಾಗಿ: 9611562812, 8105818026 ಕರೆಮಾಡಬಹುದು ಅಥವಾ farmer.fieldschool@samvadabaduku.org ಗೆ ಮೇಲ್ ಕಳಿಸಬಹುದು. ಇಲ್ಲವೇ, ಸಂವಾದ, ಬಂಜಾರಪಾಳ್ಯ, ಅಗರ ಗ್ರಾಮ, ತಾತಗುಣಿ ಅಂಚೆ, ಬೆಂಗಳೂರು ಉತ್ತರ -82 ಇಲ್ಲಿಗೆ ಖುದ್ದಾಗಿ ಸಂಪರ್ಕಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

'ರೋಲ್ಸ್-ರಾಯ್ಸ್ ಸ್ಕಾಲರ್‌ಷಿಪ್ ಫಾರ್ ವಿಮೆನ್ ಎಂಜಿನಿಯರಿಂಗ್ ಸ್ಟೂಡೆಂಟ್ಸ್

ವಿವರ: ಎಐಸಿಟಿಇ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಂಜಿನಿಯರಿಂಗ್ ಪದವಿ ಕಲಿಯುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸುವುದಕ್ಕಾಗಿ ರೋಲ್ಸ್ ರಾಯ್ ಇಂಡಿಯಾ ರೂಪಿಸಿರುವ ಸ್ಕಾಲರ್‌ಷಿಪ್ ಯೋಜನೆ 'ರೋಲ್ಸ್-ರಾಯ್ಸ್ ಉನ್ನತಿ ಸ್ಕಾಲರ್‌ಷಿಪ್ ಫಾರ್ ವಿಮೆನ್ ಎಂಜಿನಿಯರಿಂಗ್ ಸ್ಟೂಡೆಂಟ್ಸ್.

ಅರ್ಹತೆ: 1, 2,3ನೇ ವರ್ಷದಲ್ಲಿ ಎಂಜಿನಿಯರಿಂಗ್ ಪದವಿ ಓದುತ್ತಿರುವ (ಏರೋಸ್ಪೇಸ್, ಮೆರೈನ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್ ಇತ್ಯಾದಿ ಕ್ಷೇತ್ರಗಳಲ್ಲಿ) ವಿದ್ಯಾರ್ಥಿನಿಯರು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 10 ಮತ್ತು 12ನೇ ತರಗತಿಯಲ್ಲಿ ಶೇ 60ರಷ್ಟು ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯ ₹ 4 ಲಕ್ಷ ಮೀರಬಾರದು.

ಅಂಗವಿಕಲರು, ಏಕಪೋಷಕರ (ಸಿಂಗಲ್ ಪೇರೆಂಟ್) ಮಕ್ಕಳು, ಅನಾಥರಿಗೆ ವಿಶೇಷ ಆದ್ಯತೆ ನೀಡಲಾಗುತ್ತದೆ. ಈ ಹಿಂದೆ ಇದೇ ವಿದ್ಯಾರ್ಥಿವೇತನ ಪಡೆದ ಹಾಗೂ ಅಂತಿಮ ವರ್ಷದಲ್ಲಿರುವ ಎಂಜಿನಿಯರಿಂಗ್ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ₹ 35 ಸಾವಿರ

ಅರ್ಜಿ ಸಲ್ಲಿಸಲು ಕೊನೆ ದಿನ: 31.8.2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಹಾಕಿ.

ಮಾಹಿತಿಗೆ: www.b4s.in/praja/UNS5

'ಎಚ್‌ಡಿಎಫ್‌ಸಿ' ಪರಿವರ್ತನ್ಸ್ ಪ್ರೋಗ್ರಾಂ

ವಿವರ:1ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಎಚ್‌ಡಿಎಫ್‌ಸಿ ಬ್ಯಾಂಕ್ ರೂಪಿಸಿರುವ ಕಾರ್ಯಕ್ರಮ ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ ಪ್ರೋಗ್ರಾಂ.

ಅರ್ಹತೆ: ಇದು ಭಾರತೀಯ ಪ್ರಜೆಗಳಿಗೆ ಮಾತ್ರ ಮುಕ್ತವಾಗಿದೆ. ವಿದ್ಯಾರ್ಥಿಗಳು 1 ರಿಂದ 12ನೇ ತರಗತಿ, ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್, ಪದವಿಪೂರ್ವ ಅಥವಾ ಸ್ನಾತಕೋತ್ತರ (ಸಾಮಾನ್ಯ ಮತ್ತು ವೃತ್ತಿಪರ ಸೇರಿದಂತೆ) ಕೋರ್ಸ್‌ಗಳಲ್ಲಿ ಓದುತ್ತಿರಬೇಕು. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 55 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು ಮತ್ತು ಕುಟುಂಬದ ವಾರ್ಷಿಕ ಆದಾಯವು ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ₹ 75,000ದವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 30-09-2023

ಹೆಚ್ಚಿನ ಮಾಹಿತಿಗೆ:

ಆನ್‌ಲೈನ್ : www.b4s.in/praja/HDFC44

ಕೃಪೆ: www.buddy4study.com

ಸಿಪಿಎ ಕೋರ್ಸ್ ಮಾಡುವುದು ಹೇಗೆ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಮುಗಿಸಿದ್ದು, ಈಗ ಅಮೆರಿಕ ದೇಶದ ಸಿಪಿಎ ಕೋರ್ಸ್ ಮಾಡಲು ಇಚ್ಛಿಸಿದ್ದೇನೆ. ಮಾರ್ಗದರ್ಶನ ನೀಡಿ.

ದಿಶಂತ್ ವಿ ರಾವ್, ಮಂಡ್ಯ.

ಅಮೆರಿಕ ದೇಶದ ವಿವಿಧ ರಾಜ್ಯಗಳ ಲೆಕ್ಕಪತ್ರ ಮಂಡಳಿ ನೀಡುವ ಸಿಪಿಎ (ಸರ್ಟಿಫೈಡ್ ಪಬ್ಲಿಕ್ ಅಕೌಂಟೆಂಟ್), ಒಂದು ಪ್ರತಿಷ್ಠಿತ ಅಕೌಂಟೆನ್ಸಿ ಪರವಾನಗಿ ಆಗಿದ್ದು, ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಅಪಾರವಾದ ಮನ್ನಣೆಯಿದೆ. ಈಗ ಭಾರತದಲ್ಲಿದ್ದುಕೊಂಡೇ ಈ ಪರವಾನಗಿಯನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://nasba.org/licensure/gettingacpalicense/ https://www.becker.com/blog/cpa/how-to-become-a-cpa-in-india

2. ನಾನು ಬಿ.ಎಸ್ಸಿ (ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ) ಮುಗಿಸಿದ್ದು, ಎಂ.ಎಸ್ಸಿ ಯಾವ ವಿಷಯದಲ್ಲಿ ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಮೊದಲಿಗೆ, ಎಂ.ಎಸ್ಸಿ ನಂತರದ ನಿಮ್ಮ ವೃತ್ತಿಜೀವನದ ಕನಸುಗಳೇನು ಎನ್ನುವುದರ ಬಗ್ಗೆ ಸ್ಪಷ್ಟತೆಯಿರಬೇಕು ಮತ್ತು ಅದರಂತೆ ಶಿಕ್ಷಣವನ್ನು ಮುಂದುವರೆಸಬೇಕು. ಎಂ.ಎಸ್ಸಿ ಕೋರ್ಸ್ ಅನ್ನು ಯಾವುದಾದರೂ ಒಂದು ವಿಷಯದಲ್ಲಿ (ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ) ಅಥವಾ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದಂತೆ, ವಿಶ್ವವಿದ್ಯಾಲಯ ಅನುದಾನ ಆಯೋಗ ಮತ್ತು ವಿಶ್ವವಿದ್ಯಾಲಯದ ನಿಬಂಧನೆಗಳ ಅನುಸಾರ, ಎರಡು ವಿಷಯಗಳಲ್ಲಿಯೂ ಮಾಡಬಹುದು (ಡ್ಯುಯಲ್ ಡಿಗ್ರಿ). ಎರಡೂ ಕೋರ್ಸ್ ತರಗತಿಗಳ ವೇಳಾಪಟ್ಟಿ ಇದಕ್ಕೆ ಅನುವು ಮಾಡುವಂತಿದ್ದರೆ, ಏಕಕಾಲಕ್ಕೆ ಎರಡು ರೆಗ್ಯುಲರ್ ಕೋರ್ಸ್‌ಗಳನ್ನು ಮಾಡಬಹುದು ಅಥವಾ ಒಂದು ಕೋರ್ಸ್ ದೂರಶಿಕ್ಷಣ / ಆನ್‌ಲೈನ್ ಮೂಲಕ ಮಾಡಬಹುದು. ಎಂ.ಎಸ್ಸಿ ನಂತರ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತಿಷ್ಠಿತ ಸರ್ಕಾರಿ/ಖಾಸಗಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಶಿಕ್ಷಣ ಕ್ಷೇತ್ರದಲ್ಲಿ ವೃತ್ತಿಯನ್ನು ಅರಸಬಹುದು.

ಪ್ರಮುಖವಾಗಿ, ನಿಮ್ಮ ಆಸಕ್ತಿ, ಅಭಿರುಚಿಯಂತೆ, ವೃತ್ತಿ ಯೋಜನೆಯನ್ನು ರೂಪಿಸಿ ಅದರಂತೆ ಕೋರ್ಸ್ ಆಯ್ಕೆ ಮಾಡುವುದು ಸೂಕ್ತ. ವೃತ್ತಿಯೋಜನೆ ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = oyUMPrEKPPU

3. ನಾನು ಬಿ.ಫಾರ್ಮಾ ಓದುತ್ತಿದ್ದು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ(ಎನ್‌ಇಪಿ) ಅನುಸಾರ ಈ ಕೋರ್ಸ್ ಜೊತೆಗೆ ಮೂರು ವರ್ಷದ ಡಿಪ್ಲೊಮಾ (ಜನರಲ್ ನರ್ಸಿಂಗ್ ಅಂಡ್ ಮಿಡ್‌ವೈಫರಿ) ಮಾಡಬಹುದೇ?

ಎಂ.ಎ. ಅನ್ಸಾರಿ, ಕಲಬುರ್ಗಿ.

ಎನ್‌ಇಪಿ ಅನುಸಾರ ಎರಡು ರೆಗ್ಯುಲರ್ ಕೋರ್ಸ್‌ಗಳನ್ನು ಒಂದೇ ಸಮಯದಲ್ಲಿ ಮಾಡುವ ಅವಕಾಶವಿದೆ. ಆದರೆ, ಎರಡೂ ತರಗತಿಗಳ ವೇಳಾಪಟ್ಟಿ ಇದಕ್ಕೆ ಅನುವು ಮಾಡುವಂತಿರಬೇಕು. ನೀವು ಯಾವ ವಿಶ್ವವಿದ್ಯಾಲಯದಲ್ಲಿ ಈಗ ಅಧ್ಯಯನ ಮಾಡುತ್ತಿದ್ದೀರಿ ಎಂದು ತಿಳಿಸಿಲ್ಲ. ಈ ಎರಡೂ ರೆಗ್ಯುಲರ್ ಕೋರ್ಸ್‌ಗಳಾಗಿರುವುದರಿಂದ ಹೆಚ್ಚಿನ ಮಾಹಿತಿಗಾಗಿ, ನೀವು ಓದುತ್ತಿರುವ ಶಿಕ್ಷಣ ಸಂಸ್ಥೆ/ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ.

ಮೇಲಾಗಿ, ನೀವು ಕೇಳುತ್ತಿರುವ ಕೋರ್ಸ್‌ಗಳು ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ್ದರೂ, ಎರಡೂ ಕೋರ್ಸ್ ಸಂಬಂಧಿಸಿದ ವೃತ್ತಿಗಳು ವಿಭಿನ್ನವಾಗಿವೆ. ನೀವು ಈಗಾಗಲೇ ಎರಡನೇ ವರ್ಷದ ಬಿ.ಫಾರ್ಮಾ ಮಾಡುತ್ತಿರುವುದರಿಂದ, ಮೇಲ್ನೋಟಕ್ಕೆ, ಈ ಕೋರ್ಸ್ ಮುಂದುವರೆಸುವುದೇ ಸೂಕ್ತವೆನಿಸುತ್ತದೆ. ಅಂತಿಮ ಆಯ್ಕೆ ನಿಮ್ಮದು.



4. ನಾನು ಆನ್‌ಲೈನ್‌ನಲ್ಲಿ ಎಂಬಿಎ ಕೋರ್ಸ್ ಮಾಡಲು ಇಚ್ಛಿಸಿದ್ದೇನೆ. ಆನ್‌ಲೈನ್ ಮತ್ತು ರೆಗ್ಯುಲರ್ ಎಂಬಿಎ ಕೋರ್ಸ್‌ಗಳಲ್ಲಿನ ವ್ಯತ್ಯಾಸಗಳೇನು? ಉತ್ತಮ ಕಾಲೇಜುಗಳಾವುವು?

ಹೆಸರು, ಊರು ತಿಳಿಸಿಲ್ಲ.

ಉದ್ಯಮದ ಜವಾಬ್ದಾರಿಗಳನ್ನು ನಿರ್ವಹಿಸಲು ಸಮಗ್ರವಾದ ತಿಳಿವಳಿಕೆಯನ್ನು-ಮಾರುಕಟ್ಟೆಯ ನಿರ್ವಹಣೆ, ಹಣಕಾಸಿನ ಆಡಳಿತ, ಆಯವ್ಯಯ ಶಾಸ್ತ್ರ, ಬಂಡವಾಳ ಪೂರೈಕೆ, ಉತ್ಪಾದನೆ ಮತ್ತು ಮಾನವ ಸಂಪನ್ಮೂಲಗಳ ನಿರ್ವಹಣೆ ಇತ್ಯಾದಿ-ಎಂಬಿಎ ಕೋರ್ಸ್‌ನಲ್ಲಿ ನೀಡಲಾಗುತ್ತದೆ. ಎಂಬಿಎ(ರೆಗ್ಯುಲರ್) ಕೋರ್ಸ್‌ನಲ್ಲಿ ವೈವಿಧ್ಯಮಯ ಕಲಿಕೆಯ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಉದಾಹರಣೆಗೆ, ಅಸೈನ್‌ಮೆಂಟ್ಸ್, ಮಿನಿ ಪ್ರಾಜೆಕ್ಟ್, ಕೇಸ್ ಸ್ಟಡೀಸ್, ಗ್ರೂಪ್ ಡಿಸ್ಕಷನ್, ಪ್ರೆಸೆಂಟೇಷನ್ ಇತ್ಯಾದಿ. ಈ ಎಲ್ಲಾ ವಿಧಾನಗಳನ್ನು ಪರಿಣಾಮಕಾರಿಯಾಗಿ ಆನ್‌ಲೈನ್ ಮೂಲಕ ಅಳವಡಿಸಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ, ರೆಗ್ಯುಲರ್ ಎಂಬಿಎ ಕೋರ್ಸಿಗೆ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯಿದೆ. ನೀವು ಈಗಾಗಲೇ ವೃತ್ತಿಯಲ್ಲಿದ್ದರೆ, ವಾರಾಂತ್ಯದ ಅಥವಾ ಆನ್‌ಲೈನ್ ಎಂಬಿಎ ಮಾಡಿ, ವೃತ್ತಿಯಲ್ಲಿ ಪ್ರಗತಿಯನ್ನು ಸಾಧಿಸಬಹುದು. ಕಾಲೇಜು ಆಯ್ಕೆ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ಈ ವಿಡಿಯೊಗಳನ್ನು ವೀಕ್ಷಿಸಿ:

https://collegedunia.com/courses/master-of-business-administration-mba/online-courses#9

https://www.youtube.com/watch?v = DmaXk-MuoOI

5. ನಾನು ಪಿಯುಸಿ (ವಿಜ್ಞಾನ) ಮುಗಿಸಿದ್ದು ಕಾರಣಾಂತರಗಳಿಂದ ಪದವಿ ಕೋರ್ಸ್ ಮುಂದುವರಿಸಲು ಆಗಲಿಲ್ಲ. ಈಗ ದೂರಶಿಕ್ಷಣದಲ್ಲಿ ಬಿಎ ಮಾಡಲು ಯೋಚಿಸುತ್ತಿದ್ದೇನೆ. ಈ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ಯಾವ ವಿಷಯದಲ್ಲಿ ಬಿಎ ಪದವಿ ಮಾಡಬೇಕು ಮತ್ತು ನಂತರದ ವೃತ್ತಿಜೀವನದ ಕನಸುಗಳೇನು ಎನ್ನುವುದರ ಬಗ್ಗೆ ನಿಮಗೆ ಸ್ಪಷ್ಟವಾದ ಕಲ್ಪನೆಯಿರಬೇಕು. 2023-2024ನೇ ಶೈಕ್ಷಣಿಕ ವರ್ಷದ ಪದವಿ ಕೋರ್ಸ್ (ದೂರಶಿಕ್ಷಣ) ಪ್ರವೇಶ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ. ಉದಾಹರಣೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಮೂರು ವರ್ಷದ ಬಿಎ ಪದವಿಗೆ ಅರ್ಜಿ ಸಲ್ಲಿಸಲು ದಿನಾಂಕ 31, ಆಗಸ್ಟ್ ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ:https://ksoumysuru.ac.in/

6. ಬ್ಯಾಂಕಿಂಗ್ ಪರೀಕ್ಷೆಯ ಬಗ್ಗೆ ತಿಳಿಸಿ. ಬಿಸಿಎ ಪದವೀಧರರು ಈ ಪರೀಕ್ಷೆ ಬರೆಯಬಹುದೇ?

ಹೆಸರು, ಊರು ತಿಳಿಸಿಲ್ಲ.

ಬಿಸಿಎ ಪದವಿಯ ನಂತರ ಬ್ಯಾಂಕಿಂಗ್ ಪರೀಕ್ಷೆ ಬರೆಯಬಹುದು. ಸಾಮಾನ್ಯವಾಗಿ, ಪ್ರೊಬೆಷನರಿ ಆಫೀಸರ್ ಹುದ್ದೆಗೆ ಮೂರು ಹಂತದಲ್ಲಿ ಆಯ್ಕೆ ಪ್ರಕ್ರಿಯೆ ಇರುತ್ತದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನ. ವೈಯಕ್ತಿಕ ಸಂದರ್ಶನದ ನಂತರ ಅಭ್ಯರ್ಥಿಗಳ ಆಯ್ಕೆ ನಡೆಯುತ್ತದೆ. ಸಾಮಾನ್ಯವಾಗಿ, ಅರ್ಜಿ ಸಲ್ಲಿಸಲು ಕನಿಷ್ಠ 20 ವರ್ಷ, ಗರಿಷ್ಠ 30 ವರ್ಷ. ಹೆಚ್ಚಿನ ವಿವರಗಳಿಗಾಗಿ ಗಮನಿಸಿ: https://ibps.in/

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಮತ್ತಷ್ಟು ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಭೀಮನ ಅಮಾವಾಸ್ಯೆ: ಆದರ್ಶ ದಾಂಪತ್ಯದ ಹಬ್ಬ

• ನವೀನ ಗಂಗೋತ್ರಿ

ಇಂದು ಭೀಮನ ಅಮಾವಾಸ್ಯೆ

ಆಷಾಢ ಮಾಸವೆನ್ನುವುದು ದಕ್ಷಿಣ ಭಾರತದಲ್ಲಿ ಚಾಂದ್ರಮಾನ ಪದ್ಧತಿಯನ್ನು ಅನುಸರಿಸುವ ಗೃಹಸ್ಥರು ತಮ್ಮ ಮನೆಯಲ್ಲಿ ಹೆಚ್ಚಿನ ದೇವತಾಕಾರ್ಯಗಳನ್ನು ಕೈಗೊಳ್ಳದಿರುವ ಒಂದು ಮಾಸ. ಆಷಾಢಶುದ್ಧ ಏಕಾದಶಿ ಮತ್ತು ಪೂರ್ಣಿಮೆಯನ್ನು ಕ್ರಮವಾಗಿ ಪ್ರಥಮೈಕಾದಶಿ ಮತ್ತು ವ್ಯಾಸ-ಪೂರ್ಣಿಮೆಯನ್ನಾಗಿ ಆಚರಿಸಿದ ಬಳಿಕ ಆಷಾಢಮಾಸದಲ್ಲಿ ಉಳಿದಿರುವ ದೊಡ್ಡ ಹಬ್ಬವೆಂದರೆ ಅದು ಆಷಾಢ ಅಮಾವಾಸ್ಯೆ. ಈ ಅಮಾವಸ್ಯೆಯನ್ನು ಭೀಮನ ಅಮಾವಸ್ಯೆ ಎಂದು ಗುರುತಿಸುವುದು ರೂಢಿ. ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಇದನ್ನೇ ಅಳಿಯನ ಅಮಾವಸ್ಯೆ, ಕೊಡೆ ಅಮಾವಾಸ್ಯೆ ಎಂದೆಲ್ಲ ಕರೆಯುವುದಿದೆ.

ಭಾರತೀಯ ಗೃಹಸ್ಥರಿಗೆ ಆದರ್ಶಪ್ರಾಯವಾದ ಒಂದು ದೇವತಾಕುಟುಂಬವೆಂದರೆ ಅದು ಶಿವ ಮತ್ತು ಪಾರ್ವತಿಯರದ್ದು. ಇಬ್ಬರು ಮುದ್ದಾದ ಮಕ್ಕಳನ್ನು ಪಡೆದ ಶಿವ ಮತ್ತು ಪಾರ್ವತಿಯರು ಕುಟುಂಬಜೀವನದ ಆದರ್ಶ ದೇವತೆಗಳು. ತ್ರಿಮೂರ್ತಿಗಳಲ್ಲಿ ಕುಟುಂಬದ ವಿಚಾರ ಬಂದಾಗ ಇಷ್ಟು ಪೂರ್ಣವೆನ್ನಿಸುವ ಇನ್ನೊಂದು ಕುಟುಂಬ ಇಲ್ಲ. ಬಹುತೇಕ ನಮ್ಮ ಹಬ್ಬಗಳು ಶಿವ ಮತ್ತು ವಿಷ್ಣುವಿನ ಸುತ್ತಮುತ್ತ ಹೆಣೆದು-ಕೊಂಡಿರುವುದು ವಿದಿತವೇ. ಆಷಾಢದ ಅಮಾವಸ್ಯೆ ಕೂಡ ಶಿವ ಮತ್ತು ಪಾರ್ವತಿಯರಿಗೆ ಸಂಬಂಧಿಸಿದ ಕಥೆಯನ್ನು ಒಳಗೊಳ್ಳು-ತ್ತದೆ. ಸತಿಪತಿಯರು ಈ ದಿನದಂದು ಶಿವ ಮತ್ತು ಪಾರ್ವತಿ-ಯರನ್ನು ಅರ್ಚಿಸಿ ಫಲಪ್ರದವಾದ ಕುಟುಂಬಜೀವನಕ್ಕಾಗಿ ಪ್ರಾರ್ಥಿಸುತ್ತಾರೆ.

ಸತಿಪತಿಯರು ಮಾತ್ರವಲ್ಲದೆ ಮದುವೆಯಾಗದ ಹೆಣ್ಣುಮಕ್ಕಳು ತಮ್ಮ ಮನೆಯ ತಂದೆ, ಅಣ್ಣ, ತಮ್ಮ ಇತ್ಯಾದಿ ಪುರುಷಸದಸ್ಯರ ದೀರ್ಘ ಬಾಳ್ವೆ ಮತ್ತು ಶ್ರೇಯಸ್ಸಿಗಾಗಿ ಈ ದಿನದಂದು ಪ್ರಾರ್ಥಿಸುವುದು ಇದೆ. ಅವಿವಾಹಿತ ಹೆಂಗಳೆಯರು ಒಳ್ಳೆಯ ಜೀವ-ನಸಂಗಾತಿಗಾಗಿಯೂ ಈ ಹಬ್ಬವನ್ನು ಆಚರಿಸುವುದು ಸಂಪ್ರದಾಯ. ಈ ಹಬ್ಬದಲ್ಲಿ ಸ್ಥಾನೀಯವಾಗಿ ಆಚರಣೆಯಲ್ಲಿ ಭಿನ್ನತೆ ಇರಬಹುದಾದರೂ ಮುಖ್ಯವಾಗಿ ಶಿವ ಮತ್ತು ಪಾರ್ವತಿ-ಯರನ್ನು ಪೂಜಿಸುವುದು ಎಲ್ಲೆಡೆ ಸಾಮಾನ್ಯವಾದ ಆಚರಣೆ.

ಮದುವೆಯಾದ ಹೊಸದರಲ್ಲಿ ಆಷಾಢ ಮಾಸದಲ್ಲಿ ಹೆಂಡತಿಯನ್ನು ತವರಿಗೆ ಕಳುಹಿಸುವುದು ಒಂದು ರೂಢಿ. ಅಂದರೆ ಅದೊಂದು ಮಾಸ ಪರ್ಯಂತ ನವದಂಪತಿಗಳು ಪರಸ್ಪರ ಸನಿಹವಿರುವುದಿಲ್ಲ. ಆಷಾಢದ ಕೊನೆಯ ದಿನದಂದು ಅಳಿಯ ತನ್ನ ಹೆಂಡತಿಯನ್ನು ಮರಳಿ ಕರೆತರಲು ಮಾವನ ಮನೆಗೆ ಬರುತ್ತಾನೆ. ಮಾವ ತನ್ನ ಅಳಿಯನನ್ನು ಆದರಾಭಿ-ಮಾನದಿಂದ ಬರಮಾಡಿಕೊಂಡು ಮರುದಿನ ಮಗಳನ್ನು ಅಳಿಯನೊಟ್ಟಿಗೆ ಕಳುಹಿಸಿಕೊಡುತ್ತಾನೆ. ಉತ್ತರ ಕನ್ನಡದ ಕೆಲವು ಸಮುದಾಯಗಳಲ್ಲಿ ಈ ಹಬ್ಬವನ್ನು 'ಕೊಡೆ ಅಮಾವಸ್ಯೆ' ಎನ್ನುವುದೂ ಇದೆ. ಕಾರಣವಿಷ್ಟೆ, ಉತ್ತರಕನ್ನಡದಲ್ಲಿ ಆಷಾಢವೆಂದರೆ ತೀವ್ರ ಮಳೆಗಾಲದ ಹೊತ್ತು. ಆ ಸಮಯದಲ್ಲಿ ಮಾವನ ಮನೆಗೆ ಬಂದ ಅಳಿಯನಿಗೆ ಕೊಡೆಯನ್ನಿತ್ತು ಮಾವ ಸತ್ಕರಿಸುತ್ತಾನೆ. ಸಂಪ್ರದಾಯಸ್ಥ ಕುಟುಂಬಗಳು ಪ್ರತಿವರ್ಷವೂ ತಪ್ಪದೆ ಅಳಿಯನ ಅಮಾವಸ್ಯೆಗೆ ಬರುವಂತೆ ಅಳಿಯನಿಗೆ ಆಮಂತ್ರಣ ಕೊಡುವುದು ಇವತ್ತಿಗೂ ರೂಢಿಯಲ್ಲಿದೆ.

'ಜ್ಯೋತಿರ್ಭೀಮೇಶ್ವರ ವ್ರತ' ಎಂದು ಕರೆಸಿಕೊಳ್ಳುವ ಈ ವ್ರತದಲ್ಲಿ ಬರುವ 'ಭೀಮ' ಎನ್ನುವ ಹೆಸರಿಗೂ ಪಂಚಪಾಂಡ-ವರಲ್ಲಿ ಮಧ್ಯಮಪಾಂಡವನೆನಿಸಿಕೊಂಡ ಭೀಮನಿಗೂ ಸಾಕ್ಷಾತ್ ಸಂಬಂಧ ಇದ್ದಂತೆ ತೋರುವುದಿಲ್ಲ. ಭೀಮೇಶ್ವರ ಎನ್ನುವ ಹೆಸರಿನ ಶಿವ ದೇವಾಲಯಗಳೂ ನಮ್ಮ ನಾಡಿನಲ್ಲಿ ಸಾಕಷ್ಟು ಇವೆಯಾದ್ದರಿಂದ ಈ ವ್ರತದಲ್ಲಿ ಭೀಮನೆಂದು ಕರೆಸಿಕೊಳ್ಳುವ ಅಧಿದೇವತೆ ಶಿವನೇ ಎಂಬುದು ಖಚಿತ. ಸ್ಕಂದಪುರಾಣದಲ್ಲಿ ಈ ವ್ರತದ ಕುರಿತಾದ ಉಲ್ಲೇಖ ಸಿಗುತ್ತದೆ.

ಸತಿಪತಿಯರ ನಡುವಿನ ನಂಟು ಮತ್ತು ಪರಸ್ಪರ ಶ್ರೇಯಃಕಾಂಕ್ಷೆಯನ್ನು ಉದ್ದೀಪಿಸುವ ಈ ಹಬ್ಬ ನಮ್ಮ ಕಾಲದಲ್ಲಿ ಪತಿಪತ್ನಿಯರ ಸೌಹಾರ್ದವನ್ನು ಗಟ್ಟಿಗೊಳಿಸುವುದಕ್ಕಾಗಿ ಇರುವ ಸಾಂಪ್ರದಾಯಿಕ ಪ್ರಕಲ್ಪವಾಗಿ ಬಲು ಮುಖ್ಯವೆನ್ನಿಸಿಕೊಳ್ಳುತ್ತದೆ. ಆದರ್ಶ ವೈವಾಹಿಕ ಬದುಕಿನ ಉದಾಹರಣೆಯಾಗಿ ಶಿವ-ಪಾರ್ವತಿಯರನ್ನು ನೆನೆದುಕೊಳ್ಳುವ ಹೊತ್ತು ಸಹ ಇದು ಹೌದು. ❖

ಮೈತ್ರಿಕೂಟ ರಚಿಸಲು ಬೆಂಗಳೂರಿಗೆ ಬರಲಿರುವ ಸೋನಿಯಾ • ಪ್ರಾದೇಶಿಕ ಪಕ್ಷಗಳ ಮನವೊಲಿಕೆಯ ಸವಾಲು

ಸಣ್ಣ ಪಕ್ಷಗಳ ಜತೆಗೊಯ್ಯಲು 'ಕೈ' ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: 2004ರ ಹೊಸ ವರ್ಷದ ಮೊದಲ ದಿನ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ತಮ್ಮ ನಿವಾಸದಿಂದ ಅನತಿ ದೂರದಲ್ಲಿದ್ದ ಲೋಕ ಜನಶಕ್ತಿ ಪಾರ್ಟಿ ಅಧ್ಯಕ್ಷ ರಾಮವಿಲಾಸ್ ಪಾಸ್ವಾನ್ ಮನೆಗೆ ತೆರಳಿ ಅವರೊಂದಿಗೆ ಮಾತುಕತೆ ನಡೆಸಿದ್ದರು. ಅಂದಿನ ಅವರ ಆ ಸಣ್ಣ ನಡಿಗೆ 'ಸಂಯುಕ್ತ ಪ್ರಗತಿಪರ ಮೈತ್ರಿ-ಕೂಟ'(ಯುಪಿಎ) ರಚನೆಗೆ ಅಡಿಪಾಯ ಹಾಕಿತ್ತು. ನಂತರ ಎರಡು ಅವಧಿಗೆ ಯುಪಿಎ ಕೇಂದ್ರದಲ್ಲಿ ಆಡಳಿತ ನಡೆಸಿದ್ದು ಇತಿಹಾಸ.

ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ವಿರೋಧ ಪಕ್ಷಗಳನ್ನು ಒಂದುಗೂಡಿಸುವ ಪ್ರ-ಯತ್ನಗಳಿಗೆ ಇನ್ನೂ ಸ್ಪಷ್ಟರೂಪ ಬಂದಿಲ್ಲ. ಆದರೆ, ವಿಪಕ್ಷಗಳ ನಡುವಿನ ಭಿನ್ನಾಭಿಪ್ರಾಯ ನಿವಾರಿಸಿ ಮೈತ್ರಿಕೂಟ ಸಾಧಿಸಲು 2004ರಲ್ಲಿ ಅನುಸರಿಸಿದ್ದ ತಂತ್ರಗಾರಿಕೆ ಪುನರಾವರ್ತನೆಯಾ-ಗುವಂತೆ ಮಾಡಬೇಕು. ಸೋನಿಯಾ ಗಾಂಧಿ ಅವರ ಮೊರೆ ಹೋಗಿ, ವಿಪಕ್ಷಗಳನ್ನು ಒಟ್ಟುಗೂಡಿಸುವ ಜವಾಬ್ದಾರಿ ಅವರಿಗೇ ವಹಿಸಬೇಕು ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಕಳೆದ ಎರಡು ದಶಕಗಳಲ್ಲಿ ರಾಷ್ಟ್ರ ರಾಜಕಾರಣ ಎಂಬ ನದಿಯಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿಗೆ ತನ್ನ ಮಿತ್ರಪಕ್ಷಗಳ ಸಂಖ್ಯೆ ಹೆಚ್ಚಿಸಿಕೊಳ್ಳುವ ಉಮೇದು ಕಡಿಮೆಯಾಗಿಲ್ಲ. ತನ್ನ ರಾಜಕೀಯ ವಿರೋಧಿಗಳನ್ನು ಕಟ್ಟಿಹಾಕುವ ಶಕ್ತಿಯನ್ನು ವೃದ್ಧಿಸಿಕೊಂಡಿದೆ.

ಇಂಥ ಸಂದರ್ಭದಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಕಾಂಗ್ರೆಸ್ ನಂಬಲರ್ಹ ಹಾಗೂ ಬದ್ಧತೆ ಇರುವ ಪಕ್ಷ ಎಂಬುದನ್ನು ಪ್ರಾದೇಶಿಕ ಪಕ್ಷಗಳ ನಾಯಕರಿಗೆ ಮನವರಿಕೆ ಮಾಡಿಕೊಡಲು ಸೋನಿಯಾ ಗಾಂಧಿ ಅವರು ಬೆಂಗಳೂರಿಗೆ ಪ್ರಯಾಣಿಸ-ಬೇಕಿದೆ. ಬಿಜೆಪಿ ವಿರುದ್ಧ ವಿಪಕ್ಷಗಳ ಮಹಾಮೈತ್ರಿ ಬೆಸೆಯುವ ಜವಾಬ್ದಾರಿ ನಿಭಾಯಿಸಬೇಕಿದೆ ಎಂದು ವಿಶ್ಲೇಷಿಸ-ಲಾಗುತ್ತಿದೆ.

'ಸಾಕಷ್ಟು ಸಮಾಲೋಚನೆ ನಂತರವೇ, ಬೆಂಗಳೂರಿನಲ್ಲಿ ನಡೆಯುವ ಸಭೆಯಲ್ಲಿ ಸೋನಿಯಾ ಗಾಂಧಿ ಪಾಲ್ಗೊಳ್ಳುವುದು ಮುಖ್ಯ ಎಂಬ ನಿರ್ಣಯಕ್ಕೆ ಬರಲಾಗಿದೆ. ಕೊಡು–ಕೊಳ್ಳುವಿಕೆ ಆಧಾರದ ಮೇಲೆ ಪ್ರಾದೇಶಿಕ ಪಕ್ಷಗಳನ್ನು ಒಟ್ಟಿಗೆ ಒಯ್ಯುವುದಕ್ಕಾಗಿ ಕಾಂಗ್ರೆಸ್ ಪರವಾಗಿ ಬದ್ಧತೆ ಪ್ರಕಟಿಸುವ ರಾಜಕೀಯ ಪ್ರಭಾವವನ್ನು ಅವರು ಹೊಂದಿದ್ದಾರೆ' ಎಂದು ಬಿಹಾರದಲ್ಲಿ ಕಾಂಗ್ರೆಸ್ ಮಿತ್ರ ಪಕ್ಷವೊಂದರ ನಾಯಕರೊಬ್ಬರು ಹೇಳುತ್ತಾರೆ.

ಹೊಂದಾಣಿಕೆ: ಕಾಂಗ್ರೆಸ್‌ನಿಂದ ಸೂಚ್ಯ ಸಮ್ಮತಿ

ಬಿಜೆಪಿ ವಿರುದ್ಧ ಮೈತ್ರಿಕೂಟ ರಚನೆಗಾಗಿ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಇರಾದೆ ಹಾಗೂ ಹೊಂದಾಣಿಕೆಗೆ ತನ್ನ ಸಮ್ಮತಿ ಇರುವುದನ್ನು ಕಾಂಗ್ರೆಸ್ ಪಕ್ಷ ಇತ್ತೀಚೆಗೆ ಸೂಚ್ಯವಾಗಿ ವ್ಯಕ್ತಪಡಿಸಿದೆ.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತ ಸುಗ್ರೀವಾಜ್ಞೆಗೆ ಸಂಬಂಧಿಸಿದ ಮಸೂದೆಯನ್ನು ಸಂಸತ್‌ನಲ್ಲಿ ವಿರೋಧಿಸುವ ಕುರಿತು ಕಾಂಗ್ರೆಸ್ ತನ್ನ ನಿಲುವು ಸ್ಪಷ್ಟಪಡಿಸದಿದ್ದರೆ ಬೆಂಗಳೂರಿನಲ್ಲಿ ನಡೆಯುವ ಸಭೆಗೆ ಗೈರಾಗುವುದಾಗಿ ಎಎಪಿ ಬೆದರಿಕೆ ಹಾಕಿತ್ತು. ಈಗ, ಮಸೂದೆಯನ್ನು ವಿರೋಧಿಸುವುದಾಗಿ ಕಾಂಗ್ರೆಸ್ ಹೇಳಿರುವುದು ಇದಕ್ಕೆ ನಿದರ್ಶನ.

ಆದರೆ, ಸ್ಥಾನಗಳ ಹಂಚಿಕೆ ವಿಚಾರವಾಗಿ ಎದುರಾಗುವ ಸವಾಲನ್ನು ಸೋನಿಯಾ ಗಾಂಧಿ ಹೇಗೆ ನಿವಾರಿಸುವರು ಎಂಬ ನಿರೀಕ್ಷೆ ಮಿತ್ರ ಪಕ್ಷಗಳಲ್ಲಿದೆ ಎಂದು ಮೂಲಗಳು ಹೇಳುತ್ತವೆ.

ಕೆಲ ರಾಜ್ಯಗಳಲ್ಲಿ ಕಾಂಗ್ರೆಸ್‌ನ ಪ್ರಾಬಲ್ಯ ಇಲ್ಲವೇ ಇಲ್ಲ ಎನ್ನುವ ಸ್ಥಿತಿ ಇದೆ. ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ದೆಹಲಿ, ಜಾರ್ಖಂಡ್, ಮಹಾರಾಷ್ಟ್ರ ಹಾಗೂ ಬಿಹಾರದಲ್ಲಿ ಕಾಂಗ್ರೆಸ್ ಪಕ್ಷ ಸ್ಥಾನ ಹಂಚಿಕೆ ವಿಚಾರದಲ್ಲಿ ರಾಜಿ ಮಾಡಿ-ಕೊಳ್ಳಬೇಕಾಗುತ್ತದೆ. ಇನ್ನು, ಪಂಜಾಬ್ ಮತ್ತು ಕೇರಳದಲ್ಲಿ ಕ್ರಮವಾಗಿ ಎಎಪಿ ಹಾಗೂ ಎಡ ಪಕ್ಷಗಳೇ ಈಗ ಅದರ ನೇರ ಎದುರಾಳಿಗಳು. ಈ ಕಗ್ಗಂಟನ್ನು ಸೋನಿಯಾ ಹೇಗೆ ಬಿಡಿಸುತ್ತಾರೆ ಎಂಬ ಕುತೂಹಲ ವಿಪಕ್ಷಗಳ ನಾಯಕರಲ್ಲಿದೆ.

'ಈ ಎಲ್ಲ ಕಾರಣಗಳಿಂದಾಗಿ ಸೋಮವಾರ ನಡೆಯಲಿರುವ ಔತಣಕೂಟದತ್ತ ಎಲ್ಲ ಗಮನ ಕೇಂದ್ರೀಕೃತವಾಗಿದೆ. ಪ್ರಾದೇಶಿಕ ಪಕ್ಷಗಳ ನಾಯಕರೊಂದಿಗೆ ಸೋನಿಯಾ ಗಾಂಧಿ ನಡೆಸುವ ಸಂವಾದ, ಅವರಿಗೆ ನೀಡುವ ಭರವಸೆಗಳು ನಿರ್ಣಾಯಕ ಎನಿಸಲಿವೆ. ಇನ್ನೂ ಕಗ್ಗಂಟಾಗಿಯೇ ಉಳಿದಿರುವ ಸಮಸ್ಯೆಗಳಿಗೆ ಪರಿಹಾರ ಸಿಗುವ ನಿರೀಕ್ಷೆಯೂ ಇದೆ' ಎಂದು ಬಿಹಾರದ ಜೆಡಿಯು ಮುಖಂಡರೊಬ್ಬರು ಹೇಳುತ್ತಾರೆ.

ಭಾರತೀಯ ಸೇನೆ ಕುರಿತು ಐಎಸ್‌ಐಗೆ ಮಾಹಿತಿ: ಬಂಧನ

ಲಖನೌ (ಪಿಟಿಐ): ಭಾರತದ ಮಿಲಿಟರಿ ಕುರಿತು ಪಾಕಿಸ್ತಾನಕ್ಕೆ ಮಾಹಿತಿ ರವಾನಿಸುತ್ತಿದ್ದ ಆರೋಪದ ಮೇಲೆ ಪಾಕ್ ಗುಪ್ತಚರ ಇಲಾಖೆಯ (ಐಎಸ್‌ಐ) ಶಂಕಿತ ಪ್ರತಿನಿಧಿಯನ್ನು ಭಾನುವಾರ ಬಂಧಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಬಂಧಿತ ರಯೀಸ್ ಉತ್ತರ ಪ್ರದೇಶದ ಗೊಂಡದ ನಿವಾಸಿ. ರಾಜ್ಯದ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಆತನನ್ನು ಬಂಧಿಸಿದೆ. ಎಟಿಎಸ್ ಮುಖ್ಯ ಕಚೇರಿಯಲ್ಲಿ ಆತನನ್ನು ವಿಚಾರಣೆಗೆ ಒಳಪಡಿ-ಸಲಾಗಿತ್ತು. ಬೇಹುಗಾರಿಕೆಯಲ್ಲಿ ಭಾಗಿಯಾಗಿರುವುದಾಗಿ ಆತ ಒಪ್ಪಿ-ಕೊಂಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಯೀಸ್‌ಗೆ ಮುಂಬೈನಲ್ಲಿ ಅರ್ಮಾನ್ ಎಂಬಾತನ ಪರಿಚಯ-ವಾಗಿತ್ತು. ದುಬೈನಲ್ಲಿ ಉದ್ಯೋಗ ಕೊಡಿಸುವ ಆಮಿಷ ತೋರಿದ್ದ ಅರ್ಮಾನ್, ಭಾರತದ ವಿರುದ್ಧ ಬೇಹುಗಾರಿಕೆ ನಡೆಸುವಂತೆ ರಯೀಸ್‌ನನ್ನು ಪ್ರೇರೇಪಿಸಿದ್ದ. ಬಳಿಕ, ಹುಸೇನ್ ಎಂಬಾತನನ್ನು ಸಂಪರ್ಕಿಸುವಂತೆ 2022ರಲ್ಲಿ ರಯೀಸ್‌ಗೆ ವಾಟ್ಸ್‌ಆ್ಯಪ್ ಕರೆಬಂದಿತ್ತು. ಭಾರತದ ಮಿಲಿಟರಿ ಸ್ಥಾಪನೆಗೆ ಸಂಬಂಧಿಸಿದ ಚಿತ್ರಗಳನ್ನು ಕಳಿಸುವಂತೆ ಆಗ ರಯೀಸ್‌ಗೆ ಹೇಳಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ರಯೀಸ್‌ಗೆ ₹15,000 ನೀಡಲಾಗಿತ್ತು ಮತ್ತು ಬಾಂಗ್ಲಾ-ದೇಶದಲ್ಲಿ ನೋಂದಣಿಯಾಗಿರುವ ಮೊಬೈಲ್ ಸಂಖ್ಯೆ ಬಳಸಿ ಆತ ಐಎಸ್‌ಐ ಜೊತೆ ಸಂಪರ್ಕ-ದಲ್ಲಿದ್ದ. ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ಆತನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅರ್ಮಾನ್ ಸೇರಿ ಇತರ ಆರೋಪಿಗಳನ್ನು ಬಂಧಿಸುವ ಪ್ರಯತ್ನಗಳು ನಡೆದಿವೆ ಎಂದು ಅವರು ಹೇಳಿದ್ದಾರೆ.

'ಅತ್ಯುತ್ತಮ ಶಾಸಕ' ಪ್ರಶಸ್ತಿಗೆ ಎಸ್.ಆರ್. ಪಾಟೀಲ ಆಯ್ಕೆ



ಬಾಗಲಕೋಟೆ: ವಿಧಾನ ಪರಿಷತ್ ಮಾಜಿ ಸದಸ್ಯ ಎಸ್. ಆರ್. ಪಾಟೀಲ ಅವರು ಕರ್ನಾಟಕ ವಿಧಾನ ಪರಿಷತ್‌ನ 2021ನೇ ಸಾಲಿನ 'ಅತ್ಯುತ್ತಮ ಶಾಸಕ' ಪ್ರಶಸ್ತಿಗೆ ಆಯ್ಕೆಯಾಗಿ-ದ್ದಾರೆ.

ಜುಲೈ 18ರಂದು ವಿಧಾನಸೌಧದ ಮೂರನೇ ಮಹಡಿಯ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ವಿಧಾನ ಪರಿಷತ್ ಸಚಿವಾಲಯದ ಅಧಿಕಾರಿಗಳು ಎಸ್.ಆರ್.ಪಾಟೀಲರಿಗೆ ಪತ್ರ ಕಳುಹಿಸಿದ್ದಾರೆ.

'ಸುಗ್ರೀವಾಜ್ಞೆಗೆ ಕಾಂಗ್ರೆಸ್ ಬೆಂಬಲ ಇಲ್ಲ'

ದೆಹಲಿ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ವೇಣುಗೋಪಾಲ್

ನವದೆಹಲಿ (ಪಿಟಿಐ): ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ಕೇಂದ್ರ ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಪಕ್ಷವು ಸಂಸತ್‌ನಲ್ಲಿ ವಿರೋಧಿಸಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಭಾನುವಾರ ಹೇಳಿದ್ದಾರೆ.

'ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವಂತಹ ಕೇಂದ್ರ ಸರ್ಕಾರದ ಯಾವುದೇ ಪ್ರಯತ್ನವನ್ನು ವಿರೋಧಿಸ-ಲಾಗುವುದು' ಎಂದು ಹೇಳಿದ್ದಾರೆ.

'ಬಿಜೆಪಿಯೇತರ ಪಕ್ಷಗಳ ಸರ್ಕಾರ-ಗಳಿರುವ ರಾಜ್ಯಗಳಲ್ಲಿನ ಆಡಳಿತದಲ್ಲಿ ರಾಜ್ಯಪಾಲರ ಮೂಲಕ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕೆ ವಿರೋಧ ಇದೆ. ಇದು ಪಕ್ಷದ ಸ್ಪಷ್ಟ ನಿಲುವು. ಹೀಗಾಗಿ ಸಂಸತ್‌ನಲ್ಲಿ ಈ ಸುಗ್ರೀವಾಜ್ಞೆಗೆ ಸಂಬಂಧಿಸಿದ ಮಸೂದೆಯನ್ನು ವಿರೋ ಧಿಸಲು ಪಕ್ಷ ನಿರ್ಧರಿಸಿದೆ' ಎಂದರು.

ಎಎಪಿ ಸ್ವಾಗತ: ಸಂಸತ್‌ನಲ್ಲಿ ಮಂಡನೆಯಾಗಲಿರುವ ಸುಗ್ರೀವಾಜ್ಞೆಯನ್ನು ವಿರೋಧಿಸುವುದಾಗಿ ಹೇಳಿರುವ ಕಾಂಗ್ರೆಸ್‌ನ ನಿಲುವನ್ನು ಆಮ್ ಆದ್ಮಿ ಪಕ್ಷ (ಎಎಪಿ) ಸ್ವಾಗತಿಸಿದೆ.

'ಸುಗ್ರೀವಾಜ್ಞೆಯನ್ನು ಸ್ಪಷ್ಟವಾಗಿ ವಿರೋಧಿಸುವುದಾಗಿ ಕಾಂಗ್ರೆಸ್ ಹೇಳಿರುವುದು ಸಕಾರಾತ್ಮಕ ಬೆಳವಣಿಗೆ' ಎಂದು ಎಎಪಿ ಸಂಸದ ಹಾಗೂ ವಕ್ತಾರ ರಾಘವ್ ಛಡ್ಡಾ ಟ್ವೀಟ್ ಮಾಡಿದ್ದಾರೆ.

ಬಿಜೆಪಿ ಟೀಕೆ: 'ಕಾಂಗ್ರೆಸ್ ಪಕ್ಷ ನಿರಂತರವಾಗಿ ತನ್ನ ರಾಜ್ಯ ಘಟಕಗಳ ಹಿತಾಸಕ್ತಿಯನ್ನು ನಿರ್ಲಕ್ಷಿಸುತ್ತಾ ಬಂದಿದೆ. ಪಕ್ಷವು ಈಗ, ರಾಹುಲ್ ಗಾಂಧಿ ಸದಾ ಪ್ರಸ್ತುತ ಎಂದು ಬಿಂಬಿಸಲು ಹೆಣಗುವ ಕೆಲವೇ ಜನರ ಗುಂಪಾಗಿದೆ' ಎಂದು ಬಿಜೆಪಿ ಭಾನುವಾರ ವಾಗ್ದಾಳಿ ನಡೆಸಿದೆ.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತ ಮಸೂದೆ ವಿಚಾರವಾಗಿ ಸಂಸತ್‌ನಲ್ಲಿ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಬೆಂಬಲಿಸುವುದಾಗಿ ಕಾಂಗ್ರೆಸ್ ಹೇಳಿದ ಬೆನ್ನಲ್ಲೇ ಬಿಜೆಪಿ ಈ ಟೀಕೆ ಮಾಡಿದೆ.

ಈ ಕುರಿತು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯಾ ಅವರು ಕಾಂಗ್ರೆಸ್‌ನ ಕೇಂದ್ರ ನಾಯಕತ್ವದ ವಿರುದ್ಧ ಹರಿಹಾಯ್ದಿದ್ದಾರೆ.

'ಎಎಪಿಗೆ ಬೆಂಬಲ ನೀಡುವುದನ್ನು ಕಾಂಗ್ರೆಸ್‌ನ ದೆಹಲಿ ಘಟಕ ವಿರೋಧಿಸಿದೆ. ಪಶ್ಚಿಮ ಬಂಗಾಳದಲ್ಲಿ ಅಧೀರ್ ರಂಜನ್ ಚೌಧರಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಕೊಲೆಗಡುಕ ಸರ್ಕಾರದ ವಿರುದ್ಧ ಸಿಡಿದೆದ್ದಿದ್ದಾರೆ. ಆದರೆ, ಈ ರಾಜ್ಯಗಳಲ್ಲಿ ಕಾಂಗ್ರೆಸ್‌ನ ಕೇಂದ್ರ ನಾಯಕತ್ವ ಕ್ರಮವಾಗಿ ಎಎಪಿ ಹಾಗೂ ಟಿಎಂಸಿ ಜೊತೆ ಒಪ್ಪಂದ ಮಾಡಿಕೊಂಡಿದೆ' ಎಂದು ಟೀಕಿಸಿದ್ದಾರೆ.

ಬೆಂಬಲ: ಪಟ್ನಾ ಸಭೆಯಲ್ಲೇ ಕಾಂಗ್ರೆಸ್ ಹೇಳಿತ್ತು– ಒಮರ್

ಶ್ರೀನಗರ(ಪಿಟಿಐ): ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ಕೇಂದ್ರ ಹೊರಡಿಸಿರುವ ಸುಗ್ರೀವಾಜ್ಞೆ ವಿಚಾರವಾಗಿ ಎಎಪಿಗೆ ಬೆಂಬಲ ನೀಡಲು ಬದ್ಧ ಎಂಬುದಾಗಿ ಪಟ್ನಾದಲ್ಲಿ ನಡೆದಿದ್ದ ವಿಪಕ್ಷಗಳ ಸಭೆಯಲ್ಲಿಯೇ ಕಾಂಗ್ರೆಸ್ ಹೇಳಿತ್ತು ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಅವರು ಭಾನುವಾರ ಹೇಳಿದ್ದಾರೆ.

ಈ ಕುರಿತು ಅವರು ಟ್ವೀಟ್ ಮಾಡಿದ್ದಾರೆ. ಜೂನ್ 23ರಂದು ಪಟ್ನಾದಲ್ಲಿ ನಡೆದಿದ್ದ 15 ಪಕ್ಷಗಳ ಸಭೆಯಲ್ಲಿ ಒಮರ್ ಕೂಡ ಹಾಜರಿದ್ದರು. ಹೀಗಾಗಿ ಅವರ ಹೇಳಿಕೆಗೆ ಮಹತ್ವ ಬಂದಿದೆ.

ಎಂಎಸ್‌ಪಿ: ಖರೀದಿಯಲ್ಲಿ ಅಕ್ರಮ

ಒಂದನೇ ಪುಟದಿಂದ...

ಹಲವೆಡೆ ರೈತರ ಹೆಸರಿನಲ್ಲಿ ವರ್ತಕರು, ದಲ್ಲಾಳಿಗಳು ಯೋಜನೆಯನ್ನು ದುರ್ಬಳಕೆ ಮಾಡಿಕೊಂಡಿರುವ ದೂರುಗಳು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗೆ ಬರಲಾರಂಭಿಸಿವೆ.

2022–23ನೇ ಸಾಲಿನ ಮುಂಗಾರು ಋತುವಿನಲ್ಲಿ ಎಂಎಸ್‌ಪಿ ಯೋಜನೆಯಡಿ ರಾಜ್ಯದಲ್ಲಿ ಐದು ಲಕ್ಷ ಟನ್ ರಾಗಿ ಮತ್ತು ಎರಡು ಲಕ್ಷ ಟನ್ ಜೋಳವನ್ನು ಖರೀದಿಸಲಾಗಿದೆ. ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮವು ಖರೀದಿಗೆ ನೋಡಲ್ ಏಜೆನ್ಸಿಯಾಗಿತ್ತು. ನಿಗಮದ ಜತೆಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವೂ ಖರೀದಿ ಏಜೆನ್ಸಿಯಾಗಿತ್ತು.

ಜಗಳೂರು ಖರೀದಿ ಕೇಂದ್ರದಲ್ಲಿ 3,321 ರೈತರಿಂದ ರಾಗಿ ಖರೀದಿಸಿದ್ದಾಗಿ ಉಲ್ಲೇಖಿಸಿ, ಅವರಿಗೆ 'ಗ್ರೈನ್ ವೋಚರ್' ನೀಡಲಾಗಿತ್ತು. ಅವರಲ್ಲಿ ಬಹುತೇಕರಿಗೆ ಹಣ ಪಾವತಿಸಲಾಗಿದೆ. 837 ಮಂದಿ ರೈತರ ಹೆಸರಿನಲ್ಲಿ ರಾಗಿಯನ್ನು ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿದ್ದು, 'ಗ್ರೈನ್ ವೋಚರ್' ನೀಡಿಲ್ಲ ಎಂಬ ದೂರುಗಳು ಬಂದಿದ್ದವು. ಈ ಬಗ್ಗೆ ಪರಿಶೀಲನೆ ನಡೆಸಿದಾಗ ನೂರಾರು ಮಂದಿ ರೈತರ ದಾಖಲೆಗಳೇ ಹೊಂದಾಣಿಕೆ ಆಗದಿರುವುದು ಪತ್ತೆಯಾಗಿದೆ.

'ಜಗಳೂರು ಖರೀದಿ ಕೇಂದ್ರದಲ್ಲಿ ಅಕ್ರಮ ನಡೆದಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ಆ ಬಳಿಕ ಹೊಸದುರ್ಗ ಖರೀದಿ ಕೇಂದ್ರದಲ್ಲೂ ಅಕ್ರಮ ನಡೆದಿರುವ ಬಗ್ಗೆ ದೂರುಗಳು ಬಂದಿದ್ದವು. ಅಲ್ಲಿಯೂ ಅಕ್ರಮ ನಡೆದಿರುವುದು ಪರಿಶೀಲನೆಯಲ್ಲಿ ಕಂಡುಬಂದಿದೆ. ಖರೀದಿ ಕೇಂದ್ರದ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಗ್ಯಾನೇಂದ್ರ ಕುಮಾರ್ ಗಂಗ್ವಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಇತರೆಡೆಯೂ ಪರಿಶೀಲನೆ: ರಾಜ್ಯದ ಹಲವು ಜಿಲ್ಲೆಗಳಲ್ಲಿ ರಾಗಿ ಖರೀದಿಸಲಾಗಿದೆ. ಖರೀದಿಯ ಪ್ರಮಾಣ, ವಾಸ್ತವಿಕ ದಾಸ್ತಾನು ಕುರಿತು ರಾಜ್ಯ ಉಗ್ರಾಣ ನಿಗಮದ ಮೂಲಕ ಪರಿಶೀಲನೆ ನಡೆಸಲಾಗುತ್ತಿದೆ. ರಾಗಿ ಖರೀದಿಯಲ್ಲಿ ಅಕ್ರಮ ನಡೆದಿರುವ ದೂರುಗಳು ಬಂದಿರುವ ಕೇಂದ್ರಗಳಲ್ಲಿ ವಿಶೇಷ ಪರಿಶೀಲನೆ ನಡೆಸಲಾಗುವುದು ಎಂದರು.

ಫ್ರೂಟ್ಸ್ ಐಡಿ ದುರ್ಬಳಕೆ?

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಆಹಾರ ಧಾನ್ಯ ಖರೀದಿಗೆ 'ಫ್ರೂಟ್ಸ್ ಐಡಿ' ಪ್ರಮುಖ ದಾಖಲೆ. ಈ ದಾಖಲೆಯನ್ನೇ ದಲ್ಲಾಳಿಗಳು ಮತ್ತು ವರ್ತಕರು ದುರ್ಬಳಕೆ ಮಾಡಿಕೊಂಡು ರೈತರ ಹೆಸರಿನಲ್ಲಿ ಭಾರಿ ಪ್ರಮಾಣದ ರಾಗಿಯನ್ನು ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿದ್ದಾರೆ ಎನ್ನುತ್ತವೆ ಆಹಾರ ಇಲಾಖೆ ಮೂಲಗಳು.

'ಎಂಎಸ್‌ಪಿ ಖರೀದಿ ಕೇಂದ್ರಗಳು ಆರಂಭವಾದ ಬಳಿಕ ಕೃಷಿ ಇಲಾಖೆಯು 'ಫ್ರೂಟ್ಸ್ ಐಡಿ'ಯನ್ನು 'ಲಾಕ್' ಮಾಡಿತ್ತು. ಆದರೆ, ತೋಟಗಾರಿಕೆ, ರೇಷ್ಮೆ ಸೇರಿದಂತೆ ಇತರ ನಾಲ್ಕು ಇಲಾಖೆಗಳಲ್ಲಿ 'ಲಾಕ್' ಮಾಡಿರಲಿಲ್ಲ. ಆ ಇಲಾಖೆಗಳ 'ಫ್ರೂಟ್ಸ್ ಐಡಿ'ಯನ್ನೇ ತಿದ್ದುಪಡಿ ಮಾಡಿಸಿಕೊಂಡು ಬಂದ ದಲ್ಲಾಳಿಗಳು ಹಾಗೂ ವರ್ತಕರು ದುರ್ಬಳಕೆ ಮಾಡಿಕೊಂಡಿರುವ ಅನುಮಾನವಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಚೀತಾಗಳ ಸಾವು: ರೇಡಿಯೊ ಕಾಲರ್ ಕಾರಣವಲ್ಲ'

ನವದೆಹಲಿ (ಪಿಟಿಐ): ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದಿಂದ ತರಿಸಲಾಗಿದ್ದ 20 ವಯಸ್ಕ ಚೀತಾಗಳಲ್ಲಿ ಐದು ಚೀತಾಗಳು ಮೃತಪಟ್ಟಿರುವುದು ನೈಸರ್ಗಿಕ ಕಾರಣಗಳಿಂದಾಗಿ ಹೊರತು ರೇಡಿಯೊ ಕಾಲರ್‌ಗಳಿಂದ ಅಲ್ಲ ಎಂದು ಕೇಂದ್ರ ಪರಿಸರ ಸಚಿವಾಲಯವು ಹೊರಡಿಸಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ.

'ರೇಡಿಯೊ ಕಾಲರ್‌ಗಳಿಂದಾಗಿ ಚೀತಾಗಳು ಸಾವಿಗೀಡಾಗಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಈ ವರದಿಗಳು ಊಹೆಗಳನ್ನು ಆಧರಿಸಿವೆ ಮತ್ತು ಅದಕ್ಕೆ ವೈಜ್ಞಾನಿಕ ಆಧಾರವಿಲ್ಲ' ಎಂದು ಪ್ರಕಟಣೆ-ಯಲ್ಲಿ ಹೇಳಲಾಗಿದೆ. ರೇಡಿಯೊ ಕಾಲರ್‌ಗಳಿಂದ ಚೀತಾಗಳು ಗಾಯಗೊಂಡು, ಬಳಿಕ ಸೋಂಕಿಗೆ ಒಳಗಾಗಿ ಮೃತಪಟ್ಟಿವೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಚೀತಾ ಯೋಜನೆಗೆ ಉತ್ತೇಜನ ನೀಡಲು ಚೀತಾ ಸಂಶೋಧನಾ ಕೇಂದ್ರ ಸೇರಿ ಹಲವಾರು ಕ್ರಮಗಳನ್ನು ತೆಗೆ-ದುಕೊಳ್ಳಲಾಗಿದೆ. ಕೇಂದ್ರದ ಚೀತಾ ಯೋಜನಾ ಸಮಿತಿಯು ಯೋಜನೆಯ ಅಭಿವೃದ್ಧಿಯನ್ನು ಕೂಲಂಕಷವಾಗಿ ಪರಿ-ಶೀಲಿಸುತ್ತಿದೆ. ಯೋಜನೆಯ ಬೆಳವಣಿಗೆ ಕುರಿತು ಸಮಿತಿ ತೃಪ್ತಿ ಹೊಂದಿದೆ ಎಂದು ಹೇಳಲಾಗಿದೆ.

ದಿಗ್ವಿಜಯ್ ಸಿಂಗ್ ವಿರುದ್ಧ ದೂರು

ವಾರಾಣಸಿ (ಉತ್ತರಪ್ರದೇಶ) (ಪಿಟಿಐ): ಆರ್‌ಎಸ್‌ಎಸ್‌ನ ಮಾಜಿ ಮುಖ್ಯಸ್ಥ ಮಾಧವ್‌ರಾವ್ ಸದಾಶಿವರಾವ್ ಗೋಳವಲಕರ್ ಅವರ ವಿರುದ್ಧ ವಿವಾದಿತ ಪೋಸ್ಟ್ ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಆರೋಪದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರ ವಿರುದ್ಧ ಸಂಸದರ/ಶಾಸಕರ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಲಾಗಿದೆ.

ಬಿಜೆಪಿ ವಿರುದ್ಧ ವಿಪಕ್ಷ ತಂತ್ರ

ಒಂದನೇ ಪುಟದಿಂದ...

ಬಹುತೇಕ ನಾಯಕರೂ ಸೋಮವಾರ ರಾತ್ರಿಯೇ ಬರುವ ನಿರೀಕ್ಷೆಯಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಆಯೋಜಿಸಿರುವ ಔತಣಕೂಟದಲ್ಲಿ ಭಾಗವಹಿಸಲಿ-ದ್ದಾರೆ. ಅದಕ್ಕೂ ಮೊದಲು, ಸಭೆಯ ಸ್ವರೂಪ ಮತ್ತು ಚರ್ಚೆಯ ವಿಷಯಗಳು ಸೇರಿದಂತೆ ಮರುದಿನದ ಸಭೆಯ ಕಾರ್ಯಸೂಚಿ ಕುರಿತು ಅನೌಪಚಾರಿ-ಕವಾಗಿ ನಾಯಕರು ಸಮಾಲೋಚನೆ ನಡೆಸಲಿದ್ದಾರೆ. ಮಂಗಳವಾರ (ಜೂನ್ 18) ಬೆಳಿಗ್ಗೆ ಸಭೆ ನಡೆಯಲಿದೆ.

ದೆಹಲಿ ಸರ್ಕಾರದ ಸೇವಾ ಚಟುವಟಿಕೆಗಳ ಮೇಲೆ ಹಿಡಿತ ಸಾಧಿಸಲು ಕೇಂದ್ರ ಸರ್ಕಾರ ತಂದಿರುವ ಸುಗ್ರೀವಾಜ್ಞೆಗೆ ಸಂಬಂಧಿಸಿದಂತೆ ಸ್ಪಷ್ಟ ನಿಲುವು ಪ್ರಕಟಿಸಬೇಕೆಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿತ್ತು. ಅಲ್ಲದೆ, ಪಟ್ನಾ ಸಭೆಯ ಬೆನ್ನಹಿಂದೆಯೇ ಕಾಂಗ್ರೆಸ್ ಕುರಿತು ಎಎಪಿ ಭಿನ್ನರಾಗ ತೆಗೆದಿತ್ತು. ಹೀಗಾಗಿ, ಬೆಂಗಳೂರಿನಲ್ಲಿ ನಡೆಯುವ ಸಭೆಯಲ್ಲಿ ಎಎಪಿ ಭಾಗವಹಿಸುವ ಬಗ್ಗೆ ಅನುಮಾನ ಉಂಟಾಗಿತ್ತು. ಇದೇ ವೇಳೆ, ಮಹಾರಾಷ್ಟ್ರದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಒಡೆದು, ಪಕ್ಷದಿಂದ ಹೊರನಡೆದ ಅಜಿತ್ ಪವಾರ್ ಎನ್‌ಡಿಎ ತೆಕ್ಕೆ ಸೇರಿದ್ದಾರೆ.

ಆದರೆ, ಸೋನಿಯಾ ಗಾಂಧಿ ನಿವಾಸದಲ್ಲಿ ಶನಿವಾರ ನಡೆದ ಪಕ್ಷದ ಸಂಸದೀಯ ಕಾರ್ಯತಂತ್ರ ಗುಂಪಿನ ಸಭೆಯ ಬಳಿಕ, ಸುಗ್ರೀವಾಜ್ಞೆಯ-ನ್ನು ವಿರೋಧಿಸುವುದಾಗಿ ಕಾಂಗ್ರೆಸ್ ಹೇಳಿದೆ. ಆ ಬೆನ್ನಲ್ಲೆ, ವಿರೋಧ ಪಕ್ಷಗಳ ಸಭೆಯಲ್ಲಿ ಭಾಗವಹಿಸುವುದಾಗಿ ಎಎಪಿ ಪ್ರಕಟಿಸಿದೆ.

ಟಿಎಂಸಿ ಮುಖ್ಯಸ್ಥೆ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಂಗಳವಾರ ಬೆಳಿಗ್ಗೆ ನಗರಕ್ಕೆ ಬರಲಿದ್ದಾರೆ. ಹೀಗಾಗಿ, ಸಿದ್ದರಾಮಯ್ಯ ಆಯೋಜಿಸಿರುವ ಔತಣಕೂಟಕ್ಕೆ ಗೈರಾಗಲಿದ್ದಾರೆ. ಜೂನ್ 27ರಂದು ಸೆವೊಕ್ ವಾಯುನೆಲೆಯಲ್ಲಿ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶವಾ-ದಾಗ ಮಮತಾ ಗಾಯಗೊಂಡಿದ್ದು ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು.

ಈ ಬೆಳವಣಿಗೆಗಳ ನಡುವೆ, ಕೆಲವು ವಿರೋಧ ಪಕ್ಷಗಳು ಪಶ್ಚಿಮ ಬಂಗಾಳದಲ್ಲಿ ನಡೆದ ಪಂಚಾಯಿತಿ ಚುನಾವಣೆ, ಕೇರಳದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ವಿಚಾರ ಮತ್ತು ಇತರ ವಿಷಯಗಳು, ದೆಹಲಿ ಮತ್ತು ಪಂಜಾಬ್‌ನಲ್ಲಿ ಎಎಪಿಗೆ ಬೆಂಬಲ ನೀಡುವ ವಿಚಾರದಲ್ಲಿ ಪರಸ್ಪರ ವಾಕ್ಸ-ಮರದಲ್ಲಿ ತೊಡಗಿವೆ. ಆದರೆ, ರಾಜ್ಯ-ಮಟ್ಟದಲ್ಲಿನ ಈ ಕದನ, ರಾಷ್ಟ್ರೀಯ ಮಟ್ಟದಲ್ಲಿ ಪರಿಣಾಮ ಬೀರಬಾರದು ಎನ್ನುವ ಸಕಾರಾತ್ಮಕ ಚಿಂತನೆ ಎಲ್ಲ ಪಕ್ಷಗಳ ನಾಯಕರಲ್ಲಿಯೂ ಮೂಡಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಭೆಗೆ ಆಹ್ವಾನಿಸಿ ವಿರೋಧ ಪಕ್ಷಗಳ ನಾಯಕರಿಗೆ ಬರೆದ ಪತ್ರದಲ್ಲಿ 'ಪಟ್ನಾ ಸಭೆಯಲ್ಲಿ ನಡೆದ ಚರ್ಚೆಗಳನ್ನು ಮುಂದುವರೆಸುವುದು ಮತ್ತು ಅದಕ್ಕೆ ವೇಗ ಕೊಡುವುದು ಮುಖ್ಯವಾಗಿದೆ. ದೇಶ ಎದುರಿಸುತ್ತಿ-ರುವ ಸವಾಲುಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ನಾವು ಒಟ್ಟಾಗಿ ಕೆಲಸ ಮಾಡಬೇಕಾಗಿದೆ' ಎಂದು ಉಲ್ಲೇಖಿಸಿದ್ದಾರೆ.

ಮಂಗಳವಾರ ಸಂಜೆ 4 ಗಂಟೆಗೆ ಜಂಟಿ ಪತ್ರಿಕಾಗೋಷ್ಠಿ ನಡೆಯಲಿದೆ. ಜೊತೆಗೆ, ಜಂಟಿ ಹೇಳಿಕೆಯನ್ನೂ ಬಿಡುಗಡೆ ಮಾಡುವ ಸಾಧ್ಯತೆಯಿದೆ.

ಸಭೆಗೆ ಬರಲಿರುವ ನಾಯಕರು

ಪಕ್ಷ	ನಾಯಕರು
ಕಾಂಗ್ರೆಸ್	ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್
ಟಿಎಂಸಿ	ಮಮತಾ ಬ್ಯಾನರ್ಜಿ, ಅಭಿಷೇಕ್ ಬ್ಯಾನರ್ಜಿ, ಡೆರೆಕ್ ಒಬ್ರಯಾನ್
ಸಿಪಿಐ	ಡಿ.ರಾಜಾ
ಸಿಪಿಎಂ	ಸೀತಾರಾಮ್ ಯೆಚೂರಿ
ಎನ್‌ಸಿಪಿ	ಶರದ್ ಪವಾರ್, ಜಿತೇಂದ್ರ ಅವ್ಹಾದ್, ಸುಪ್ರಿಯಾ ಸುಳೆ
ಜೆಡಿಯು	ನಿತೀಶ್ ಕುಮಾರ್, ಲಲ್ಲನ್ ಸಿಂಗ್, ಸಂಜಯ್ ಕುಮಾರ್ ಝಾ
ಡಿಎಂಕೆ	ಎಂ.ಕೆ. ಸ್ಟಾಲಿನ್, ಟಿ.ಆರ್.ಬಾಲು
ಎಎಪಿ	ಅರವಿಂದ ಕೇಜ್ರಿವಾಲ್
ಜೆಎಂಎಂ	ಹೇಮಂತ್ ಸೋರೆನ್
ಶಿವಸೇನಾ(ಯುಬಿಟಿ)	ಉದ್ಧವ್ ಠಾಕ್ರೆ, ಆದಿತ್ಯ ಠಾಕ್ರೆ, ಸಂಜಯ್ ರಾವುತ್
ಆರ್‌ಜೆಡಿ	ಲಾಲೂ ಪ್ರಸಾದ್, ತೇಜಸ್ವಿ ಯಾದವ್, ಮನೋಜ್ ಝಾ, ಸಂಜಯ್ ಯಾದವ್
ಸಮಾಜವಾದಿ ಪಕ್ಷ	ಅಖಿಲೇಶ್ ಯಾದವ್, ರಾಮಗೋಪಾಲ್ ಯಾದವ್, ಜಾವೇದ್ ಅಲಿ ಖಾನ್, ಲಾಲ್ ಜಿ ವರ್ಮಾ, ರಾಮ್ ಅಚಲ್ ರಾಜ್‌ಭರ್, ಆಶೀಷ್ ಯಾದವ್
ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ)	ಒಮರ್ ಅಬ್ದುಲ್ಲಾ
ಪಿಡಿಪಿ	ಮೆಹಬೂಬಾ ಮುಫ್ತಿ
ಸಿಪಿಐ(ಎಂಎಲ್)	ದೀಪಂಕರ್ ಭಟ್ಟಾಚಾರ್ಯ
ಆರ್‌ಎಲ್‌ಡಿ	ಜಯಂತ್ ಸಿಂಗ್ ಚೌಧರಿ
ಐಯುಎಂಎಲ್	ಕೆ.ಎಂ. ಖಾದರ್ ಮೊಯ್ದೀನ್, ಪಿ.ಕೆ. ಕುಂಞಾಲಿಕುಟ್ಟಿ
ಕೇರಳ ಕಾಂಗ್ರೆಸ್ (ಎಂ)	ಜೋಸ್ ಕೆ. ಮಾಣಿ
ಎಂಡಿಎಂಕೆ	ವೈಕೋ, ಜಿ. ರೇಣುಕಾದೇವಿ
ವಿಸಿಕೆ	ಟಿ. ತಿರುಮಾವಳನ್, ರವಿಕುಮಾರ್
ಆರ್‌ಎಸ್‌ಪಿ	ಎನ್.ಕೆ.ಪ್ರೇಮ್‌ಚಂದ್ರನ್
ಕೇರಳ ಕಾಂಗ್ರೆಸ್	ಪಿ.ಜೆ. ಜೋಸೆಫ್, ಫ್ರಾನ್ಸಿಸ್ ಜಾರ್ಜ್ ಕೆ.
ಕೆಎಂಡಿಕೆ	ಇ.ಆರ್. ಈಶ್ವರನ್, ಎ ಕೆ ಪಿ ಚಿನ್‌ರಾಜ್
ಎಐಎಫ್‌ಬಿ	ಜಿ. ದೇವರಾಜನ್

ಕೇಂದ್ರದ ವಿರುದ್ಧ ಜಂಟಿ ರ‍್ಯಾಲಿ

ಕೇಂದ್ರ ಸರ್ಕಾರದ ವಿರುದ್ಧ ಮುಂದಿನ ತಿಂಗಳು ಜಂಟಿ ರ‍್ಯಾಲಿ ಆಯೋಜಿಸುವ ಸಾಧ್ಯತೆ ಬಗ್ಗೆಯೂ ನಾಯಕರು ಚರ್ಚಿಸಬಹುದು.

ಆದರೆ, ಈ ಹಂತದಲ್ಲಿ ಕಾಂಗ್ರೆಸ್‌ನ ಒಂದು ಗುಂಪು ಅಂತಹ ಕಾರ್ಯಕ್ರಮಕ್ಕೆ ಒಲವು ತೋರುತ್ತಿಲ್ಲ ಎನ್ನಲಾಗಿದೆ. ಆದರೂ, ಮುಂದಿನ ದಿನಗಳಲ್ಲಿ ಸಭೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಂಚಾಲಕರೊಬ್ಬರ ಆಯ್ಕೆ ಮತ್ತು ಶಾಶ್ವತ ವ್ಯವಸ್ಥೆ-ಯೊಂದನ್ನು ರೂಪಿಸಲಿದೆಯೇ ಎಂದು ಕಾದು ನೋಡಬೇಕು. ನಿತೀಶ್ ಕುಮಾರ್ ಅಥವಾ ಶರದ್ ಪವಾರ್ ಅವರನ್ನು ಸಂಚಾಲಕ-ರನ್ನಾಗಿ ಆಯ್ಕೆ ಮಾಡುವ ಬಗ್ಗೆ ಊಹಾಪೋಹಗಳಿವೆ. ಆದರೆ, ಸೋನಿಯಾ ಅವರೂ ಸಭೆಯಲ್ಲಿ ಭಾಗವಹಿಸಲಿರುವುದರಿಂದ ಅವರು ಮುಖ್ಯಸ್ಥರಾಗಲಿದ್ದಾರೆಯೇ ಎಂಬ ಕುತೂಹಲ ಹೆಚ್ಚಿದೆ.

ಸೆಲ್ಫಿ ಸಂಭ್ರಮ ತೀಜ್ ಹಬ್ಬದ ಅಂಗವಾಗಿ ಪಂಜಾಬ್‌ನ ಅಮೃತಸರದ ದುರ್ಗಿಯಾನಾ ಮಂದಿರಕ್ಕೆ ಭಾನುವಾರ ಭೇಟಿ ನೀಡಿದ್ದ ಮಹಿಳೆಯರು ಸೆಲ್ಫಿ ತೆಗೆದುಕೊಂಡರು –ಪಿಟಿಐ ಚಿತ್ರ

ಮಸೀದಿ ಪ್ರವೇಶ ನಿಷೇಧ: ಹೈಕೋರ್ಟ್‌ಗೆ ಟ್ರಸ್ಟ್

ಔರಂಗಾಬಾದ್ (ಮಹಾರಾಷ್ಟ್ರ) (ಪಿಟಿಐ): ಜಲಗಾಂವ ಜಿಲ್ಲೆಯ ಎರಂಡೋಲ್ ಪಟ್ಟಣದಲ್ಲಿರುವ ಜುಮ್ಮಾ ಮಸೀದಿಯು ದೇವಾಲಯದಂತೆ ಕಾಣುತ್ತಿದೆ ಎಂಬ ದೂರು ಸಲ್ಲಿಕೆಯಾಗಿರುವ ಕಾರಣ ಮಸೀದಿ ಪ್ರವೇಶಿಸುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾಧಿಕಾರಿಯ ಈ ಆದೇಶ 'ಕಾನೂನುಬಾಹಿರ ಹಾಗೂ ಸರ್ವಾಧಿಕಾರಿ ಧೋರಣೆ ತೋರಿಸುತ್ತದೆ' ಎಂದು ದೂರಿ ಜುಮ್ಮಾ ಮಸೀದಿ ಟ್ರಸ್ಟ್, ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠಕ್ಕೆ ಅರ್ಜಿ ಸಲ್ಲಿಸಿದೆ.

'ಮಸೀದಿ ಪ್ರವೇಶಿಸುವುದನ್ನು ನಿಷೇಧಿಸಿ ಜುಲೈ 11ರಂದು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದು, ಅದರ ಬೀಗದ ಕೈಗಳನ್ನು ಎರಂಡೋಲ್ ಪಟ್ಟಣ ಪಂಚಾಯಿತಿಗೆ ಒಪ್ಪಿಸುವಂತೆ ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಆದೇಶವನ್ನು ರದ್ದುಗೊಳಿಸು-ವಂತೆ ಕೋರಿ ಟ್ರಸ್ಟ್ ಅರ್ಜಿ ಸಲ್ಲಿಸಿದ್ದು, ಹೈಕೋರ್ಟ್ ಪೀಠವು ಮಂಗಳವಾರ ವಿಚಾರಣೆ ನಡೆಸಲಿದೆ' ಎಂದು ಟ್ರಸ್ಟ್ ಪರ ವಕೀಲ ಎಸ್.ಎಸ್.ಕಾಜಿ ತಿಳಿಸಿದ್ದಾರೆ.

'ಮಸೀದಿಯನ್ನು ಐತಿಹಾಸಿಕ ಸ್ಮಾರಕ ಎಂಬುದಾಗಿ ಮಹಾರಾಷ್ಟ್ರ ಸರ್ಕಾರ ಘೋಷಿಸಿದೆ. ಪಾಂಡವವಾಡಾ ಸಂಘರ್ಷ ಸಮಿತಿ ಎಂಬ ಸಂಘಟನೆ ಮೇ ತಿಂಗಳಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಮಸೀದಿಯು ದೇವಸ್ಥಾನದಂತೆ ಕಾಣುತ್ತಿದೆ. ಹಾಗಾಗಿ ಮುಸ್ಲಿಮರನ್ನು ಅಲ್ಲಿಂದ ತೆರವುಗೊ-ಳಿಸಬೇಕು ಎಂದು ಕೋರಿದೆ. ಟ್ಟಣದಲ್ಲಿ ಶಾಂತಿ ಕದಡುವ ಉದ್ದೇಶದಿಂದಲೇ ಸಮಿತಿ ಈ ರೀತಿ ಮನವಿ ಸಲ್ಲಿಸಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಜೂನ್ 14ರಂದು ಟ್ರಸ್ಟ್‌ಗೆ ನೋಟಿಸ್ ನೀಡಿದ್ದ ಜಿಲ್ಲಾಧಿಕಾರಿ, ವಿಚಾರಣೆಗಾಗಿ ಜೂನ್ 27ರಂದು ತಮ್ಮ ಕಚೇರಿಯಲ್ಲಿ ಹಾಜರಿರುವಂತೆ ಸೂಚಿಸಿದ್ದರು. ಅಂದು ಟ್ರಸ್ಟಿಗಳು ಕಚೇರಿಯಲ್ಲಿ ಹಾಜರಿದ್ದರು. ಆದರೆ, ಬಿಡುವಿರದ ಕಾರಣ ಅಂದು ಜಿಲ್ಲಾಧಿಕಾರಿ ವಿಚಾರಣೆ ನಡೆಸಲಿಲ್ಲ.

'ಪ್ರತಿಕ್ರಿಯೆ ಸಲ್ಲಿಸಲು ಅವಕಾಶ ನೀಡದೇ, ಮಸೀದಿ ಪ್ರವೇಶ ನಿರ್ಬಂಧಿಸಿ ಆದೇಶಿಸಿದ್ದಾರೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಸುಭಾಷಿತ

ನಮ್ಮ ನಡವಳಿಕೆಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಎಂದು ನಾವೇ ಹೊರುತ್ತೇವೆಯೋ ಅಂದೇ ನಮಗೆ ಮಹತ್ವದ ದಿನ. ನಿಜವಾಗಿಯೂ ನಾವು ಬೆಳವಣಿಗೆ ಹೊಂದುವ ದಿನ ಕೂಡ ಅದೇ ಆಗಿರುತ್ತದೆ.

–ಜಾನ್ ಸಿ. ಮ್ಯಾಕ್ಸ್‌ವೆಲ್

ಅಂಗನವಾಡಿಗಳಲ್ಲಿ ಕಳಪೆ ಮೊಟ್ಟೆ ಮಕ್ಕಳ ವಿಷಯದಲ್ಲಿ ರಾಜಿ ಸಲ್ಲದು

ಅಂಗನವಾಡಿ ಕೇಂದ್ರಗಳಿಗೆ ಹಾಳಾದ ಮೊಟ್ಟೆಗಳು ಪೂರೈಕೆಯಾಗುತ್ತಿರುವುದರ ಬಗ್ಗೆ ಹಾವೇರಿ ಜಿಲ್ಲೆಯಿಂದ ವರದಿಯಾಗಿರುವ ಪ್ರಕರಣಗಳು ಮಕ್ಕಳು ಮತ್ತು ಗರ್ಭಿಣಿಯರ ಆರೋಗ್ಯದ ಬಗ್ಗೆ ಆತಂಕ ಉಂಟುಮಾಡುವಂತಿವೆ. ಕಳಪೆ ಗುಣಮಟ್ಟದ ಮೊಟ್ಟೆಗಳ ಪೂರೈಕೆಯ ಬಗ್ಗೆ ರಾಮನಗರ, ಹಾಸನ ಹಾಗೂ ಉತ್ತರ ಕರ್ನಾಟಕದ ಹಲವೆಡೆಗಳಿಂದಲೂ ದೂರುಗಳು ಬಂದಿದ್ದು, ಈ ದೂರುಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ದೂರುಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಅನುಮಾನ ಮೂಡಿಸುವಂತಿವೆ. ಮಕ್ಕಳು ಮತ್ತು ತಾಯಂದಿರನ್ನು ಅಪೌಷ್ಟಿಕತೆಯಿಂದ ರಕ್ಷಿಸುವುದು ಹಾಗೂ ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು ಶಿಶು ಅಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶ. ಅಪೌಷ್ಟಿಕತೆ ನಿವಾರಿಸುವ ಉದ್ದೇಶದಿಂದ ಮಕ್ಕಳು ಹಾಗೂ ಗರ್ಭಿಣಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆಗಳನ್ನು ಪೂರೈಸಲಾಗುತ್ತಿದೆ. ಗುತ್ತಿಗೆದಾರರು ಒದಗಿಸುವ ಈ ಮೊಟ್ಟೆಗಳು ಕಳಪೆ ಗುಟ್ಟಮಟ್ಟದವಾಗಿದ್ದು, ಬೇಯಿಸಿ ಸಿಪ್ಪೆ ತೆಗೆದ ನಂತರ ಅವುಗಳಿಂದ ಕೆಟ್ಟ ವಾಸನೆ ಬರುತ್ತಿದೆ ಹಾಗೂ ಮೊಟ್ಟೆಯ ಒಳಭಾಗ ಕಪ್ಪು ಬಣ್ಣಕ್ಕೆ ತಿರುಗಿರುತ್ತದೆ ಎಂದು ಅಂಗನವಾಡಿ ಕಾರ್ಯಕರ್ತೆಯರು ದೂರಿದ್ದಾರೆ. ಕೊಳೆತವುಗಳನ್ನು ಬಿಸಾಡಬೇಕಾದುದರಿಂದ, ಮಕ್ಕಳಿಗೆ ವಿತರಿಸಲು ಮೊಟ್ಟೆಗಳ ಕೊರತೆಯಾಗುತ್ತಿದೆ. ಕೊಳೆತು ನಾರುವ ಮೊಟ್ಟೆಗಳು ಗರ್ಭಿಣಿಯರ ಕುಟುಂಬದ ಸದಸ್ಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ನಡುವೆ ಜಗಳಕ್ಕೂ ಕಾರಣವಾಗಿವೆ. ಕಳಪೆ ಮೊಟ್ಟೆಗಳು ಮಕ್ಕಳು ಹಾಗೂ ಗರ್ಭಿಣಿಯರ ಅನಾರೋಗ್ಯಕ್ಕೆ ಕಾರಣವಾಗುವ ಸಾಧ್ಯತೆ ಇಲ್ಲದಿಲ್ಲ. ಕೆಲವು ಮಕ್ಕಳು ವಾಂತಿ–ಭೇದಿಯಿಂದ ಬಳಲಿದ ಪ್ರಕರಣಗಳೂ ವರದಿಯಾಗಿವೆ. ಮಕ್ಕಳು ಮತ್ತು ತಾಯಂದಿರ ಅಪೌಷ್ಟಿಕತೆ ನಿವಾರಿಸುವ ಗುರಿ ಹೊಂದಿರುವ ಅಂಗನವಾಡಿ ಕೇಂದ್ರಗಳೇ ಅಪೌಷ್ಟಿಕತೆಯಿಂದ ಬಳಲುತ್ತಿರುವುದು ದುರದೃಷ್ಟಕರ.

ತಪ್ಪಿತಸ್ಥರನ್ನು ಕಪ್ಪುಪಟ್ಟಿಗೆ ಸೇರಿಸಿದರಷ್ಟೇ ಸಾಲದು, ಮಕ್ಕಳು ಹಾಗೂ ಗರ್ಭಿಣಿಯರ ಆರೋಗ್ಯದೊಂದಿಗೆ ಆಟವಾಡಿರುವವರ ವಿರುದ್ಧ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು

ಅಂಗನವಾಡಿ ಕೇಂದ್ರಗಳಲ್ಲಿ ಮೊಟ್ಟೆಗಳನ್ನು ವಿತರಿಸುವ ಕಾರ್ಯಕ್ರಮದ ಕುರಿತ ದೂರು ಹೊಸತೇನೂ ಅಲ್ಲ. ಸರ್ಕಾರದಿಂದ ಸಕಾಲಕ್ಕೆ ಅನುದಾನ ದೊರೆಯದ ಕಾರಣ, ಮೊಟ್ಟೆಗಳ ಖರೀದಿಯು ಅಂಗನವಾಡಿ ಕೇಂದ್ರಗಳಿಗೆ ಸವಾಲಾಗಿ ಪರಿಣಮಿಸಿದೆ. ಸಾಲ ಮಾಡಿ ಮೊಟ್ಟೆ ಖರೀದಿಸಿ ವಿತರಿಸಿ, ನಾಲ್ಕೈದು ತಿಂಗಳಾದರೂ ಸರ್ಕಾರದಿಂದ ಹಣ ಬಾರದೆ ಹೋದಾಗ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿರುವುದೂ ಇದೆ. ಕಳೆದ ವರ್ಷ ಪ್ರತಿ ಮೊಟ್ಟೆಯ ಖರೀದಿಗೆ ಸರ್ಕಾರದಿಂದ ₹ 5ರಿಂದ ₹ 6 ದೊರೆಯುತ್ತಿತ್ತು. ದರ ಏರಿಕೆಯಾದ ಸಂದರ್ಭಗಳಲ್ಲಿ ಮೊಟ್ಟೆ ಖರೀದಿ ಕಷ್ಟವಾಗುತ್ತದೆ. ಈ ದೂರುಗಳ ಹಿನ್ನೆಲೆಯಲ್ಲಿ ಈ ವರ್ಷದ ಜನವರಿಯಿಂದ ತಾಲ್ಲೂಕುವಾರು ಟೆಂಡರ್ ಕರೆದು, ಗುತ್ತಿಗೆದಾರರ ಮೂಲಕ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಖರೀದಿಸಲು ಸರ್ಕಾರ ಅವಕಾಶ ಕಲ್ಪಿಸಿದೆ. ಹೊಸ ಗುತ್ತಿಗೆ ಪದ್ಧತಿಯಲ್ಲಿಯೂ ದೋಷಗಳು ಕಾಣಿಸಿಕೊಂಡಿರುವುದರಿಂದ, ಟೆಂಡರ್ ಪದ್ಧತಿಯನ್ನು ರದ್ದುಪಡಿಸಿ, ಮೊಟ್ಟೆ ಖರೀದಿ ಜವಾಬ್ದಾರಿಯನ್ನು ಬಾಲ ವಿಕಾಸ ಸಮಿತಿಗೆ ವಹಿಸಿಕೊಡಬೇಕೆನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಮೊಟ್ಟೆ ಖರೀದಿಯನ್ನು ಕೇಂದ್ರೀಕರಣಗೊಳಿಸುವ ಬಗ್ಗೆ ಹಾಗೂ ಸರ್ಕಾರಿ ಸಂಸ್ಥೆಗಳಿಂದ ಖರೀದಿಸುವ ಸಾಧ್ಯತೆ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಪ್ರಸ್ತಾಪಿಸಿದ್ದಾರೆ. ಕಳಪೆ ಮೊಟ್ಟೆ ಪೂರೈಸಿರುವ ಗುತ್ತಿಗೆದಾರರಿಗೆ ನೋಟಿಸ್ ನೀಡಲಾಗಿದ್ದು, ತಪ್ಪಿತಸ್ಥ ಪೂರೈಕೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು ಎಂದೂ ಅವರು ಹೇಳಿದ್ದಾರೆ. ತಪ್ಪಿತಸ್ಥರನ್ನು ಕಪ್ಪುಪಟ್ಟಿಗೆ ಸೇರಿಸಿದರಷ್ಟೇ ಸಾಲದು; ಮಕ್ಕಳು ಹಾಗೂ ಗರ್ಭಿಣಿಯರ ಆರೋಗ್ಯದೊಂದಿಗೆ ಆಟ ಆಡಿರುವವರ ವಿರುದ್ಧ ಪ್ರಕರಣವನ್ನು ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕಾಗಿದೆ. ಅಂಗನವಾಡಿ ಕೇಂದ್ರಗಳಿಗೆ ಹಣದ ಕೊರತೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಅಂಗನವಾಡಿಗಳ ಮೂಲಕ ನೀಡುವ ಪೌಷ್ಟಿಕ ಆಹಾರಕ್ಕೆ ಬಳಸುವ ತರಕಾರಿ ಖರೀದಿಗಾಗಿ ಸರ್ಕಾರ ಒಬ್ಬರಿಗೆ ದಿನವೊಂದಕ್ಕೆ ಒಂದೂವರೆ ರೂಪಾಯಿ ಗೊತ್ತುಪಡಿಸಿದೆ. ಈ ಅವೈಜ್ಞಾನಿಕ ದರಪಟ್ಟಿಯ ಬಗ್ಗೆಯೂ ದೂರುಗಳು ವ್ಯಕ್ತವಾಗಿವೆ. ಮಕ್ಕಳು ಹಾಗೂ ತಾಯಂದಿರ ಆರೋಗ್ಯದ ಕಾಳಜಿಗೆ ಸಂಬಂಧಿಸಿದಂತೆ ಯಾವ ರೀತಿಯ ಚೌಕಾಸಿಯೂ ಸಲ್ಲದು.

ದಿನದ ಟ್ವೀಟ್

ಅನುಕೂಲಸಿಂಧು ಹೊಂದಾಣಿಕೆ

ತೀವ್ರ ಧ್ರುವೀಕೃತಗೊಂಡ ರಾಜಕಾರಣದಲ್ಲಿ ಸ್ಪಷ್ಟ ಸಿದ್ಧಾಂತ ಇರುವ ರಾಜಕೀಯ ಪಕ್ಷಗಳು ಇರುವುದಿಲ್ಲ. ಅದರ ಪರಿಣಾಮವಾಗಿ ಸೈದ್ಧಾಂತಿಕ ನೆಲೆಯ ಕಾರ್ಯಕರ್ತರೂ ಇರುವುದಿಲ್ಲ. ಆಗ ರಾಜಕೀಯ ಪಕ್ಷಗಳು ಸ್ವತಂತ್ರವಾಗಿ ಉಳಿದುಕೊಳ್ಳಲು ಹೆಚ್ಚೆಚ್ಚು ಸವಾಲು ಎದುರಿಸಬೇಕಾಗುತ್ತದೆ. ಜೆಡಿಎಸ್ ಪಕ್ಷವು ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡರೆ, ಅದು ಬಿಜೆಪಿ ಪಾಲಿಗೆ ಶುದ್ಧ ಅನುಕೂಲಸಿಂಧು ಹೊಂದಾಣಿಕೆ, ಜೆಡಿಎಸ್ ಪಾಲಿಗೆ ಅಸ್ತಿತ್ವಕ್ಕಾಗಿನ ಹೊಂದಾಣಿಕೆ ಆಗುತ್ತದೆ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ರಾಷ್ಟ್ರೀಯ ಸಹಕಾರಿ ಗ್ರಾಹಕರ ಮಹಾಮಂಡಳವು (ಎನ್‌ಸಿಸಿಎಫ್) ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ಸಂಚಾರಿ ವ್ಯಾನ್‌ಗಳಲ್ಲಿ ಕೆ.ಜಿ.ಗೆ ₹ 90ರಂತೆ ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಮಾಡಲಿದೆ. ಟೊಮೆಟೊ ಬೆಲೆ ಕೆ.ಜಿ.ಗೆ ₹ 2ಕ್ಕೆ ಇಳಿದು, ರೈತರು ಟೊಮೆಟೊವನ್ನು ರಸ್ತೆಗಳಲ್ಲಿ ಸುರಿಯುವಂತಹ ಸ್ಥಿತಿ ನಿರ್ಮಾಣವಾಗಿದ್ದಾಗ ಈ ಎನ್‌ಸಿಸಿಎಫ್ ಎಲ್ಲಿಗೆ ಹೋಗಿತ್ತು?

(ಈಗ ಕೆ.ಜಿ.ಗೆ ₹ 800ರಂತೆ ಅಲ್ಲಿ ಮಾರಾಟ ಮಾಡಲಾಗುತ್ತಿದೆ)

ರಮಣ್‌ದೀಪ್ ಸಿಂಗ್ ಮಾನ್, ಎಂಜಿನಿಯರ್

25 ವರ್ಷಗಳ ಹಿಂದೆ

ಶುಕ್ರವಾರ, 17-7-1998

ಅಂಚೆ ಮುಷ್ಕರ ಅಂತ್ಯ: ಬೇಡಿಕೆ ಈಡೇರಿಕೆ ಭರವಸೆ

ನವದೆಹಲಿ, ಜುಲೈ 16 (ಪಿಟಿಐ, ಯುಎನ್‌ಐ)– ರಾಷ್ಟ್ರದಾದ್ಯಂತ ಕಳೆದ ಎಂಟು ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ಸುಮಾರು 6 ಲಕ್ಷ ಅಂಚೆ ನೌಕರರು ಇಂದು ಮಧ್ಯಾಹ್ನ ಕೊನೆಗೊಳಿಸಿದ್ದಾರೆ. ಈ ನಡುವೆ, ತಲ್ವಾರ್ ಸಮಿತಿಯ ಶಿಫಾರಸುಗಳನ್ನು ಕ್ಷಿಪ್ರ ಜಾರಿಗೆ ತರಲಾಗುವುದು ಎಂದು ಸಂಪರ್ಕ ಖಾತೆಯ ಸಚಿವೆ ಸುಷ್ಮಾ ಸ್ವರಾಜ್ ಅವರು ಲೋಕಸಭೆಯಲ್ಲಿ ಇಂದು ಪ್ರಕಟಿಸಿದರು.

ಸದನದಲ್ಲಿ ಹೇಳಿಕೆ ನೀಡಿದ ಸಚಿವೆ, ಮುಷ್ಕರವನ್ನು ನಿಲ್ಲಿಸುವುದಾಗಿ ಅಂಚೆ ನೌಕರರ ಸಂಘದ ರಾಷ್ಟ್ರೀಯ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜೆ.ಕೆ. ಪದ್ಮನಾಭನ್ ಮತ್ತು ಕಾರ್ಯದರ್ಶಿ ಆರ್.ಎಲ್. ಭಟ್ಟಾಚಾರ್ಯ ಅವರು ಲಿಖಿತ ಹೇಳಿಕೆ ನೀಡಿದ್ದಾರೆ. ಅಂಚೆ ನೌಕರರು ಎದುರಿಸುತ್ತಿರುವ ಸಮಸ್ಯೆಗಳನ್ನು ತ್ವರಿತ ಇತ್ಯರ್ಥಪಡಿಸುವುದಾಗಿ ಸರ್ಕಾರ ಅವರ ತಮ್ಮಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದೂ ಅವರು ಹೇಳಿದರು.

ಕೃಷ್ಣಾ: ಇನ್ನೊಂದು ಜಲ ನಿಗಮ– ಮುಖ್ಯಮಂತ್ರಿ ಪಟೇಲ್

ಬೆಂಗಳೂರು, ಜುಲೈ 16– ಕೃಷ್ಣಾ ನದಿ ನೀರಿನ ರಾಜ್ಯದ ಪಾಲನ್ನು 2000 ಇಸವಿ ಒಳಗೆ ಸಂಪೂರ್ಣವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ 'ಕೃಷ್ಣಾ ಭಾಗ್ಯ ಜಲ ನಿಗಮ'ದ ಮಾದರಿಯಲ್ಲಿ ಇನ್ನೊಂದು ನಿಗಮವನ್ನು ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 17-7-1973

ಚಿಮನಭಾಯಿ ಪಟೇಲ್ ಗುಜರಾತಿನ ಹೊಸ ಮುಖ್ಯಮಂತ್ರಿ

ನವದೆಹಲಿ, ಜುಲೈ 16– ಗುಜರಾತ್ ಮುಖ್ಯಮಂತ್ರಿ ಸ್ಥಾನಕ್ಕೆ ಜೂನ್ 19ರಂದು ರಾಜೀನಾಮೆ ಕೊಟ್ಟ ಘನಶ್ಯಾಮ ಓಜಾ ಅವರ ಸ್ಥಾನಕ್ಕೆ ಚಿಮನಭಾಯಿ ಪಟೇಲರು ಆಯ್ಕೆಯಾಗಿರುವುದಾಗಿ ಇಂದು ಇಲ್ಲಿ ಘೋಷಿಸಲಾಯಿತು.

ರಾಜ್ಯ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕತ್ವಕ್ಕೆ ನಡೆದ ಚುನಾವಣೆಯಲ್ಲಿ ಪಟೇಲರಿಗೆ 72 ಮತಗಳು ಬಂದಿದ್ದರೆ, ಅಧಿಕೃತ ಬೆಂಬಲ ಪಡೆದಿದ್ದ ಪ್ರತಿಸ್ಪರ್ಧಿ ಕಾಂತಿಲಾಲ್ ಘಿಯಾ ಅವರಿಗೆ 62 ಮತಗಳು ಬಂದಿವೆ. ನಿರ್ಗಮಿಸಲಿರುವ ಓಜಾ ಸಂಪುಟದಲ್ಲಿ ಪಟೇಲರು ಯೋಜನಾ ಸಚಿವರಾಗಿದ್ದರು.

ವೈಫಲ್ಯಗಳನ್ನು ಒಪ್ಪಿಕೊಂಡು ಹೊಸ ಚುನಾವಣೆ ನಡೆಸಿ

ಹುಬ್ಬಳ್ಳಿ, ಜುಲೈ 16– ಪ್ರಧಾನಿ ಇಂದಿರಾ ಗಾಂಧಿಯವರಿಗೆ ಸ್ವಲ್ಪವಾದರೂ 'ರಾಜಕೀಯ ಪ್ರಾಮಾಣಿಕತೆ' ಇದ್ದರೆ, ಅವರು ತಮ್ಮ ವೈಫಲ್ಯಗಳನ್ನು ಒಪ್ಪಿಕೊಂಡು ಲೋಕಸಭೆ ವಿಸರ್ಜಿಸಿ, ಲೋಕಸಭೆಗೆ ಮತ್ತು ರಾಷ್ಟ್ರಪತಿ ಆಡಳಿತದಲ್ಲಿರುವ ರಾಜ್ಯಗಳ ವಿಧಾನಸಭೆಗಳಿಗೆ ಹೊಸದಾಗಿ ಚುನಾವಣೆ ನಡೆಸಲಿ ಎಂದು ಭಾರತೀಯ ಜನಸಂಘದ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಒತ್ತಾಯಪಡಿಸಿದರು.

ಇಲ್ಲಿಯ ನೆಹರೂ ಮೈದಾನದಲ್ಲಿ ಇಂದು ಸಂಜೆ ಆರಂಭವಾದ ಜನಸಂಘದ ರಾಷ್ಟ್ರೀಯ ಪ್ರತಿನಿಧಿ ಸಭೆಯ ಮೂರು ದಿನಗಳ ಬಹಿರಂಗ ಅಧಿವೇಶನದಲ್ಲಿ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

ಸದನಗಳಲ್ಲಿ ವಿರೋಧಪಕ್ಷದ ನಾಯಕರಿಲ್ಲದ ದೈನೇಸಿ ಸ್ಥಿತಿ...

ಬಿಜೆಪಿ: ಹೆಡೆ ಮುರಿದ ಹಾವು

ಗತಿಬಿಂಬ

ವೈ.ಗ. ಜಗದೀಶ್

ವಿಧಾನಸಭೆ ಚುನಾವಣೆ ಫಲಿತಾಂಶ ಹೊರಬಿದ್ದು ಎರಡು ತಿಂಗಳು ಕಳೆದು, ರಾಜ್ಯದ ಹಣೆಬರಹ ನಿರ್ಧರಿಸುವ ಬಜೆಟ್ ಮಂಡನೆ ಮುಗಿದರೂ ವಿರೋಧಪಕ್ಷದ ನಾಯಕರನ್ನು ಆಯ್ಕೆ ಮಾಡಲಾಗದ ದೈನೇಸಿ ಸ್ಥಿತಿಗೆ ಬಿಜೆಪಿ ತಲುಪಿದೆ. ಹೆಡೆ ಮುರಿದ ಹಾವೊಂದು ಬಿರುಸಾಗಿ ಬಾಲ ಅಲ್ಲಾಡಿಸುತ್ತಿರುತ್ತದೆ. ಇದನ್ನು ನೋಡಿದರೆ, ಅದಕ್ಕೆ ಇನ್ನೂ ಜೀವವಿದೆಯೇನೋ ಎಂಬಂತೆ ಭಾಸವಾಗುತ್ತದೆ. ಕರ್ನಾಟಕದ ಕಮಲ ಪಡೆಗೆ ಇದಕ್ಕಿಂತ ಬೇರೆ ಹೋಲಿಕೆ ಬೇಕಿಲ್ಲ.

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಸೂತ್ರ ಹಿಡಿದಿದ್ದ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹಾಗೂ ನಾಗ್ಪುರ ಮೂಲದ ಕೆಲವು ಪ್ರಮುಖರ ಮಾತು ಕೇಳಿದ್ದಕ್ಕೆ, ಈಗ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಪಶ್ಚಾತ್ತಾಪ ಪಡುತ್ತಿರುವುದು ರಹಸ್ಯವೇನಲ್ಲ. ನವಿಲು ಹುಳು–ಹುಪ್ಪಡಿ, ಕಾಳನ್ನು ತಿನ್ನುತ್ತದೆ ಯಾದರೂ ಅದಕ್ಕೆ ಬಲು ಇಷ್ಟದ ಆಹಾರ ಹಾವು. ಬಿಜೆಪಿಯಲ್ಲಿ ಬುಸುಗುಡುತ್ತಾ, ಕೆಲವೊಮ್ಮೆ ಎದುರಾಳಿಗಳನ್ನು ಕಚ್ಚುವಷ್ಟು ರೊಚ್ಚು ತೋರಿಸುತ್ತಿದ್ದ ನಾಯಕರನ್ನು ಚುನಾವಣೆ ವೇಳೆ 'ಹಿರಿತನ'ದ ನೆವವೊಡ್ಡಿ ಮೂಲೆಗೆ ತಳ್ಳಲಾಯಿತು. ಸರ್ಕಾರದ ವಿರುದ್ಧ ಹರಿಹಾಯಬಲ್ಲ ತಾಕತ್ತಿದ್ದ ಹಾವುಗಳನ್ನು ಪ್ರಧಾನಿ ಮೋದಿಯವರ 'ನವಿಲು' ಹಿಡಿದು, ಹೆಡೆ ಮುರಿದುಬಿಟ್ಟಿದೆ. ಬಜೆಟ್ ಅಧಿವೇಶನ ವಾರಾಂತ್ಯದಲ್ಲಿ ಮುಗಿಯಲಿದ್ದು, ಎರಡೂ ಸದನಗಳಲ್ಲಿ ವಿರೋಧಪಕ್ಷದ ನಾಯಕ ಸ್ಥಾನ ಖಾಲಿಯೇ ಉಳಿದಿದೆ.

ವಿರೋಧಪಕ್ಷದ ನಾಯಕನನ್ನು 'ಛಾಯಾ ಮುಖ್ಯಮಂತ್ರಿ' ಎಂದೇ ಕರೆಯಲಾಗುತ್ತದೆ. ಮುಖ್ಯಮಂತ್ರಿಗಿರುವ ಆಡಳಿತಾತ್ಮಕ ಅಧಿಕಾರ ಇರುವುದಿಲ್ಲವಾದರೂ ಜನರ ದನಿಗೆ ಬಾಯಾಗುವ, ಸರ್ಕಾರದ ತಪ್ಪುನಡೆಯನ್ನು ಜಗಜ್ಜಾಹೀರು ಮಾಡುವ ಸಾಂವಿಧಾನಿಕ ಹೊಣೆ ಈ ಹುದ್ದೆಗೆ ಇದೆ. ರಾಜ್ಯದಲ್ಲಿ ಈ ಸ್ಥಾನದಲ್ಲಿದ್ದ ಅನೇಕರು, ಆ ಕುರ್ಚಿಯ ಮಹತ್ವವನ್ನು ತೋರಿಸಿದ್ದಲ್ಲದೆ, ಮತ್ತೆ ನಡೆದ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದು ಸಾಮರ್ಥ್ಯವನ್ನೂ ಮೆರೆದಿದ್ದಾರೆ. ಈ ಸ್ಥಾನ, ಬಿಜೆಪಿ ವರಿಷ್ಠರು ಎಣಿಸಿರಬಹುದಾದಷ್ಟು ನಗಣ್ಯವಲ್ಲ.

ಕರ್ನಾಟಕ ವಿಧಾನಮಂಡಲದ ಚರಿತ್ರೆಯನ್ನು ಗಮನಿಸಿದರೆ, ಕಲಾಪ ನಡೆಯುತ್ತಿದ್ದ ಸಮಯದಲ್ಲಿ ವಿರೋಧಪಕ್ಷದ ನಾಯಕರ ಸ್ಥಾನ ಭರ್ತಿಯಾಗದೇ ಇದ್ದ ಅವಧಿಯೇ ಕಾಣಸಿಗುವುದಿಲ್ಲ. ಚುನಾವಣೆ ನಡೆದು, ಹೊಸದಾಗಿ ಸರ್ಕಾರ ರಚನೆ ಆದಾಗಲೆಲ್ಲಾ ವಿರೋಧ ಪಕ್ಷದ ನಾಯಕರ ಆಯ್ಕೆಯೂ ಬಹುಬೇಗ ಆಗಿದ್ದಿದೆ. ಈವರೆಗೆ ಹೆಚ್ಚೆಂದರೆ 20 ದಿನಗಳಷ್ಟು ವಿಳಂಬ ಆಗಿದ್ದಿದೆ. 1978ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಎಸ್.ಆರ್.ಬೊಮ್ಮಾಯಿ ವಿರೋಧ ಪಕ್ಷದ ನಾಯಕರಾಗಲು 20 ದಿನ ಆಗಿತ್ತು. 1989ರಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆದಾಗ ಡಿ.ಬಿ.ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಲು 18 ದಿನದ ಅವಧಿ ಹಿಡಿದಿತ್ತು. ಮೊದಲ ಅಧಿವೇಶನ ನಡೆಯುವ ಹೊತ್ತಿಗೆ ವಿರೋಧ ಪಕ್ಷದ ನಾಯಕರ ಹೆಸರು ಅಖೈರಾಗಿರುತ್ತಿತ್ತು. ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲಿನ ಉದಾತ್ತ ಪರಂಪರೆಯನ್ನು 'ಆಪರೇಷನ್ ಕಮಲ'ದ ಮೂಲಕ ಮುರಿದಿದ್ದ ಬಿಜೆಪಿ, ಈಗ ವಿರೋಧಪಕ್ಷದ ನಾಯಕರ ಸ್ಥಾನವನ್ನು ಒಂದು ಅಧಿವೇಶನ ಪೂರ್ತಿ ಖಾಲಿ ಬಿಟ್ಟು, ಮತ್ತೊಂದು ಎಡವಟ್ಟು ಮಾಡಿದೆ.

ವಿಶ್ವದಲ್ಲೇ ಅತಿ ಹೆಚ್ಚು ಸದಸ್ಯತ್ವ ಹೊಂದಿದ ಏಕೈಕ ಪಕ್ಷ ಎಂದು ಬಿಜೆಪಿ ನಾಯಕರು ಬಣ್ಣಿಸಿಕೊಳ್ಳುವುದುಂಟು. ಚುನಾಯಿತ ಸರ್ಕಾರವನ್ನು ಪ್ರಜಾತಾಂತ್ರಿಕವಲ್ಲದ ನೆಲೆಯಲ್ಲಿ ರಾತ್ರೋರಾತ್ರಿ ಉರುಳಿಸಿ, ತಮಗೆ ಬೇಕಾದವರನ್ನು ಮುಖ್ಯಮಂತ್ರಿ ಮಾಡುವ 'ದಮ್ಮು–ತಾಕತ್ತು' ಮೋದಿ– ಅಮಿತ್ ಶಾ ಅವರಿಗಿದೆ. ಸೋಲಿನ ಹತಾಶೆಯೇ ಉಂಡುಡುವಷ್ಟು ಇರುವಾಗ, ಕಾಂಗ್ರೆಸ್ ನೇತೃತ್ವದ ಸರ್ಕಾರ ಗ್ಯಾರಂಟಿಗಳನ್ನು ಜಾರಿ ಮಾಡುತ್ತಾ, ಜನರನ್ನು ಸೆಳೆಯುತ್ತಿರುವುದನ್ನು ಕಂಡು ಬಿಜೆಪಿ ನಾಯಕರೇ ಕಂಗಾಲಾಗಿ ಹೋಗಿದ್ದಾರೆ. ಅಂತಹ ಆತಂಕದ ಹೊತ್ತಿನಲ್ಲಿ, ವಿರೋಧಪಕ್ಷದ ನಾಯಕರಿಲ್ಲದೇ ಇರುವುದು ಶಾಸಕರು, ನಾಯಕರನ್ನು ಅಸಹಾಯಕತೆಯ ಕತ್ತಲಿಗೆ ದೂಡಿದಂತಾಗಿದೆ.

ಹಿರಿಯರನ್ನೆಲ್ಲ ಮೂಲೆಗೆ ಅಟ್ಟಿದ ಮೇಲೆ, ಸರ್ಕಾರವನ್ನು ಸಮರ್ಥವಾಗಿ ಎದುರಿಸುವ ಸದನವೀರರೇ ವಿರಳರಾಗಿದ್ದಾರೆ. ಹಾಗೆ ನೋಡಿದರೆ, ಸರ್ಕಾರವನ್ನು ಎದುರಿಸುವ ಸಾಮರ್ಥ್ಯ ಬಸವರಾಜ ಬೊಮ್ಮಾಯಿ ಅವರಿಗೆ ಇದೆ. ಆರೇಳು ಮುಖ್ಯಮಂತ್ರಿಗಳ ಜತೆಗಿನ ಒಡನಾಟ, ಗೃಹ, ನೀರಾವರಿ, ಕಾನೂನು, ಹಣಕಾಸು ಖಾತೆಗಳನ್ನು ನಿರ್ವಹಿಸಿದ ಅನುಭವ, ಆರ್ಥಿಕತೆ ಕುರಿತ ಜ್ಞಾನವೂ ಕಡಿಮೆಯೇನಿಲ್ಲ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ವಿಫಲರಾದರೆಂಬ ಕಾರಣಕ್ಕೆ ಅವರ ಮೇಲೆ ಮೋದಿ–ಶಾ ಅವರಿಗೆ ಪೂರ್ಣ ವಿಶ್ವಾಸ ಇದ್ದಂತಿಲ್ಲ. ಸ್ವಲ್ಪ ತಯಾರು ಮಾಡಿಕೊಂಡರೆ ಆರ್. ಅಶೋಕ, ವಿ. ಸುನಿಲ್ ಕುಮಾರ್ ಕೂಡ ಸಮರ್ಥ ಆಯ್ಕೆ ಆಗಬಲ್ಲರು.

'ವಿಧಾನಸಭೆ ಚುನಾವಣೆಯಲ್ಲಿ ಗೆಲುವಿನ ದಡ ಮುಟ್ಟದೇ ಇರಲು ನೀವೇ ಕಾರಣ; ವಿರೋಧಪಕ್ಷದ ನಾಯಕರಿಲ್ಲದೇ ಸದನ ಎದುರಿಸುವ ಘೋರ ಅವಮಾನ ಸಹಿಸಿ ಹಾಳಾಗಿಹೋಗಿ' ಎಂಬ ಭಾವನೆ ಬಿಜೆಪಿ ವರಿಷ್ಠರಿಗೆ ಇದ್ದಂತಿದೆ. ಏಕೆಂದರೆ, ಸರ್ಕಾರ ರಚನೆಯಾದ ಕೂಡಲೇ ವಿರೋಧಪಕ್ಷದ ನಾಯಕರ ಆಯ್ಕೆ ನಡೆಯುತ್ತದೆ ಎಂಬ ಮಾತು ಪಕ್ಷದೊಳಗೆ ಹರಿದಾಡಿತ್ತು. ಅದಾದ ಬಳಿಕ, ವೀಕ್ಷಕರು ಬಂದು ಅಭಿಪ್ರಾಯ ಪಡೆದು ವಾಪಸ್ ತೆರಳಿ ಹದಿನೈದು ದಿನಗಳೇ ಕಳೆದವು. ಬಿ.ಎಸ್. ಯಡಿಯೂರಪ್ಪ ಅವರನ್ನು ದೆಹಲಿಗೆ ಕರೆಸಿಕೊಂಡ ಗೃಹ ಸಚಿವ ಅಮಿತ್ ಶಾ ಮಾತುಕತೆ ಆಡಿ ಕಳುಹಿಸಿದರು. ಅಭಿಪ್ರಾಯ ಪಡೆಯಲು ಕರೆಸಿದ್ದಲ್ಲ, ಸೋಲಿಗೆ ನೀವೇ ಕಾರಣ ಎಂದು ಧಮಕಿ ಹಾಕಲು ಕರೆಸಿಕೊಂಡಿದ್ದರು ಎಂಬ ವದಂತಿಗಳನ್ನು ಕೇಂದ್ರದ ನಾಯಕರೇ ಹಬ್ಬಿಸುತ್ತಿದ್ದಾರೆ.

ವಿರೋಧಪಕ್ಷದ ನಾಯಕರನ್ನು ಆಯ್ಕೆ ಮಾಡದೇ ಇರಲು ಬಿಜೆಪಿಗೆ ಹಲವು ಕಾರಣಗಳಿವೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ದಾಖಲೆ ಸಮೇತ ಇಕ್ಕಟ್ಟಿಗೆ ಸಿಲುಕಿಸಬಲ್ಲ ಸಾಮರ್ಥ್ಯವನ್ನು ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರಲ್ಲಿ ಮೋದಿ ಕಂಡಂತಿದೆ. ಅದಕ್ಕಾಗಿಯೇ, 'ಪಕ್ಷವನ್ನು ವಿಲೀನಗೊಳಿಸಿ. ನಿಮ್ಮನ್ನೇ ವಿರೋಧಪಕ್ಷದ ನಾಯಕನನ್ನಾಗಿ ಮಾಡುತ್ತೇವೆ' ಎಂಬ ಆಮಿಷವನ್ನು ಅವರಿಗೆ ಒಡ್ಡಿದ್ದಾರೆ. ಅದಕ್ಕೆ ಕುಮಾರಸ್ವಾಮಿ ಸಿದ್ಧರಾಗಿಲ್ಲ. ವಿರೋಧ ಪಕ್ಷದ ನಾಯಕರ ಆಯ್ಕೆ ಹಾಗೂ ಪಕ್ಷದ ಅಧ್ಯಕ್ಷ ಸ್ಥಾನ ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಪ್ರಾದೇಶಿಕ ಮತ್ತು ಜಾತಿಯ ಪ್ರಾತಿನಿಧ್ಯವನ್ನು ಪರಿಗಣಿಸಿ ಈ ಸ್ಥಾನಗಳಿಗೆ ಆಯ್ಕೆ ಮಾಡಬೇಕಾಗಿದೆ. ಏತನ್ಮಧ್ಯೆ, ಯಡಿಯೂರಪ್ಪ ತಮ್ಮದೇ ಪಟ್ಟು ಹಾಕಿ ಕುಳಿತಿದ್ದಾರೆ. ಈ ಎಲ್ಲ ಗೊಂದಲವೂ ಬಿಜೆಪಿ ವರಿಷ್ಠರನ್ನು ಮುಂದಡಿ ಇಡದಂತೆ ಕಟ್ಟಿಹಾಕಿದೆ.

ಒಂದು ವೇಳೆ, ಕುಮಾರಸ್ವಾಮಿ ಅವರನ್ನು ವಿಧಾನಸಭೆಯ ವಿರೋಧಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಿದರೆ, ಬಿಜೆಪಿಯೊಳಗಿನ ನಾಯಕರ ರಾಜಕೀಯ ಭವಿಷ್ಯ ತಲೆಕೆಳಗು ಆಗಲಿದೆ. ಈಗಲೇ ಒಂದು ಹೆಜ್ಜೆ ಆಚೆ ಇಟ್ಟಿರುವ ಲಿಂಗಾಯತರು, ಬಿಜೆಪಿಯಿಂದ ಹೊರ ನಡೆಯುವುದಕ್ಕೆ ಬಾಗಿಲನ್ನು ತೆರೆದುಕೊಟ್ಟಂತೆ ಆಗಬಹುದು. ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಹಿಡಿದ ಹಾದಿಯನ್ನು, ಉಳಿದ ಲಿಂಗಾಯತ ನಾಯಕರೂ ಹಿಡಿದರೆ ಅಚ್ಚರಿಯೇನಿಲ್ಲ. ಕುಮಾರಸ್ವಾಮಿ ಬರುವುದಕ್ಕಿಂತ ಹೊರಗಿದ್ದರೇ ಪಕ್ಷಕ್ಕೆ ಲಾಭ ಜಾಸ್ತಿ ಎಂಬ ವಾದವನ್ನೂ ರಾಜ್ಯದ ನಾಯಕರು ಮುಂದಿಡುತ್ತಿದ್ದಾರೆ. ಆದರೆ, ಇವರ ವಾದ ಹೋಗಲಿ, ರಾಜ್ಯ ನಾಯಕರನ್ನು ಕರೆಸಿ ಮಾತನಾಡುವ ಔದಾರ್ಯವನ್ನೂ ಮೋದಿ–ಅಮಿತ್ ಶಾ ಮಾಡುತ್ತಿಲ್ಲ. ಇದು ಬಿಜೆಪಿ ನಾಯಕರ ಜಂಘಾಬಲವನ್ನೇ ಉಡುಗಿಸಿದೆ.

ಚುರುಮುರಿ

ಯಂತ್ರ–ತಂತ್ರ ಜ್ಞಾನ

• ಸುಮಂಗಲಾ

ಬೆಕ್ಕಣ್ಣ ಬಿಟ್ಟೂಬಿಡದೆ, ಚಂದ್ರಯಾನ-3 ಯಶಸ್ವಿಯಾಗಿ ಉಡಾವಣೆಯಾದ ಸುದ್ದಿಗಳನ್ನು ಓದಿತು, ಯುಟ್ಯೂಬಿನಲ್ಲಿ ರಾಕೆಟ್ ಆಕಾಶಕ್ಕೆ ಚಿಮ್ಮಿದ್ದನ್ನು ನೋಡಿತು.

'ಈ ಸಲದ ಚಂದ್ರಯಾನ ಯಶಸ್ವಿ ಆಗೇ ಆಗತೈತಿ... ಎದಕ್ಕಂದ್ರ ನಾರಿ ನಿರ್ದೇಶಕಿ ಆಗ್ಯಾರೆ' ಎಂದು ಹೆಮ್ಮೆಯಿಂದ ಉಲಿಯಿತು.

'ಅಲ್ಲಲೇ... ಬಸ್ ಫ್ರೀ ಅಂತ್ಹೇಳಿ ಹೆಣ್‌ಮಕ್ಕಳು ಎಲ್ಲಾ ಕೆಲಸ ಬಿಟ್ಟು ಊರೂರು ಸುತ್ತುತಾರ ಅಂತೆಲ್ಲ ಹಂಗಿಸತಿದ್ದೆ. ಈಗರೆ ತಿಳಕೋ, ಹೆಣ್‌ಮಕ್ಕಳು ಎದ್ರಾಗೂ ಕಡಿಮಿ ಇಲ್ಲ' ನಾನು ಕಿಚಾಯಿಸಿದೆ.

'ಆತೇಳು... ಎಲ್ಲ ನಿಮ್ಮಿಂದಲೇ' ಎಂದು ಹಂಗಿಸಿದ ಬೆಕ್ಕಣ್ಣ, 'ನೋಡು, ನಮ್ಮ ಇಸ್ರೊ ವಿಜ್ಞಾನಿಗಳು ಉಡಾವಣೆ ಛಲೋತ್ನಾಗೆ ಆಗಲಿ ಅಂತ ತಿರುಪತಿಗೆ ಹೋಗಿ, ಸಣ್ಣ ಪ್ರತಿಕೃತಿ ಅರ್ಪಣೆ ಮಾಡಿ, ಬೇಡಿಕೊಂಡಿದ್ರಂತ' ಎಂದಿತು.

'ಹ್ಞೂಂ ಮತ್ತ, ಚಂದ್ರಲೋಕ ಭಾಳ ದೂರೇನಿಲ್ಲ, ನಮ್ಮ ಸ್ವರ್ಗದಿಂದ ಸ್ವಲ್ಪ ಜಿಗಿದ್ರ ಸಿಕ್ಕೇಬಿಡತೈತಿ. ನೀವು ಲ್ಯಾಂಡರ್ರು, ರೋವರ್ರು ಅಲ್ಲಿ ದಕ್ಷಿಣ ಧ್ರುವದಾಗೆ ಇಳಿಸತೀರಿ ಅಂತ ನಾ ನಮ್ಮ ಚಂದ್ರಂಗೆ ಒಂದ್ ಫೋನ್ ಹಚ್ಚಿ ಹೇಳತೀನಿ, ಚಿಂತಿ ಬಿಡ್ರಿ ಅಂತ ತಿಮ್ಮಪ್ಪ ಹೇಳ್ಯಾನಂತ' ಎಂದು ನಾನು ನಕ್ಕೆ.

'ಅದ್ರಾಗೆ ತಪ್ಪೇನೈತಿ? ನೀ ಎಲ್ಲಾದ್ರಾಗೆ ಏನರಾ ಹುಳುಕು ತೆಗಿತಿ. ವಿಜ್ಞಾನಿಗಳಿಗೆ ದೇವರ ಮ್ಯಾಲೆ ನಂಬಿಕೆ ಇರಬಾರದೇನು?' ಬೆಕ್ಕಣ್ಣ ಮರುವಾದಿಸಿತು.

'ಆತೇಳು... ಎಲ್ಲಾ ಸರಿ, ಆದ್ರ ಬಾಹ್ಯಾಕಾಶದಲ್ಲಿ ಲಕ್ಷಗಟ್ಟಲೆ ಮೈಲಿ ದೂರದ ಚಂದ್ರ, ಮಂಗಳನ ಕಡೆಗೆ ನೌಕೆ ಕಳಿಸೂ ತಂತ್ರಜ್ಞಾನ ಅಭಿವೃದ್ಧಿ ಮಾಡತೀವಿ. ಆದರ ಒಂದು ಹತ್ತು ಅಡಿ ಕೆಳಗಿರೋ ಮಲದ ಗುಂಡಿ, ಸೆಪ್ಟಿಕ್ ಟ್ಯಾಂಕುಗಳನ್ನು ಯಂತ್ರಗಳಿಂದ ಸ್ವಚ್ಛ ಮಾಡೂ ತಂತ್ರಜ್ಞಾನ ಅಭಿವೃದ್ಧಿ ಮಾಡಾಕೆ ಎದಕ್ಕ ಆಗವಲ್ದು? ಪ್ರತಿವರ್ಷ ಎಷ್ಟ್ ಮಂದಿ ಸ್ವಚ್ಛ ಮಾಡಾಕೆ ಇಳಿದು ಸಾಯತಾರೆ ಗೊತ್ತೈತಿಲ್ಲೋ?'

'ಅಂತಾ ಗುಂಡಿವಳಗ ಇಳಿಯೂ ಮಂದಿನೇ ಬ್ಯಾರೆ ಇರತಾರ. ಅದಕ್ಕೆಲ್ಲ ಯಂತ್ರ, ತಂತ್ರಜ್ಞಾನ ಎದಕ್ಕ ಬೇಕು' ಬೆಕ್ಕಣ್ಣ ಮೂತಿ ಹುಳ್ಳಗೆ ಮಾಡಿ ಹೇಳಿತು.

ಸಂಗತ

ಮಾತೃಪೂರ್ಣ: ಆಗದಿರಲಿ ಅಪೂರ್ಣ!

ಅತ್ಯುತ್ತಮವಾದ ಮಾತೃಪೂರ್ಣ ಯೋಜನೆ ಹಿನ್ನಡೆ ಕಾಣುತ್ತಿರುವುದೇಕೆ?

• ಡಾ. ಕೆ.ಎಸ್.ಚೈತ್ರಾ

ರಾಜ್ಯದಲ್ಲಿ ಮಾತೃಪೂರ್ಣ ಯೋಜನೆಗೆ ಹಿನ್ನಡೆಯಾಗಿದೆ. ಶೇಕಡ 70ರಷ್ಟು ಗರ್ಭಿಣಿಯರು ಮತ್ತು ಬಾಣಂತಿಯರು ಈ ಬಗ್ಗೆ ಆಸಕ್ತಿ ತೋರುವುದಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 70,000 ಅಂಗನವಾಡಿ ಕೇಂದ್ರಗಳಿವೆ. ಅವುಗಳಲ್ಲಿ ಬಹಳಷ್ಟು ಕೇಂದ್ರಗಳಿಗೆ ದಿನಕ್ಕೆ ನಾಲ್ಕೈದು ಜನ ಬಂದರೆ ಹೆಚ್ಚು ಎಂದು ವರದಿಯಾಗಿದೆ. ಇದು ಕಳವಳಕಾರಿ.

ಗರ್ಭಿಣಿ ಮತ್ತು ಬಾಣಂತಿ, ನವಜಾತ ಶಿಶುಗಳ ಅಪೌಷ್ಟಿಕತೆ ನಿವಾರಣೆ ದೃಷ್ಟಿಯಿಂದ ಮಧ್ಯಾಹ್ನ ಬಿಸಿಯೂಟವನ್ನು ವಿತರಿಸುವ ಸರ್ಕಾರದ ಮಹತ್ವದ ಕ್ರಮ, ಮಾತೃಪೂರ್ಣ ಯೋಜನೆ. ಇದರಲ್ಲಿ ಸತ್ವಯುಕ್ತ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರದಲ್ಲಿಯೇ ತಯಾರಿಸಿ ಗರ್ಭಿಣಿ, ಬಾಣಂತಿಯರಿಗೆ ನೀಡಲಾಗುತ್ತದೆ. ಅನ್ನ, ತರಕಾರಿ ಸಾಂಬಾರ್, ಮೊಟ್ಟೆ, ಮೊಟ್ಟೆ ತಿನ್ನದವರಿಗೆ ಮೊಳಕೆ ಬರಿಸಿದ ಕಾಳು, ಹಾಲು ಮತ್ತು ಚಿಕ್ಕಿಯನ್ನು ದಿನವೊಂದಕ್ಕೆ 21 ರೂಪಾಯಿ ಘಟಕ ವೆಚ್ಚದಲ್ಲಿ ತಯಾರಿಸಲಾಗುತ್ತದೆ. 2017ರಲ್ಲಿ ಶಿಶು ಅಭಿವೃದ್ಧಿ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರ ಈ ಕಾರ್ಯಕ್ರಮವನ್ನು ಜಾರಿಗೊಳಿಸಿತು. ಮಹಿಳೆ ಗರ್ಭಿಣಿಯಾದ ದಿನದಿಂದ ಹೆರಿಗೆಯಾದ ಆರು ತಿಂಗಳ ಕಾಲ ಈ ರೀತಿ ಆಹಾರವನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಅವಧಿಪೂರ್ವ ಪ್ರಸವ, ಹುಟ್ಟುವ ಮಕ್ಕಳ ತೂಕದಲ್ಲಿ ಇಳಿಕೆ, ಕುಂಠಿತ ಬೆಳವಣಿಗೆ, ರಕ್ತಹೀನತೆ, ಅತಿಯಾದ ರಕ್ತಸ್ರಾವ, ಶಿಶು ಮತ್ತು ತಾಯಿಯ ಮರಣ ಇವೆಲ್ಲಕ್ಕೂ ಅಪೌಷ್ಟಿಕತೆ ಕಾರಣವಾಗಬಹುದು. ಉತ್ತಮ ಆಹಾರದ ಮೂಲಕ ಇವೆಲ್ಲವನ್ನೂ ತಡೆಯುವುದು ಯೋಜನೆಯ ಮುಖ್ಯ ಗುರಿ. ಹಾಗೆಯೇ ಕಬ್ಬಿಣ ಮತ್ತು ಫೋಲಿಕ್ ಆಮ್ಲ, ಕ್ಯಾಲ್ಸಿಯಂ, ಜಂತುಹುಳು ನಿವಾರಣೆ ಮಾತ್ರೆಗಳ ಸೇವನೆ ಕುರಿತು ಮಾಹಿತಿ, ಗರ್ಭಿಣಿಯರ ತೂಕದ ನಿರ್ವಹಣೆ ಮತ್ತು ಕಾಲಕಾಲಕ್ಕೆ ಗರ್ಭಿಣಿ, ತಾಯಿಯ ಆರೋಗ್ಯ ತಪಾಸಣೆಯೂ ಇದರ ವ್ಯಾಪ್ತಿಗೆ ಬರುತ್ತದೆ. ಹೀಗಿರುವಾಗ, ಈ ಯೋಜನೆಗೆ ಹಿನ್ನಡೆ ಎಂದರೆ ನಿಜಕ್ಕೂ ಬೇಸರದ ಸಂಗತಿಯೇ ಹೌದು. ಆದರೆ, ಇದಕ್ಕಿರುವ ಕಾರಣಗಳನ್ನು ಗಮನಿಸುವುದು ಮುಖ್ಯ.

ಹೆಚ್ಚಿನ ಕಡೆ ಗರ್ಭಿಣಿ, ಬಾಣಂತಿಯರ ಆರೋಗ್ಯ ಸೂಕ್ಷ್ಮ ಎನ್ನುವ ದೃಷ್ಟಿಯಿಂದ ಹೊರಗೆ ಕಳಿಸಲು ಒಪ್ಪುವುದೇ ಇಲ್ಲ. ಕೋವಿಡ್ ನಂತರವಂತೂ ಸಾಂಕ್ರಾಮಿಕಗಳ ಭೀತಿ ಜನರಲ್ಲಿ ಬಲವಾಗಿ ಬೇರೂರಿದೆ. ಊಟ ಹೋದರೆ ಹೋಯಿತು, ತಾಯಿ– ಮಗುವಿನ ಆರೋಗ್ಯ ಮುಖ್ಯ ಎನ್ನುವ ಭಾವನೆ ಬಿಸಿಯೂಟ ಪಡೆಯಲು ಹಿಂಜರಿಯುವಂತೆ ಮಾಡುತ್ತದೆ.

2017ಕ್ಕೆ ಮೊದಲು ಪೌಷ್ಟಿಕಾಂಶಯುಕ್ತ ಆಹಾರ ಪದಾರ್ಥಗಳನ್ನು ಮನೆಗೆ ನೀಡಲಾಗುತ್ತಿತ್ತು. ನಂತರ ಅಂಗನವಾಡಿಗೆ ಬಂದು ಊಟ ಮಾಡುವ ಪದ್ಧತಿ ಜಾರಿಗೆ ಬಂತು. ಕೋವಿಡ್ ಸಂದರ್ಭದಲ್ಲಿ ಇದು ಸಾಧ್ಯವಾಗದಿದ್ದಾಗ ಮತ್ತೆ ಮನೆಗೆ ಆಹಾರದ ಸಾಮಗ್ರಿ ಕೊಡಲಾಯಿತು. ಈಗ ಅಂಗನವಾಡಿಯಲ್ಲೇ ಬಿಸಿಯೂಟವನ್ನು ವಿತರಿಸಲಾಗುತ್ತಿದೆ. ಗರ್ಭಿಣಿಯರಿಗೆ ಭಾರ ಹೊತ್ತು ನಡೆಯಲು ಕಷ್ಟವಾದರೆ ಬಾಣಂತಿಯರಿಗೆ ಸುಧಾರಿಸಿಕೊಳ್ಳಲೇ ಮೂರು ತಿಂಗಳು ಬೇಕು. ಅದರಲ್ಲಿಯೂ ಎಳೆ ಮಗುವನ್ನು ಹೊತ್ತು ಅಂಗನವಾಡಿ ಕೇಂದ್ರಕ್ಕೆ ಎರಡು– ಮೂರು ಕಿಲೊಮೀಟರ್ ನಡೆಯುವುದೇನೂ ಸುಲಭವಲ್ಲ. ಬಿಸಿಲಲ್ಲಿ ನಡೆದು ಅಷ್ಟು ದೂರ ಬರುವುದು ಕಷ್ಟವಾದರೆ, ಮಳೆಗಾಲದಲ್ಲಿ ಬರುವುದು ಮತ್ತೂ ಕಠಿಣ. ಈ ಎಲ್ಲಾ ಗೊಂದಲಗಳ ನಡುವೆ, ನೀಡುವ ಆಹಾರದ ಗುಣಮಟ್ಟವೂ ಕುಸಿದಿದೆ. ತರಕಾರಿ ಖರೀದಿಗೆ ಮೂರು ವರ್ಷಗಳ ಹಿಂದೆ ನಿಗದಿಪಡಿಸಿದ ಮೊತ್ತ ಈಗಲೂ ಜಾರಿಯಲ್ಲಿದೆ. ಹಾಗಾಗಿ ನೀರು ಸಾಂಬಾರ್ ಮಾಡುವುದು ಅನಿವಾರ್ಯ.

ಹಿಂದೆ ಅಂಗನವಾಡಿ ಕಾರ್ಯಕರ್ತೆಯರು ಮೊಟ್ಟೆಯನ್ನು ಖರೀದಿಸುವ ಪದ್ಧತಿ ಜಾರಿಯಲ್ಲಿತ್ತು. ಈಗ ಏಜೆನ್ಸಿ ಮೂಲಕ ಮೊಟ್ಟೆ ಸರಬರಾಜನ್ನು ಮಾಡಲಾಗುತ್ತಿದೆ. ಅದರಲ್ಲಿ ಕೆಲವೊಮ್ಮೆ ಕೊಳೆತ ಮೊಟ್ಟೆಗಳು ಬರುತ್ತಿವೆ. ರುಚಿ ಇಲ್ಲದ, ಪೌಷ್ಟಿಕತೆ ಸಿಗದ ಇಂತಹ ಒಂದು ಹೊತ್ತಿನ ಆಹಾರಕ್ಕಾಗಿ ದೂರದಿಂದ ಬಂದು, ಕಾದು ಅದನ್ನು ಸೇವಿಸಲು ಮಹಿಳೆಯರು ನಿರಾಕರಿಸುವುದು ಸಹಜವೇ ಆಗಿದೆ!

ಇದಕ್ಕೆಲ್ಲ ಪರಿಹಾರವಾಗಿ ಬಹುಜನರ ಕೋರಿಕೆ, 'ಮನೆಗಳಿಗೆ ನೇರವಾಗಿ ಪಡಿತರ ಕಿಟ್ ವಿತರಿಸಿ' ಎಂಬುದಾಗಿದೆ. ಆದರೆ ಅದರಲ್ಲಿಯೂ ಸಮಸ್ಯೆಗಳಿವೆ. ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರ ಮೇಲಿನ ಜವಾಬ್ದಾರಿ ಅತ್ಯಂತ ಹೆಚ್ಚು. ಸಿಗುತ್ತಿರುವ ಗೌರವಧನವೂ ಕಡಿಮೆ. ಈ ಕಿಟ್ ಮನೆಮನೆಗೆ ವಿತರಿಸುವ ಜವಾಬ್ದಾರಿಯೂ ಹೆಗಲಿಗೇರಿದರೆ ಮತ್ತಷ್ಟು ಹೊರೆ ಖಂಡಿತ. ಒಂದೊಮ್ಮೆ ಪಡಿತರ ಕಿಟ್ ಮನೆಗೊಯ್ದು ನೀಡಿದರೂ ಅದು ಫಲಾನುಭವಿಯ ಕೈಗೆ ಸಿಗುತ್ತದೆ ಎಂಬ ಖಾತರಿಯಿಲ್ಲ. ಮನೆಯವರೆಲ್ಲರೂ ಅದನ್ನು ಹಂಚಿ ತಿನ್ನಬಹುದು. ಕೆಲವೊಮ್ಮೆ ಹೊರಗೆ ದುಡಿಯುವವರಿಗೆ ಮಾತ್ರ ಅದು ಮೀಸಲಾಗಬಹುದು! ಅಲ್ಲಿಗೆ ಮಾತೃಪೂರ್ಣ ಯೋಜನೆಯ ಮೂಲ ಉದ್ದೇಶವೇ ವಿಫಲವಾಗುತ್ತದೆ.

ಮಾತೃಪೂರ್ಣ ಯೋಜನೆ ಅತ್ಯುತ್ತಮವಾದದ್ದೇ! ಆದರೆ, ಅದು ಯಶಸ್ವಿಯಾಗಲು ಅಂಗನವಾಡಿಯಲ್ಲಿ ಮೂಲಸೌಕರ್ಯ ಸುಧಾರಿಸಬೇಕು. ಕಾರ್ಯಕರ್ತೆಯರ ಗೌರವಧನದಲ್ಲಿ ಹೆಚ್ಚಳವಾಗಬೇಕು. ಏರಿದ ಬೆಲೆಗಳನ್ನು ಗಮನದಲ್ಲಿಟ್ಟು ಸರ್ಕಾರವು ತರಕಾರಿ, ಎಣ್ಣೆ, ಮೊಟ್ಟೆ ದರವನ್ನು ಪರಿಷ್ಕರಿಸುವುದರ ಜೊತೆಗೆ ಗುಣಮಟ್ಟಕ್ಕೂ ಆದ್ಯತೆ ನೀಡಬೇಕು. ಸರ್ಕಾರದ ಜೊತೆ ಸಮಾಜದ ಮನೋಭಾವವೂ ಬದಲಾಗಿ, ಗರ್ಭಿಣಿ, ಬಾಣಂತಿಯರ ದೈಹಿಕ, ಮಾನಸಿಕ ಆರೋಗ್ಯಕ್ಕೆ ಅತ್ಯಗತ್ಯವಾದ ಪೌಷ್ಟಿಕ ಆಹಾರವನ್ನು ಸಾಧ್ಯವಾಗಿಸುವುದು ನಮ್ಮ ಜವಾಬ್ದಾರಿ ಎಂಬ ಎಚ್ಚರ ಮೂಡಬೇಕು.

ವಾಚಕರ ವಾಣಿ

ಕಲಾಪ ನಡೆಯುವುದು ಕಾದಾಟಕ್ಕಲ್ಲ

ರಾಜ್ಯ ವಿಧಾನಮಂಡಲ ಅಧಿವೇಶನದಲ್ಲಿ ರಚನಾತ್ಮಕ ಚರ್ಚೆಗಿಂತ ವೈಯಕ್ತಿಕ ಹಿತಾಸಕ್ತಿಯ ಆರೋಪ–ಪ್ರತ್ಯಾರೋಪಗಳೇ ಹೆಚ್ಚು ಸದ್ದು ಮಾಡುತ್ತಿವೆ. ಈ ಬೆಳವಣಿಗೆ ಸಂಸದೀಯ ಮೌಲ್ಯಗಳು ಕುಸಿಯುತ್ತಿರುವುದರ ಸಂಕೇತ. ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳಲು, ಜನೋಪಯೋಗಿ ಕಾನೂನುಗಳನ್ನು ರೂಪಿಸಲು ಕಲಾಪ ಸದ್ಬಳಕೆಯಾಗಬೇಕು. ಅದನ್ನು ಬಿಟ್ಟು ಮೂರೂ ಪ್ರಮುಖ ಪಕ್ಷಗಳು ಪರಸ್ಪರ ಕೆಸರೆರಚಾಟದ ಮೂಲಕ ಸದನದ ಗೌರವಕ್ಕೆ ಚ್ಯುತಿ ತರುತ್ತಿರುವುದು ವಿಷಾದದ ಸಂಗತಿ. ಪರಸ್ಪರ ಆರೋಪ, ಪ್ರತ್ಯಾರೋಪ ಮಾಡಲು ಸದನದ ಹೊರಗೆ ಬೇರೆ ಬೇರೆ ಮಾರ್ಗಗಳು, ವೇದಿಕೆಗಳಿವೆ. ಇನ್ನಾದರೂ ನಮ್ಮ ಜನಪ್ರತಿನಿಧಿಗಳು ಹೊಣೆ ಅರಿತು ಕಾರ್ಯನಿರ್ವಹಿಸಲಿ.

ಪ್ರಸಾದ್ ಜಿ.ಎಂ., ಮೈಸೂರು

ವರ್ಗಾವಣೆ ಕೌನ್ಸೆಲಿಂಗ್ ಎಂಬ ಮಾಯಾಜಿಂಕೆ!

ಪಿಡಿಒಗಳ ವರ್ಗಾವಣೆಯನ್ನು ಮುಂದಿನ ವರ್ಷದಿಂದ ಕೌನ್ಸೆಲಿಂಗ್ ಮೂಲಕ ಮಾಡಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ (ಪ್ರ.ವಾ., ಜುಲೈ 14). ಇದೊಂದು ಪಾರದರ್ಶಕ ಕ್ರಮವಾಗಿದ್ದು, ಯಾರಿಗೂ ಅನ್ಯಾಯವಾಗುವುದಿಲ್ಲ ಎನ್ನುವಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ವರ್ಗಾವಣೆಯಲ್ಲಿ ಪತಿ- ಪತ್ನಿ ಪ್ರಕರಣ, ಅಂಗವಿಕಲರ ಪ್ರಕರಣ, ವೃದ್ಧಕೀಯ ಪ್ರಕರಣಗಳಿಗೆ ಆದ್ಯತೆ ನೀಡುವ ನಿಯಮ ಇರುವುದರಿಂದ, ಒಂದೇ ಸ್ಥಳದಲ್ಲಿ ಹಲವು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದರೂ ಬಯಸಿದ ಸ್ಥಳ ದೊರಕುವುದೇ ಇಲ್ಲ.

ವರ್ಗಾವಣೆ ಕೌನ್ಸೆಲಿಂಗ್ ನಿಯಮ ಎನ್ನುವುದು ಬರೀ ಕಾಟಾಚಾರಕ್ಕೆ ಇರುವಂತೆ ಆಗಬಾರದು. ಉದಾಹರಣೆಗೆ, ಆರೋಗ್ಯ ಇಲಾಖೆಯಲ್ಲಿ ಈಗಾಗಲೇ ಕೌನ್ಸೆಲಿಂಗ್ ವರ್ಗಾವಣೆ ನಿಯಮ ಇದೆ. ಆರಂಭದ ಒಂದೆರಡು ವರ್ಷ ಮಾತ್ರ ಪಾರದರ್ಶಕವಾಗಿ ವರ್ಗಾವಣೆ ಮಾಡಲಾಯಿತು. ಇತ್ತೀಚಿನ ವರ್ಷಗಳಲ್ಲಿ ಕೌನ್ಸೆಲಿಂಗ್ ಎನ್ನುವುದು ಬರೀ ಆದೇಶದಲ್ಲಿ ಎನ್ನುವಂತೆ ಆಗಿದೆ. ಕೌನ್ಸೆಲಿಂಗ್‌ನಲ್ಲಿ ಶಾಸಕ, ಸಚಿವರ ಶಿಫಾರಸಿಗೆ ಕಿಮ್ಮತ್ತು ಸಿಗುವುದಿಲ್ಲ. ಆದಕಾರಣ ಆಯಾ ಇಲಾಖೆಯ ಸಚಿವರ ಮೂಲಕವೇ ವರ್ಗಾವಣೆ ಕಡತಗಳು ವಿಲೇವಾರಿ ಆಗಬೇಕೆಂದು ವರ್ಗಾವಣೆ ನಿಯಮಗಳಲ್ಲಿ ಸೇರಿಸಲಾಗಿದೆ. ಇದರಿಂದಾಗಿ ಆರೋಗ್ಯ ಇಲಾಖೆಯಲ್ಲಿ ಮೂರ್ನಾಲ್ಕು ವರ್ಷಗಳಿಂದ ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆಯು ಸಚಿವರ ಕಚೇರಿಯಲ್ಲೇ ನಡೆದಿದೆಯಂತೆ. ಕೌನ್ಸೆಲಿಂಗ್ ಎನ್ನುವುದು ಹೆಸರಿಗಷ್ಟೇ ಇದೆ. ನ್ಯಾಯವಾಗಿ ವರ್ಗಾವಣೆ ಬಯಸುವವರಿಗೆ ವರ್ಗಾವಣೆ ಮರೀಚಿಕೆಯಾಗಿದೆ. ಆದ್ದರಿಂದ ಈ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಿ ಕೌನ್ಸೆಲಿಂಗ್ ನಿಯಮ ರೂಪಿಸಲಿ. ಅಂದಹಾಗೆ ವರ್ಗಾವಣೆಗಾಗಿ ನೌಕರರಿಗೂ ಹಣ ನೀಡುವ, ಪ್ರಭಾವ ಬೀರುವ ಸಾಮರ್ಥ್ಯ ಇರುವಾಗ ಇಂತಹ ವ್ಯವಸ್ಥೆ ನಿಜಕ್ಕೂ ಸವಾಲೇ ಸರಿ.

ಮುಳ್ಳೂರು ಪ್ರಕಾಶ್, ಮೈಸೂರು

ಮೂರಾಬಟ್ಟೆಯಾಗಬೇಕೆ ಕಾರ್ಯಕಾರಣ ವಾದ?

ಚಂದ್ರಯಾನ– 3ರ ಯಶಸ್ಸಿಗೆ ಇಸ್ರೊ ವಿಜ್ಞಾನಿಗಳು ತಿರುಪತಿಗೆ ತೆರಳಿ ಪ್ರಾರ್ಥಿಸಿದ್ದು ಜನಮಾನಸವನ್ನು ತಬ್ಬಿಬ್ಬಾಗಿಸಿದೆ. 'ದೇವರು' ಎಂಬ ಪರಿಕಲ್ಪನೆ ಅವರವರ ಭಾವನೆಗೆ ಬಿಟ್ಟಿದ್ದು. ವೈಯಕ್ತಿಕ ನಂಬಿಕೆಯನ್ನು ಯಾರೂ ಅಲ್ಲಗಳೆಯರು. ಆದರೆ, ಹೀಗೆ ಕಾರ್ಯಕಾರಣ ವಾದವನ್ನು ಎತ್ತಿಹಿಡಿಯಬೇಕಾದ ವಿಜ್ಞಾನಿಗಳು ಚಂದ್ರಯಾನಕ್ಕೆ ಸಂಬಂಧಿಸಿದ ವಿನ್ಯಾಸಗಳ ಸಮೇತ ಸಾರ್ವತ್ರಿಕವಾಗಿ ಗುಡಿಗೆ ತೆರಳಿ ಕೋರಿಕೆ ಸಲ್ಲಿಸಿದ್ದು ವೈಚಾರಿಕ ಎನ್ನಿಸದು.

ಕಠೋಪನಿಷತ್ತಿನಲ್ಲಿ ಬರುವ ಈ ನುಡಿ ನಮ್ಮ ಕಣ್ಣು ತೆರೆಸುವಂಥದ್ದು: 'ವಿಜ್ಞಾನ ಸಾರಥಿರ್ಯಸ್ತು ಮನಃ ಪ್ರಗ್ರಹವಾನ್ನರಃ/ಸೋಧ್ವನಃಪಾರಮಾಪ್ನೋತಿತ್ವದಿಷ್ಣೋಃಪರಮಂಪದಮ್'.ಯಾರುವಿಜ್ಞಾನವೆಂಬಸಾರಥಿಯುಳ್ಳವನೋ ಮನಸ್ಸೆಂಬ ಕಡಿವಾಣ ಹಿಡಿಯುವನೋ ಅವನು ಪೂರ್ಣತೆ ಮುಟ್ಟುವನು ಎನ್ನುವುದು ಸಾರಾಂಶ.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಆರ್ಥಿಕ ಶಿಸ್ತು, ವಿವೇಚನೆ ಇರಬೇಡವೇ?

ರಾಜ್ಯದಾದ್ಯಂತ ವಿವಿಧ ಇಲಾಖೆಗಳ ಮೂಲಕ ನಡೆಸಿರುವ ಕಾಮಗಾರಿಗಳ ₹ 25 ಸಾವಿರ ಕೋಟಿ ಬಾಕಿ ಇದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೀಗೆಯೇ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಸಾಹಿತ್ಯ ಸಮ್ಮೇಳನಕ್ಕೆ ₹ 5 ಕೋಟಿ ಹೆಚ್ಚುವರಿ ಅನುದಾನ ಬಾಕಿ ಇದೆ ಎಂದು ವರದಿಯಾಗಿದೆ (ಪ್ರ.ವಾ., ಜುಲೈ 15). ಇವೆಲ್ಲವೂ ಹಿಂದಿನ ಸರ್ಕಾರದ ಬಾಕಿಗಳು ಎಂಬುದು ಇಲ್ಲಿ ಗಮನಾರ್ಹ. ಹಿಂದಿನ ಸರ್ಕಾರದ, ಬೆಳಕಿಗೆ ಬಾರದ ಇಂತಹ ಇನ್ನೂ ಎಷ್ಟು ಬಾಕಿಗಳಿವೆಯೋ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ.

ಒಂದು ಸರ್ಕಾರ ಹೀಗೆ ಬಾಕಿ ಉಳಿಸಿ, ಮುಂಬರುವ ಸರ್ಕಾರಗಳ ಆರ್ಥಿಕ ಯೋಜನೆಗಳಿಗೆ ತೊಡಕಾಗುವುದು ಎಷ್ಟು ಸರಿ? ಸರ್ಕಾರ ನಡೆಸುವ ಪಕ್ಷ ಯಾವುದೇ ಇರಲಿ, ಸರ್ಕಾರದ ಹಣವನ್ನು ಖರ್ಚು ಮಾಡುವಾಗ ಆರ್ಥಿಕ ಶಿಸ್ತು ಮತ್ತು ವಿವೇಚನೆ ಇರಬೇಡವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅದು ಕಣ್ಣೀರಲ್ಲ, ನೊಬೆಲ್ ಪಾರಿತೋಷಕ!

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ನಾಗಯ್ಯ ಮಠ ಅವರ ವರ್ಗಾವಣೆಯಿಂದ ದುಃಖಿತರಾಗಿ ಅತ್ತು ಸುಸ್ತಾದ ವಿದ್ಯಾರ್ಥಿನಿಯರು ಆಸ್ಪತ್ರೆಗೆ ದಾಖಲಾದ ಸುದ್ದಿ (ಪ್ರ.ವಾ., ಜುಲೈ 15) ಓದಿ ಬೆರಗಾಯಿತು. ವಿದ್ಯಾರ್ಥಿಗಳು ಈ ಪರಿಯಾಗಿ ತಮ್ಮ ಗುರುಗಳ ಬಗ್ಗೆ ಭಾವನೆಯನ್ನು ವ್ಯಕ್ತಪಡಿಸಿರುವುದು ನಿಜಕ್ಕೂ ಇಡೀ ಶಿಕ್ಷಕ ವೃಂದ ಹೆಮ್ಮೆಪಡುವ ಸಂಗತಿಯೇ ಸರಿ. ಸರ್ಕಾರಿ ಶಾಲೆಗಳು ಎಂದರೆ ಮೂಗು ಮುರಿಯುವ ಈ ದಿನಗಳಲ್ಲಿ, ಅದೂ ಒಬ್ಬ ದೈಹಿಕ ಶಿಕ್ಷಣ ಶಿಕ್ಷಕ ಈ ರೀತಿ ವಿದ್ಯಾರ್ಥಿಗಳ ಮನದಾಳದಲ್ಲಿ ಬೇರೂರಿರುವುದು ಬೆರಗುಗೊಳಿಸುವ ವಿಚಾರ. ಇಲ್ಲಿ ನಾಗಯ್ಯ ಮಠ ಅವರಿಗೆ ವಿದ್ಯಾರ್ಥಿಗಳು ನೀಡಿದ್ದು ಕಣ್ಣೀರಲ್ಲ, 'ನೊಬೆಲ್ ಪಾರಿತೋಷಕ' ಎಂದು ಭಾವಿಸಬೇಕಿದೆ.

ನಿವೃತ್ತ ಶಿಕ್ಷಕನಾದ ನನಗೆ ಈ ಪ್ರಸಂಗ, ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮೈಸೂರು ಮಹಾರಾಜ ಕಾಲೇಜಿನಿಂದ ವರ್ಗವಾಗಿ ಹೋಗುವಾಗ, ಅವರನ್ನು ಸಾರೋಟಿನಲ್ಲಿ ಕೂರಿಸಿದ ವಿದ್ಯಾರ್ಥಿಗಳು, ಕುದುರೆಗಳ ಬದಲಾಗಿ ತಾವೇ ರೈಲು ನಿಲ್ದಾಣದವರೆಗೆ ಹರ್ಷೋದ್ಗಾರದೊಂದಿಗೆ ಎಳೆದುಕೊಂಡು ಹೋಗಿ ಬೀಳ್ಕೊಟ್ಟರು ಎಂಬ ಸನ್ನಿವೇಶವನ್ನು ನೆನಪಿಗೆ ತರುತ್ತಿದೆ. 'ನೌಕರರು ಪಡೆವ ಸಂಬಳ ಹೊಟ್ಟೆಪಾಡಿಗಾಗಿ, ಆದರೆ ಬದುಕಲು, ಅಂದ್ರೆ ನಾಲ್ಕು ದಿನ ಜನಮಾನಸದಲ್ಲಿರಲು ಸಾರ್ಥಕದ ಕೆಲಸ ಮಾಡಬೇಕು' ಎಂದು ಲಂಕೇಶ್ ಮೇಷ್ಟ್ರು ಹೇಳಿದ್ದರು. ಆ ಕೆಲಸವನ್ನು ನಾಗಯ್ಯ ಮಾಡಿದ್ದಾರೆ. ಇಂಥ ಶಿಕ್ಷಕರ ಸಂಖ್ಯೆ ಹೆಚ್ಚಲಿ.

ಪ್ರೊ. ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಿಎಸ್‌ಟಿ: ಯುಟಿಲಿಟಿ ವಾಹನಗಳ ಮೇಲೆ ತೆರಿಗೆ ಏರಿಕೆ

ದೇಶದಲ್ಲಿ ಮಾರಾಟವಾಗುವ ಎಲ್ಲಾ ಸ್ವರೂಪದ ವಾಹನಗಳಲ್ಲಿ ಎಸ್‌ಯುವಿಗಳಿಗೆ (ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್) ಗರಿಷ್ಠ ಪ್ರಮಾಣದ ತೆರಿಗೆ ಅನ್ವಯವಾಗುತ್ತದೆ. ಯುಟಿಲಿಟಿ ವಾಹನಗಳಿಗೆ ಶೇ 48ರಷ್ಟು ಅನ್ವಯವಾಗುತ್ತಿದೆ. ಎಸ್‌ಯುವಿ ವ್ಯಾಖ್ಯಾನದಲ್ಲಿನ ಗೊಂದಲದಿಂದಾಗಿ ಕೆಲವು ನೈಜ ಎಸ್‌ಯುವಿಗಳಿಗೆ ಕಡಿಮೆ ದರದ ತೆರಿಗೆ ಅನ್ವಯವಾಗುತ್ತಿದೆ. ಇದನ್ನು ಸರಿಪಡಿಸಬೇಕು ಎಂಬ ಬೇಡಿಕೆಯೂ ಜಿಎಸ್‌ಟಿ ಮಂಡಳಿ ಎದುರು ಇತ್ತು. ಆದರೆ, ಈಗ ಎಸ್‌ಯುವಿ ಎಂಬ ವ್ಯಾಖ್ಯಾನವನ್ನೇ ತೆಗೆದುಹಾಕಿರುವ ಜಿಎಸ್‌ಟಿ ಮಂಡಳಿಯು, ಯುಟಿಲಿಟಿ ವಾಹನಗಳನ್ನೂ ಗರಿಷ್ಠ ತೆರಿಗೆ ದರದ ವ್ಯಾಪ್ತಿಗೆ ತಂದಿದೆ. ಈ ಮೂಲಕ ಜಿಎಸ್‌ಟಿ ಮಂಡಳಿಯು ಯುಟಿಲಿಟಿ ವಾಹನಗಳ ಮೇಲಿನ ತೆರಿಗೆ ಹೊರೆಯನ್ನು ಹೆಚ್ಚಿಸಿದೆ. ಈ ತೆರಿಗೆ ಹೆಚ್ಚಳವನ್ನು ಕೇಂದ್ರ ಮತ್ತು ಎಲ್ಲಾ ರಾಜ್ಯಗಳೂ ಒಪ್ಪಿಕೊಂಡಿವೆ. ಅಂತಿಮವಾಗಿ ಯುಟಿಲಿಟಿ ವಾಹನಗಳ ಖರೀದಿಗಾಗಿ ಜನರು ಈ ಹಿಂದಿಗಿಂತಲೂ ಹೆಚ್ಚಿನ ಹಣ ನೀಡಬೇಕಿದೆ.

• ಜಯಸಿಂಹ ಆರ್.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ ದೇಶದಲ್ಲಿ ಮಾರಾಟವಾಗುವ ಎಲ್ಲಾ ಕಾರುಗಳಿಗೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಕೆಲವು ವಾಹನಗಳ ಮೇಲೆ ಜಿಎಸ್‌ಟಿ ಜತೆಗೆ, ಭಿನ್ನ ದರದ ಜಿಎಸ್‌ಟಿ ಪರಿಹಾರ ಸೆಸ್ ಅನ್ನೂ ವಿಧಿಸಲಾಗುತ್ತಿದೆ. ಹೀಗೆ ಅತಿಹೆಚ್ಚು ತೆರಿಗೆ ಬೀಳುವುದು ಎಸ್‌ಯುವಿಗಳ ಮೇಲೆ. ಎಸ್‌ಯುವಿಗಳಿಗೆ ಶೇ 28ರಷ್ಟು ಜಿಎಸ್‌ಟಿ ಮತ್ತು ಶೇ 22ರಷ್ಟು ಜಿಎಸ್‌ಟಿ ಪರಿಹಾರ ಸೆಸ್ ವಿಧಿಸಲಾಗುತ್ತಿದೆ. ಆದರೆ ಇಷ್ಟು ತೆರಿಗೆ ವಿಧಿಸಲು ಜಿಎಸ್‌ಟಿ ಮಂಡಳಿಯು ಎಸ್‌ಯುವಿ ಅಂದರೆ ಏನು ಎಂಬುದನ್ನು ವ್ಯಾಖ್ಯಾನಿಸಿತ್ತು. ಆದರೆ ಈ ವ್ಯಾಖ್ಯಾನದಲ್ಲಿದ್ದ ಕೆಲವು ಷರತ್ತುಗಳ ಕಾರಣದಿಂದ ಕೆಲವು ನೈಜ ಎಸ್‌ಯುವಿಗಳು, ಈ ವ್ಯಾಖ್ಯಾನದಿಂದ ಹೊರಗೆ ಉಳಿದಿದ್ದವು. ಹೀಗಾಗಿ ಅವಕ್ಕೆ ಕಡಿಮೆ ದರದ ತೆರಿಗೆ ಜಿಎಸ್‌ಟಿ ಪರಿಹಾರ ಸೆಸ್ ಅನ್ವಯವಾಗುತ್ತಿತ್ತು. ಈ ನೈಜ್ ಎಸ್‌ಯುವಿಗಳನ್ನೂ ಒಳಗೊಳ್ಳುವಂತೆ ವ್ಯಾಖ್ಯಾನಕ್ಕೆ ತಿದ್ದುಪಡಿ ತರಬೇಕು ಎಂಬ ಬೇಡಿಕೆ ಇತ್ತು. ಆದರೆ, ಜಿಎಸ್‌ಟಿ ಮಂಡಳಿಯು ಈ ವ್ಯಾಖ್ಯಾನವನ್ನೇ ಕೈಬಿಟ್ಟಿದೆ.

ಈ ಮೊದಲು 'ಎಸ್‌ಯುವಿ ಎಂದು ಜನಪ್ರಿಯವಾದ, 1,500 ಸಿ.ಸಿ. ಮತ್ತು ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ಎಂಜಿನ್, 170 ಮಿಲಿಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ಗ್ರೌಂಡ್ ಕ್ಲಿಯರೆನ್ಸ್, 4,000 ಮಿಲಿಮೀಟರ್ (4 ಮೀಟರ್) ಮತ್ತು ಅದಕ್ಕಿಂತ ಹೆಚ್ಚು ಉದ್ದದ ವಾಹನಗಳೇ ಎಸ್‌ಯುವಿ' ಎಂದು ವ್ಯಾಖ್ಯಾನ ಮಾಡಲಾಗಿತ್ತು. ಜಿಎಸ್‌ಟಿ ಪರಿಹಾರ ಅಧಿಸೂಚನೆಯ 52ಬಿ ಸೆಕ್ಷನ್‌ನಲ್ಲಿ ಈ ವ್ಯಾಖ್ಯಾನವನ್ನು ನೀಡಲಾಗಿದೆ. ಈ ವರ್ಗದ ವಾಹನಗಳಿಗೆ ಜಿಎಸ್‌ಟಿ ಮತ್ತು ಜಿಎಸ್‌ಟಿ ಪರಿಹಾರ ಸೆಸ್ ಸೇರಿ ಒಟ್ಟು ಶೇ 50ರಷ್ಟು ತೆರಿಗೆ ಅನ್ವಯವಾಗುತ್ತಿತ್ತು. ಈ ನಾಲ್ಕೂ ಷರತ್ತುಗಳಲ್ಲಿ ಒಂದು ಷರತ್ತು ಅನ್ವಯವಾಗದಿದ್ದರೂ, ಅಂತಹ ವಾಹನವು ಎಸ್‌ಯುವಿ ವ್ಯಾಖ್ಯಾನದಿಂದ ಹೊರಗೆ ಉಳಿಯುತ್ತಿತ್ತು. ಅವುಗಳಿಗೆ ಕಡಿಮೆ ದರದ ತೆರಿಗೆ ಅನ್ವಯವಾಗುತ್ತಿತ್ತು. ಹೀಗಾಗಿ ಆ ನೈಜ ಎಸ್‌ಯುವಿಗಳನ್ನೂ ಈ ವ್ಯಾಪ್ತಿಗೆ ತರಬೇಕು ಎಂಬ ಬೇಡಿಕೆ ಇತ್ತು.

ಯುಟಿಲಿಟಿ ವಾಹನಗಳಿಗೆ ಈಗ ಕಡಿಮೆ ದರದ ಜಿಎಸ್‌ಟಿ ಪರಿಹಾರ ಸೆಸ್ (ಶೇ20) ಅನ್ವಯವಾಗುತ್ತಿದೆ. 1,500 ಸಿ.ಸಿ. ಮತ್ತು ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ಎಂಜಿನ್ ಹೊಂದಿರುವ ಎಲ್ಲಾ ಕಾರುಗಳಿಗೆ (ಯುಟಿಲಿಟಿ ವಾಹನಗಳೂ ಸೇರಿ) ಶೇ 20ರಷ್ಟು ಜಿಎಸ್‌ಟಿ ಪರಿಹಾರ ಸೆಸ್ ಅನ್ವಯ ಮಾಡಲಾಗುತ್ತಿತ್ತು. ಜಿಎಸ್‌ಟಿ ಪರಿಹಾರ ಅಧಿಸೂಚನೆಯ 52ಎ ಸೆಕ್ಷನ್‌ನಲ್ಲಿ ಇದನ್ನು ವಿವರಿಸಲಾಗಿತ್ತು.

ಈಗ ಜಿಎಸ್‌ಟಿ ಮಂಡಳಿಯು ಜಿಎಸ್‌ಟಿ ಪರಿಹಾರ ಅಧಿಸೂಚನೆಯ 52ಬಿ ವಿವರಣೆಗೆ ತಿದ್ದುಪಡಿ ತಂದಿದೆ. ಎಸ್‌ಯುವಿ ಎಂದು ಜನಪ್ರಿಯವಾಗಿರಬೇಕು ಎಂಬ ಷರತ್ತನ್ನು ಕೈಬಿಟ್ಟಿದೆ. '1,500 ಸಿ.ಸಿ. ಮತ್ತು ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ಎಂಜಿನ್, 170 ಮಿಲಿಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ಗ್ರೌಂಡ್ ಕ್ಲಿಯರೆನ್ಸ್, 4,000 ಮಿಲಿಮೀಟರ್ (4 ಮೀಟರ್) ಮತ್ತು ಅದಕ್ಕಿಂತ ಹೆಚ್ಚು ಉದ್ದದ ವಾಹನಗಳನ್ನು ಯುಟಿಲಿಟಿ ವಾಹನಗಳು' ಎಂದು ವ್ಯಾಖ್ಯಾನ ಮಾಡಿದೆ. ಈ ತಿದ್ದುಪಡಿಯ ಪ್ರಕಾರ, 52ಎ ಸೆಕ್ಷನ್‌ನಲ್ಲಿ ಇದ್ದ ಯುಟಿಲಿಟಿ ವಾಹನಗಳನ್ನು, ಶೇ 22ರಷ್ಟು ಜಿಎಸ್‌ಟಿ ಪರಿಹಾರ ಸೆಸ್ ವ್ಯಾಪ್ತಿಗೆ ತರಲಾಗಿದೆ. ಪರಿಣಾಮವಾಗಿ ಯುಟಿಲಿಟಿ ವಾಹನಗಳ ಮೇಲಿನ ತೆರಿಗೆ ಹೆಚ್ಚಳವಾಗಲಿದೆ. ಅವುಗಳ ಎಕ್ಸ್‌ಷೋರೂಂ ಬೆಲೆ ಮತ್ತು ರಸ್ತೆ ತೆರಿಗೆಯೂ ಹೆಚ್ಚಳವಾಗಲಿದೆ. ಅಂತಿಮವಾಗಿ ಅವುಗಳ ಖರೀದಿಗೆ ಜನರು ಹೆಚ್ಚು ಹಣ ವ್ಯಯಿಸಬೇಕಿದೆ.

ಆದರೆ, ಎಸ್‌ಯುವಿ ವ್ಯಾಪ್ತಿಯಿಂದ ಹೊರಗುಳಿದಿದ್ದ ನೈಜ ಎಸ್‌ಯುವಿಗಳನ್ನು ಯುವಿ ವ್ಯಾಪ್ತಿಗೆ ತರುವ ಕೆಲಸವನ್ನೂ ಜಿಎಸ್‌ಟಿ ಮಂಡಳಿ ಮಾಡಿಲ್ಲ. ದೊಡ್ಡ ಸಂಖ್ಯೆಯಲ್ಲಿ ಮಾರಾಟವಾಗುವ ಇಂತಹ ವಾಹನಗಳಿಗೆ ಕಡಿಮೆ ದರದ ತೆರಿಗೆಯೇ ಅನ್ವಯವಾಗುತ್ತಿದೆ.

ಈಗ ಅನ್ವಯವಾಗುತ್ತಿರುವ ಜಿಎಸ್‌ಟಿ ಮತ್ತು ಜಿಎಸ್‌ಟಿ ಪರಿಹಾರ ಸೆಸ್

ಕಡಿಮೆ ತೆರಿಗೆ ವ್ಯಾಪ್ತಿಯಲ್ಲಿ ಎಸ್‌ಯುವಿಗಳು

43% ತೆರಿಗೆ ವ್ಯಾಪ್ತಿ

28% + 15%
ಜಿಎಸ್‌ಟಿ — ಜಿಎಸ್‌ಟಿ ಪರಿಹಾರ ಸೆಸ್

ಇಂಥ ವಾಹನಗಳ ತಾಂತ್ರಿಕ ವಿವರ

4,000 ಮಿಲಿ ಮೀಟರ್‌ಗಿಂತಲೂ ಕಡಿಮೆ ಉದ್ದ

200 ಮಿಲಿ ಮೀಟರ್‌ಗಿಂತಲೂ ಹೆಚ್ಚಿನ ಗ್ರೌಂಡ್ ಕ್ಲಿಯರೆನ್ಸ್

1,500 ಸಿಸಿಗಿಂತಲೂ ಹೆಚ್ಚಿನ ಸಾಮರ್ಥ್ಯದ ಎಂಜಿನ್

(ಕೆಲವು ಎಸ್‌ಯುವಿಗಳು 2,143 ಸಿಸಿ ಸಾಮರ್ಥ್ಯದ ಎಂಜಿನ್ ಹೊಂದಿವೆ. ಅವುಗಳಿಗೆ ಶೇ 28ರಷ್ಟು ಜಿಎಸ್‌ಟಿ ಮತ್ತು ಶೇ 17ರಷ್ಟು ಜಿಎಸ್‌ಟಿ ಪರಿಹಾರ ಸೆಸ್ ಸೇರಿ ಒಟ್ಟು ಶೇ 45ರಷ್ಟು ತೆರಿಗೆ ಅನ್ವಯವಾಗುತ್ತಿದೆ)

- ಈ ವ್ಯಾಪ್ತಿಗೆ ಬರುವ ನಾಲ್ಕು ಜನಪ್ರಿಯ ಎಸ್‌ಯುವಿಗಳು ಈಗ ದೇಶದಲ್ಲಿ ಮಾರಾಟವಾಗುತ್ತಿವೆ. ಅವುಗಳ ಉದ್ದ 3,995 ಎಂಎಂ ಇದೆ ಎಂದ ಮಾತ್ರಕ್ಕೆ ಅವುಗಳಿಗೆ ಕಡಿಮೆ ತೆರಿಗೆ ವಿಧಿಸಲಾಗುತ್ತಿದೆ

ಸೆಡಾನ್, ಎಂಪಿವಿ, ಎಂಯುವಿಗಳಿಗೆ ತೆರಿಗೆ

48% ತೆರಿಗೆ ವ್ಯಾಪ್ತಿ

28% + 17%
ಜಿಎಸ್‌ಟಿ — ಜಿಎಸ್‌ಟಿ ಪರಿಹಾರ ಸೆಸ್

ಇಂಥ ವಾಹನಗಳ ತಾಂತ್ರಿಕ ವಿವರ

1,500 ಸಿಸಿ ಮತ್ತು ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ಎಂಜಿನ್ ಇರುವ ಎಲ್ಲಾ ಕಾರುಗಳಿಗೆ (ಯುಟಿಲಿಟಿ ವಾಹನಗಳು) ಅನ್ವಯವಾಗುತ್ತದೆ

- ದೊಡ್ಡ ಹ್ಯಾಚ್‌ಬ್ಯಾಕ್‌ಗಳು, ಸೆಡಾನ್‌ಗಳು, ಮಲ್ಟಿ ಪರ್ಪಸ್ ವೆಹಿಕಲ್ (ಎಂಪಿವಿ), ಮಲ್ಟಿ ಯುಟಿಲಿಟಿ ವೆಹಿಕಲ್ (ಎಂಯುವಿ) ಈ ವ್ಯಾಪ್ತಿಯಲ್ಲಿ ಬರುತ್ತವೆ

ಗರಿಷ್ಠ ತೆರಿಗೆ ವ್ಯಾಪ್ತಿಯಲ್ಲಿನ ಎಸ್‌ಯುವಿಗಳು

50% ತೆರಿಗೆ ವ್ಯಾಪ್ತಿ

28% + 22%
ಜಿಎಸ್‌ಟಿ — ಜಿಎಸ್‌ಟಿ ಪರಿಹಾರ ಸೆಸ್

ಇಂಥ ವಾಹನಗಳ ತಾಂತ್ರಿಕ ವಿವರ

4,000 ಮಿಲಿ ಮೀಟರ್ ಮತ್ತು ಅದಕ್ಕಿಂತಲೂ ಹೆಚ್ಚು ಉದ್ದ

170 ಮಿಲಿ ಮೀಟರ್ ಮತ್ತು ಅದಕ್ಕಿಂತಲೂ ಹೆಚ್ಚಿನ ಗ್ರೌಂಡ್ ಕ್ಲಿಯರೆನ್ಸ್

1,500 ಸಿಸಿ ಮತ್ತು ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ಎಂಜಿನ್

ಎಸ್‌ಯುವಿ ಎಂದು ಜನಪ್ರಿಯವಾಗಿರಬೇಕು

- ಈ ನಾಲ್ಕೂ ಷರತ್ತಿಗೆ ಒಳಪಡುವ ಪ್ರವೇಶ ಮಟ್ಟದ ಎಸ್‌ಯುವಿಗಳು, ದೊಡ್ಡ ಎಸ್‌ಯುವಿಗಳು, ಲೈಫ್‌ಸ್ಟೈಲ್ ಪಿಕ್‌ಅಪ್ ವಾಹನಗಳು, ಐಷಾರಾಮಿ ಎಸ್‌ಯುವಿಗಳಿಗೆ ಶೇ 50ರಷ್ಟು ತೆರಿಗೆ ಅನ್ವಯವಾಗುತ್ತಿದೆ

ಎಸ್‌ಯುವಿ ವ್ಯಾಖ್ಯಾನ ತಿದ್ದುಪಡಿಯ ನಂತರ

- ಇಂತಹ ವಾಹನಗಳನ್ನು ಶೇ 50ರ ತೆರಿಗೆ ವ್ಯಾಪ್ತಿಗೆ ತರಬೇಕು ಎಂಬ ಬೇಡಿಕೆ ಇತ್ತು. ಆದರೆ, ಈ ಸಂಬಂಧ ಜಿಎಸ್‌ಟಿ ಮಂಡಳಿಯು ಯಾವುದೇ ಕ್ರಮ ತೆಗೆದುಕೊಂಡಿಲ್ಲ



- ಈಗ ಮಾಡಿರುವ ತಿದ್ದುಪಡಿಯ ಕಾರಣದಿಂದ ಎಂಪಿವಿ ಮತ್ತು ಎಂಯುವಿಗಳು ಶೇ 50ರಷ್ಟು ತೆರಿಗೆ ವ್ಯಾಪ್ತಿಗೆ ಬರುತ್ತವೆ



ಆಧಾರ: ಜಿಎಸ್‌ಟಿ ಮಂಡಳಿ ಸಭೆಯ ಪ್ರಕಟಣೆ, ಜಿಎಸ್‌ಟಿ ಪರಿಹಾರ ಅಧಿಸೂಚನೆ
ಪ್ರಜಾವಾಣಿ ಗ್ರಾಫಿಕ್ಸ್

ಸಿನಿ ಬಿಟ್ಸ್

'ರಾಮ'ನಾದ ಕೃಷ್ಣನ ಕಥೆ

'ಲವ್ 360' ಬಳಿಕ ನಿರ್ದೇಶಕ ಶಶಾಂಕ್ ಆ್ಯಕ್ಷನ್ ಕಟ್ ಹೇಳಿರುವ ಹೊಸ ಸಿನಿಮಾ 'ಕೌಸಲ್ಯಾ ಸುಪ್ರಜಾ ರಾಮ' ತೆರೆಗೆ ಬರಲು ಸಜ್ಜಾಗಿದೆ. ಸಿನಿಮಾ ಇದೇ ಜುಲೈ 28ಕ್ಕೆ ರಿಲೀಸ್ ಆಗಲಿದ್ದು, ಚಿತ್ರದ ಟ್ರೈಲರ್ ಅನ್ನು ನಟ ಸುದೀಪ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

ಟ್ರೈಲರ್ ಮೂಲಕ ಡಾರ್ಲಿಂಗ್ ಕೃಷ್ಣ ಹಾಗೂ ಬೃಂದಾ ಆಚಾರ್ಯ ಅವರ 'ರಾಮ್–ಶಿವಾನಿ' ಜೋಡಿ ಮೋಡಿ ಮಾಡಿದೆ. ಹೊಸ ಬಗೆಯ ಪ್ರೇಮಕಥೆ, ಭಾವನೆಗಳ ಮೂಟೆಯೊಂದಿಗೆ ಈ ಬಾರಿ ಶಶಾಂಕ್ ಪ್ರೇಕ್ಷಕರೆದುರಿಗೆ ಬಂದಿದ್ದಾರೆ. ತಾಯಿ ಮಗನ ಭಾವನಾತ್ಮಕ ಸನ್ನಿವೇಶಗಳನ್ನೊಳಗೊಂಡಿರುವ ಚಿತ್ರ ಇದಾಗಿದ್ದು, ನಾಯಕನ ತಾಯಿ - ತಂದೆ ಪಾತ್ರದಲ್ಲಿ ಸುಧಾ ಬೆಳವಾಡಿ, ರಂಗಾಯಣ ರಘು ನಟಿಸಿದ್ದಾರೆ. ಸಿನಿಮಾದಲ್ಲಿ ಮತ್ತೋರ್ವ ನಾಯಕಿಯಾಗಿ ಮಿಲನಾ ನಾಗರಾಜ್ ಬಣ್ಣಹಚ್ಚಿದ್ದಾರೆ.

'ಚಿತ್ರದ ಕಥೆಯ ಕಾರಣದಿಂದ ನಾನು ಇದುವರೆಗೂ ಮಾಡಿರುವ ಸಿನಿಮಾಗಳಲ್ಲಿ ಅತ್ಯುತ್ತಮ ಸಿನಿಮಾ ಇದಾಗಿದೆ. ಈ ಕಥೆಗೆ ಯಾವುದೋ ಒಂದು ಆಯಾಮವಿಲ್ಲ, ಹಲವು ಆಯಾಮಗಳಿವೆ. ಕೃಷ್ಣ ಅವರನ್ನು ಬೇರೆ ರೀತಿಯೇ ತೋರಿಸುವ ಪ್ರಯತ್ನ ಮಾಡಿದ್ದೇನೆ' ಎನ್ನುತ್ತಾರೆ ಶಶಾಂಕ್.

'ಇದು ಶಶಾಂಕ್ ಸ್ಟೈಲ್ ಸಿನಿಮಾ' ಎಂದ ಡಾರ್ಲಿಂಗ್ ಕೃಷ್ಣ, 'ಶಶಾಂಕ್ ಅವರು ನನ್ನ ಬಳಿ ಬಂದಾಗ, ಕಥೆ ಇರಲಿಲ್ಲ. ನಿಮಗೆ ಯಾವ ತರಹದ ಸಿನಿಮಾ ಬೇಕು ಎಂದು ಕೇಳಿದರು. ನೀವು ನಿಮ್ಮ ಸ್ಟೈಲ್‌ನಲ್ಲೇ ಮಾಡಿ ಎಂದು ಹೇಳಿದ್ದೆ. ಒಂದು ತಿಂಗಳ ನಂತರ ಈ ಕಥೆ ತಂದರು. ಬಹಳ ಸುಲಭವಾಗಿ ಮುಗಿದ ಚಿತ್ರ ಇದು. ಈ ಸಿನಿಮಾ ಎಲ್ಲರ ಮನಸ್ಸಿಗೂ ಹತ್ತಿರವಾಗಲಿದೆ' ಎಂದರು.

ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿದ್ದು, ಶಶಾಂಕ್ ಸಿನಿಮಾಸ್ ಹಾಗೂ ಬಿ.ಸಿ. ಪಾಟೀಲ್ ಅವರ ಕೌರವ ಪ್ರೊಡಕ್ಷನ್ ಹೌಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದೆ. ❖

ಬೃಂದಾ ಹಾಗೂ ಕೃಷ್ಣ

ಮೆಲ್ಬರ್ನ್ ಚಿತ್ರೋತ್ಸವದಲ್ಲಿ ಕಾಂತಾರ, ಕೋಳಿ ಎಸ್ರು

ರಿಷಬ್ ಶೆಟ್ಟಿ

ಅಕ್ಷತಾ ಪಾಂಡವಪುರ

ಪೃಥ್ವಿ ಕೊಣನೂರು

ಮೆಲ್ಬರ್ನ್(ಪಿಟಿಐ): ಮೆಲ್ಬರ್ನ್ ಭಾರತೀಯ ಚಿತ್ರೋತ್ಸವ(ಇಂಡಿಯನ್ ಫಿಲ್ಮ್ ಫೆಸ್ಟಿವಲ್ ಆಫ್ ಮೆಲ್ಬರ್ನ್–ಐಎಫ್‌ಎಫ್‌ಎಂ) ಪ್ರಶಸ್ತಿ 2023ರ ಅತ್ಯುತ್ತಮ ನಟ ವಿಭಾಗದಲ್ಲಿ 'ಕಾಂತಾರ' ಚಿತ್ರದಲ್ಲಿನ ನಟನೆಗಾಗಿ ರಿಷಬ್ ಶೆಟ್ಟಿ ಹಾಗೂ ಅತ್ಯುತ್ತಮ ನಟಿ ವಿಭಾಗದಲ್ಲಿ 'ಕೋಳಿ ಎಸ್ರು' ಚಿತ್ರದಲ್ಲಿನ ನಟನೆಗಾಗಿ ನಟಿ ಅಕ್ಷತಾ ಪಾಂಡವಪುರ ನಾಮನಿರ್ದೇಶನಗೊಂಡಿದ್ದಾರೆ.

ಐಎಫ್‌ಎಫ್‌ಎಂನ 14ನೇ ಆವೃತ್ತಿ ಆ.11ರಿಂದ 20ರವರೆಗೆ ಇಲ್ಲಿ ನಡೆಯಲಿದೆ. ಅತ್ಯುತ್ತಮ ನಿರ್ದೇಶನ ವಿಭಾಗದಲ್ಲಿ 'ಹದಿನೇಳೆಂಟು' ಚಿತ್ರಕ್ಕಾಗಿ ಪೃಥ್ವಿ ಕೊಣನೂರು ನಾಮನಿರ್ದೇಶನಗೊಂಡಿದ್ದಾರೆ. ಈ ವಿಭಾಗದಲ್ಲಿ ಮಣಿ ರತ್ನಂ, ಅನುರಾಗ್ ಕಶ್ಯಪ್ ಮುಂತಾದ ಖ್ಯಾತ ನಿರ್ದೇಶಕರೂ ನಾಮನಿರ್ದೇಶನಗೊಂಡಿದ್ದಾರೆ. 'ಹದಿನೇಳೆಂಟು' ಸಿನಿಮಾ ಅತ್ಯುತ್ತಮ 'ಇಂಡೀ ಫಿಲ್ಮ್' ವಿಭಾಗದಲ್ಲೂ ನಾಮನಿರ್ದೇಶನಗೊಂಡಿದೆ.

ಅತ್ಯುತ್ತಮ ಚಿತ್ರ ವಿಭಾಗದಲ್ಲಿ 'ಕಾಂತಾರ' ಸಿನಿಮಾ ನಾಮನಿರ್ದೇಶನಗೊಂಡಿದ್ದು, ಉಳಿದಂತೆ 'ಡಾರ್ಲಿಂಗ್ಸ್', 'ಮೋನಿಕಾ ಓ ಮೈ ಡಾರ್ಲಿಂಗ್', 'ಪೊನ್ನಿಯನ್ ಸೆಲ್ವನ್', 'ಭೇಡಿಯಾ', 'ಬ್ರಹ್ಮಾಸ್ತ್ರ', 'ಜೋಗಿ', 'ಪಠಾಣ್' ಹಾಗೂ 'ಸೀತಾ ರಾಮಂ' ಸಿನಿಮಾಗಳು ಈ ವಿಭಾಗದಲ್ಲಿ ನಾಮನಿರ್ದೇಶನಗೊಂಡಿವೆ. ಅತ್ಯುತ್ತಮ ನಟ ವಿಭಾಗದಲ್ಲಿ 'ಜೋರಂ' ಹಾಗೂ 'ಗುಲ್‌ಮೊಹರ್' ಚಿತ್ರದಲ್ಲಿನ ನಟನೆಗಾಗಿ ನಟ ಮನೋಜ್ ಬಾಜಪೇಯಿ ನಾಮನಿರ್ದೇಶನಗೊಂಡಿದ್ದಾರೆ. ಉಳಿದಂತೆ ಶಾರುಕ್ ಖಾನ್, ದುಲ್ಕರ್ ಸಲ್ಮಾನ್, ವಿಕ್ರಂ ಸೇರಿದಂತೆ ಹಲವರಿದ್ದಾರೆ.

ಅತ್ಯುತ್ತಮ ನಟಿ ವಿಭಾಗದಲ್ಲಿ ಆಲಿಯಾ ಭಟ್, ಐಶ್ವರ್ಯ ರೈ, ಕಾಜೋಲ್, ರಾಣಿ ಮುಖರ್ಜಿ, ಸಾಯಿ ಪಲ್ಲವಿ ಸೇರಿದಂತೆ ಹಲವರಿದ್ದಾರೆ. ❖

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೆ ಕಾಂಗ್ರೆಸ್ ಕಾರಣ ಎಂದು ಅಲ್ಲಿನ ಕಾಂಗ್ರೆಸ್ ಅಧ್ಯಕ್ಷರೇ ಹೇಳುತ್ತಿದ್ದಾರೆ. ಈ ಬಗ್ಗೆ ಅವರು ರಾಹುಲ್ ಗಾಂಧಿ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ. ಇದು ಮೈತೇಯಿ ಹಾಗೂ ಕುಕಿ ಸಮುದಾಯದ ಮಧ್ಯದ ಹಿಂಸಾಚಾರವಲ್ಲ. ಬದಲಿಗೆ, ರೋಹಿಂಗ್ಯಾ ಮುಸ್ಲಿಮರನ್ನು, ಬಾಂಗ್ಲಾದೇಶಿ ಮುಸ್ಲಿಮರನ್ನು ಭಾರತದೊಳಗೆ ಕಾಂಗ್ರೆಸ್ ಬಿಟ್ಟುಕೊಂಡಿದ್ದೇ ಈಗಿನ ಸ್ಥಿತಿಗೆ ಕಾರಣ. ತನ್ನ ವೈಯಕ್ತಿಕ ಹಿತಾಸಕ್ತಿಗಾಗಿ, ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್ ದೇಶವನ್ನು ಹಾಳುಗೆಡುವುತ್ತಿದೆ' ಎಂಬುದಾಗಿ ಸುದ್ದಿ ವಾಹಿನಿಯೊಂದರ ಸ್ಕ್ರೀನ್‌ಶಾಟ್‌ನೊಂದಿಗೆ ಬರೆದ ಬರಹಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಬರಹದೊಂದಿಗೆ ಹಂಚಿಕೊಂಡ ಸ್ಕ್ರೀನ್‌ಶಾಟ್‌ನಲ್ಲಿಯೇ ಇರುವಂತೆ ಇದು ಮಣಿಪುರದ ಪ್ರಾದೇಶಿಕ ಪಕ್ಷವಾದ 'ಮಣಿಪುರ ಪೆಟ್ರಿಯಾರ್ಕಿಕ್ ಪಕ್ಷ'ದ ಅಧ್ಯಕ್ಷ ನೀಡಿದ ಹೇಳಿಕೆಯಾಗಿದೆ. ಇವರ ಹೆಸರು ನೊರೆಮ್ ಮೊಹಿನ್ ಎಂಬುದಾಗಿ. ಈ ಕುರಿತು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಕೂಡ 'ಇಂಡಿಯಾ ಟುಡೇ' ಸುದ್ದಿ ವಾಹಿನಿಯ ವರದಿಯನ್ನು ಟ್ವೀಟ್ ಮಾಡಿದ್ದಾರೆ. ನೊರೆಮ್ ಮೊಹಿನ್ ಅವರು ತಾವೇ ಹೇಳಿಕೊಂಡಂತೆ ಬಿಜೆಪಿ ಬೆಂಬಲಿಗರಾಗಿದ್ದಾರೆ. ಇವರ ಟ್ವಿಟರ್ ಖಾತೆಯ ಹೆಸರು '@NaoremMohenBJP' ಎಂಬುದಾಗಿದೆ. ಇವರು ಮಣಿಪುರದ ಬಿಜೆಪಿ ಐಟಿ ಸೆಲ್‌ನ ಸಂಚಾಲಕರೂ ಆಗಿದ್ದರು. ಇವರ ಹಲವು ಬಿಜೆಪಿ ಪರ ಟ್ವೀಟ್‌ಗಳು '@NaoremMohenBJP' ಖಾತೆಯಿಂದಲೇ ಪ್ರಕಟಗೊಂಡಿವೆ. ಆದ್ದರಿಂದ, ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೆ ಕಾಂಗ್ರೆಸ್ ಕಾರಣ ಎಂದು ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ಹೇಳಿದ್ದಾರೆ ಎನ್ನುವುದು ಸುಳ್ಳು ಸುದ್ದಿ. ಬದಲಿಗೆ ಬಿಜೆಪಿ ಬೆಂಬಲಿಗ ರಾಜಕಾರಣಿ ಒಬ್ಬರು ಮಾಡಿರುವ ಆರೋಪವಾಗಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಸದ್ದಿಲ್ಲದ ಕಡೆಗಾಲ

ಕಡೆಗಾಲವನು ತಾನೆ ಮುನ್ನರಿತು ಕಾಡಾನೆ |
ಯಡವಿಯೊಳದೊಂದು ದೂರದ ಗವಿಯನೈದಿ ||
ಬಿಡುವುದಾಯೆಡೆ ಮೌನದಿಂದಸುವವೆನ್ನುವರು |
ಕಡೆಯ ಸಾರಂತು ನೀಂ – ಮಂಕುತಿಮ್ಮ || 928 ||

ಪದ-ಅರ್ಥ: ಮುನ್ನರಿತು = ಮುನ್ನ + ಅರಿತು, ಕಾಡಾನೆಯಡವಿಯೊಳದೊಂದು = ಕಾಡಾನೆ- + ಅಡವಿಯೊಳು + ಅದೊಂದು, ಗವಿಯನೈದಿ = ಗವಿಯನು + ಐದಿ(ಸೇರಿ), ಬಿಡುವುದಾಯೆಡೆ = ಬಿಡುವುದು + ಆ + ಎಡೆ(ಜಾಗ, ಸ್ಥಳ), ಮೌನದಿಂದಸುವವೆನ್ನುವರು = ಮೌನದಿಂದ = ಅ-ಸುವನು(ಪ್ರಾಣವನ್ನು) + ಎನ್ನುವರು, ಸಾರಂತು = -ಸಾರು(ಹೋಗು) + ನೀನು + ಅಂತು.

ವಾಚ್ಯಾರ್ಥ: ಕಾಡಾನೆ ತನ್ನ ಮೃತ್ಯುವಿನ ಸಮಯವನ್ನು ತಾನೇ ಮೊದಲು ಅರಿತು, ಅಡವಿಯಲ್ಲಿ ಒಂದು ದೂರದ ಗವಿಯನ್ನು ಸೇರಿ, ಮೌನದಿಂದ ತನ್ನ ಪ್ರಾಣವನ್ನು ಬಿಡುತ್ತದೆ ಎನ್ನುತ್ತಾರೆ. ನೀನೂ ಹಾಗೆಯೇ ನಿನ್ನ ಕಡೆಗಾಲನ್ನು ಸಾರು.

ವಿವರಣೆ: ಇದೊಂದು ನಂಬಿಕೆ ಜನರಲ್ಲಿ ಮೂಡಿದೆ. ಕಾಡಾನೆಗೆ ತನ್ನ ಸಾವು ಹತ್ತಿರ ಬಂದದ್ದು ತಿಳಿಯುತ್ತದಂತೆ. ಹಾಗೆ ಸಾವಿನ ಸಮಯ ಹತ್ತಿರ ಬಂದಾಗ ಅದು ಕಾಡಿನಲ್ಲಿ ಒಳಗಡೆ ತುಂಬ ದೂರಕ್ಕೆ ಹೋಗಿಬಿಡುತ್ತದೆ. ಅಲ್ಲಿ ಒಂದು ಗುಹೆಯನ್ನು ಹುಡುಕಿಕೊಂಡು ಸೇರಿ, ಮೌನದಿಂದ ಪ್ರಾಣಬಿಡುತ್ತದೆ. ಯಾರಿಗೂ ತಿಳಿಯದಂತೆ, ಯಾರಿಗೂ ತೊಂದರೆಯಾಗದಂತೆ ತನ್ನ ಜೀವನಯಾತ್ರೆಯನ್ನು ಮುಗಿಸುತ್ತದೆ. ಇದು ಹಾಗೆಯೇ ತಲೆಮಾರುಗಳಿಂದ ಹರಿದು ಬಂದ, ಆಧಾರವಿಲ್ಲದ ನಂಬಿಕೆ. ತಮ್ಮ ಜೊತೆಗಾರರು ಸತ್ತರೆ ಅದಕ್ಕೆ ದು:ಖವನ್ನು ಪ್ರಕಟಿಸುತ್ತವೆ ಎಂಬುದು ಸತ್ಯವಾದರೂ, ತನ್ನ ಸಾವನ್ನು ಹೀಗೆ ಏಕಾಂಗಿಯಾಗಿ ಕಳೆಯುವುದು ಒಂದು ಬೋಧಪ್ರದವಾದ ಮಿಥ್ಯೆ. ಅದು ಬೋಧಪ್ರದ ಯಾಕೆಂದರೆ, ಸಾವು ಸುಲಭವಲ್ಲ. ಜನನವೆಂಬುದು ದೇಹದಲ್ಲಿ ಜೀವನದ ಪ್ರಜ್ಞಾಶಕ್ತಿಯ ,ಪ್ರವೇಶವಾದರೆ, ಸಾವೆಂಬುದು ಆ ಪ್ರಜ್ಞಾಶಕ್ತಿಯನ್ನು ಬಿಡುವುದು. ಅದು ಏಕೆ ಕಷ್ಟವೆಂದರೆ ಈಗ ಪ್ರಜ್ಞಾಶಕ್ತಿಯು ದೇಹದ ಜೊತೆಗೆ, ಅನುಭವದ ಜೊತೆಗೆ ಬಿಗಿಯಾಗಿ ಬೆಸೆದುಕೊಂಡಿದೆ. ಬಿಡುಗಡೆ ತುಂಬ ನೋವಿನದು. ಅಂಥದ್ದರಲ್ಲಿ, ಸಾವನ್ನು ಮೊದಲೇ ತಿಳಿದುಕೊಂಡು, ಜನರಿಂದ ದೂರವಾಗಿ ಯಾರಿಗೂ ತೊಂದರೆ ಕೊಡದೆ, ಭಾರವಾಗದೆ ಪ್ರಾಣವನ್ನು ಬಿಡುವುದು ಪರಮ ಭಾಗ್ಯ. ಅಂತಹ ಭಾಗ್ಯ ಎಲ್ಲರಿಗೂ ಬರಲಿ ಎನ್ನುತ್ತದೆ ಕಗ್ಗ. ಸಾವಿನ ಮುನ್ಸೂಚನೆಯನ್ನು ಪಡೆದರೂ, ಅದರ ಬಗ್ಗೆ ಭಯವಿಲ್ಲದೆ, ಆತಂಕಗೊಳ್ಳದೆ, ಎಲ್ಲವನ್ನೂ ಪೂರ್ವಯೋಜನೆಯಂತೆ ನಡೆಸಿ ದೇಹದಿಂದ ಮುಕ್ತಿ ಪಡೆಯುವುದು ಒಂದು ವಿಶೇಷ ಸಾಧನೆ. ಅದೊಂದು ರೀತಿಯಲ್ಲಿ ಸಾವನ್ನು ಗೆದ್ದಂತೆ.

ಗುಂಡಣ್ಣ



ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜುಲೈ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಅಮಾವಾಸ್ಯೆ ಗಂ. 24-02 ನಕ್ಷತ್ರ: ಪುನರ್ವಸು ಗಂ. 29-11 ಯೋಗ: ವ್ಯಾಘಾತ ಗಂ. 08-57 ಕರಣ: ಚತುಷ್ಪಾದ್ ಗಂ. 11-13, ಮಿಥುನ ಮಾಸದ 32 ನೇ ದಿನ, ಮಳೆನಕ್ಷತ್ರ: ಪುನರ್ವಸು 4.ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-16 ಸೂರ್ಯಾಸ್ತ : 06-58, ಮುಸ್ಲಿಂ ದಿನಾಂಕ : 28 ಜುಲ್‌ಹಿಜಾ ದಿನ ವಿಶೇಷ : ಕರ್ಕಾಟಕ ಸಂಕ್ರಾಂತಿ, ದಕ್ಷಿಣಾಯನ ಪುಣ್ಯಕಾಲ, ಚಿತ್ತಲಗಿ ಅಮಾವಾಸ್ಯೆ (ಒರಿಸ್ಸಾ), ಆಡಿ ಅಮಾವಾಸ್ಯೆ (ತಮಿಳುನಾಡು), ಕರ್ಕಾಟಕ ವಾವು (ಕೇರಳ), ಮಾನಸ ಪೂಜಾ ಆರಂಭ. ಅದೃಷ್ಟ ಸಂಖ್ಯೆ : 3, 5

ಮೇಷ: ಚಲನಚಿತ್ರರಂಗದವರಿಗೆ ಈ ದಿನ ಒಳ್ಳೆಯ ಖ್ಯಾತಿ ದೊರೆಯುವುದು. ಸಗಟು ವ್ಯಾಪಾರಿಗಳಿಗೆ ಲಾಭವಾಗುವ ಲಕ್ಷಣ ಸಿಗಲಿದೆ. ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ಪರಿಹಾರಗೊಳ್ಳಲಿವೆ.

ವೃಷಭ: ಉದ್ಯೋಗಕ್ಕಾಗಿ ಹೊರ ದೇಶದ ಪ್ರಯಾಣದ ಅವಕಾಶಗಳು ಸಿಗಬಹುದು. ಮಾತೃವರ್ಗದವರ ನೆರವಿನಿಂದ ಆರ್ಥಿಕ ಚೇತರಿಕೆ ಹೊಂದುವಿರಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ವ್ಯಯವಾಗುವುದು.

ಮಿಥುನ: ಸ್ವಾರ್ಥದ ಬದುಕಿಗಾಗಿ ಇನ್ನೊಬ್ಬರ ಭಾವನೆಗಳನ್ನು ಒಡೆಯಬೇಡಿ. ಸಂಘ-ಸಂಸ್ಥೆಯಲ್ಲಿ ಅಥವಾ ಗ್ರಾಮೀಣ ಬದುಕಿನಲ್ಲಿ ಅಧಿಕಾರ ಸಿಗಲಿದೆ. ಆರೋಗ್ಯದಲ್ಲಿ ಚೇತರಿಕೆಯಾಗುತ್ತದೆ. ಬಿಳಿ ಬಣ್ಣವು ಶುಭ.

ಕರ್ಕಾಟಕ: ಶ್ರಮಜೀವಿಗಳಿಗೆ ಉತ್ತಮ ಆದಾಯವಿರುವುದು. ಹಂಗಾಮಿ ಕೆಲಸಗಾರರಿಗೆ ಸಣ್ಣ ಬದಲಾವಣೆ ಕಾಣುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ ಹೆಚ್ಚಲಿದೆ.

ಸಿಂಹ: ಚಟುವಟಿಕೆಯಲ್ಲಿ ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ ಯಾವುದೇ ಉಪಯೋಗವಾಗುವುದಿಲ್ಲ, ಕೇವಲ ಸಮಯ ಮಾತ್ರ ಹಾಳಾಗುವುದು ಎಂದು ತಿಳಿದಿರಲಿ.

ಕನ್ಯಾ: ತಾರ್ಕಿಕ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯ. ವಾದ ವಿವಾದಗಳಿಂದ ದೂರವಿರುವುದು ಉತ್ತಮ. ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ.

ತುಲಾ: ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದುಕೊಳ್ಳುವ ಸನ್ನಿವೇಶ ಬರಲಿದೆ. ಸಾಂಸಾರಿಕ ವಿಚಾರಕ್ಕೆ ಸಂಬಂಧಿಸಿದಂತೆ ಈ ದಿನ ಆತುರದಿಂದ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ.

ವೃಶ್ಚಿಕ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ರಾಸಾಯನಿಕ ಶಾಸ್ತ್ರದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯವಾಗಿ ಬೇಕಾಗುವುದು. ಸಂಬಂಧಿಗಳಿಂದ ಸಂತಸದ ಸುದ್ದಿ ಕೇಳುವಿರಿ.

ಧನು: ಕೆಲಸದಲ್ಲಿ ಈ ದಿನ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ಸೋಲಿಗೆ ಆಲಸ್ಯತನವೇ ಮುಖ್ಯ ಕಾರಣ. ವಾಯು ಬಾಧೆ ಕಂಡುಬಂದು ಸಣ್ಣ-ಪುಟ್ಟ ಅನಾರೋಗ್ಯ ಎದುರಾಗುವುದು.

ಮಕರ: ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ ಇರುವುದು. ಹಾಲಿನ ಉತ್ಪನ್ನಗಳ ಮಾರಾಟಗಾರರಿಗೆ ಲಾಭ ಬರುವುದು. ಈ ದಿನ ದೂರ ಪ್ರಯಾಣದ ಕಾರ್ಯಗಳನ್ನು ಮುಂದೂಡಿ.

ಕುಂಭ: ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕತೆಯನ್ನು ವಹಿಸಿರಿ. ಅಧಿಕಾರಿಗಳಿಗೆ ನಿಮ್ಮ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿದರೆ, ಬಯಕೆ ಈಡೇರುವುದು. ವಿದೇಶದಿಂದ ಒಂದು ಶುಭ ಸಂದೇಶ ಬರಲಿದೆ.

ಮೀನ: ಹಿಂದೆ ಮಾಡಿದ ಕೆಲಸದ ಫಲವಾಗಿ ಈ ದಿನ ಅದರ ಲಾಭ ಬಂದು ಕೈ ಸೇರಿದ ಸಂತಸ ಆಗಲಿದೆ. ವ್ಯಾಪಾರದಲ್ಲಿ ಸಹಚರರಿಂದಲೇ ಮೋಸವಾಗುತ್ತಿರುವ ವಿಚಾರವು ಅನುಭವಕ್ಕೆ ಬಂದು ದುಃಖವಾಗಬಹುದು

ಪದಬಂಧ 5382
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬುದ್ಧಿ ಭ್ರಮಣೆಯಾದವನು (3)
2.ಹಣದೊಳಗಿನ ಗೊಂದಲ! (4)
4.ಅತೀ ಸಿಟ್ಟನ್ನು ಹೀಗೆನ್ನಿ (4)
6.ಆನಂದ ಹೀಗೆ ಬಂದಿದೆ (3)
7.ಬಾದಾರಯಣ ಕಾಲದ ಶರವಿಲ್ಲಿ ಉಲ್ಟಾ ಆಗಿದೆ (2)
9.ನಿಜವಲ್ಲದುದು ಅಥವಾ ಮೋಸ ಎಂದರೂ ಸರಿಯೇ (3)
11.ದೇವರ ಅನುಗ್ರಹ (2)
13.ನಾಸಿಕದಿಂದ ಸುರಿವ ಶ್ಲೇಷ್ಮ (3)
14.ದಮಯಂತಿಯ ಪತಿ ಮಾಡಿದ ರುಚಿಕಟ್ಟಾದ ಅಡುಗೆ (4)
16.ಘರ್ಷಣೆಯಲ್ಲ ಅದೇನೋ ಸೆಳೆತ! (4)
17.ಬಿರುಕು ಬಿಟ್ಟ ಚರ್ಮದ ಮೇಲೆ ಎದ್ದಿರುವ ಪದರ (3)

ಮೇಲಿಂದ ಕೆಳಕ್ಕೆ
1.ಕರದಲ್ಲಿ ಹಿಡಿದ ಸಾಮಾನು (5)
2.ಹರಸುವಾಗ ಕಾಣಿಸಿದ ಆಕಳು (2)
3.ಬೆಳ್ಳಿ ಹಬ್ಬವಿದು (5)
5.ಹೂವಿನ ಮಕರಂದ (3)
8.ಬಾಲ ಹಿಡಿದಿರುವ ಅನುಯಾಯಿ (5)
10.ಕದದ ಬಳಿ ನಡೆದ ಕಾಳಗವಿದು (3)
12.ಯುದ್ಧದ ಸಮಯದಲ್ಲಿ ಸಾರುವ ಕಹಳೆ (5)
15.ಜಾಗರಣೆ ಮಾಡಿದ ಬುದ್ಧಿವಂತೆ! (2)



5381ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಗಮ 5.ಸೂಕ್ಷ್ಮಪ್ರಕೃತಿ
7.ಕಲಾವಿದ 9.ಕರ
10.ಗಿಲೀಟು 12.ಅರಿ
14.ಡಿಗುಂಡಾಗಂ
16.ಮನೋವಿಕಾರ
18.ಡುರಕ

ಮೇಲಿಂದ ಕೆಳಕ್ಕೆ:
1.ಸುಧಾಕರ 2.ಮನವಿ
3.ಜಿಸೂ 4.ಅತಿರೇಕ
6.ಪ್ರಸಾರ 8.ದಸ್ತಗಿರಿ
9.ಕಟುನುಡಿ 11.ಅನುಮತಿ
12.ಅಡವಿ 13.ಆಗಂತುಕ
15.ಗುಂಡಾಡು 17.ರಫ್ತು

ಸುಡೊಕು 5768

		1		8				
			1		6			
3		5		2			8	
	8	7					1	
		4	7	6	3	8		9
5	9						7	
		2		7		1		5
1			2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5767 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹512

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹205-439

ದ್ವಿತಳಿ (ಬಿ.ವಿ) ₹277-572

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಚಿರಸ್ಮರಣೆ

ಶ್ರೀ ಬಿ.ಪಿ. ತಿಪ್ಪಯ್ಯ BA, BL, B.Ed
Director of Public Instruction DPI (Retd.)
(ನಿಧನ: 17-07-2018)
ನಿಮ್ಮ ಜೀವನದ ಪ್ರತಿ ಹೆಜ್ಜೆ
ನಮಗೆ ಸ್ಫೂರ್ತಿ
ನೀವೇ ನಮ್ಮ ಯಶಸ್ಸಿನ
ಮಾರ್ಗದರ್ಶನದ ಮೂರ್ತಿ
ಎಂದೂ ಮರೆಯಲಾರೆವು ನಿಮ್ಮನ್ನು
ನಾವೇ ಧನ್ಯ ನಾವೇ ಧನ್ಯ
ಸದಾ ನಿಮ್ಮನ್ನು ಸ್ಮರಿಸುವ: ಪತ್ನಿ ಮತ್ತು ಮಕ್ಕಳು.

ಕೇಂದ್ರದಿಂದ ₹80ರ ರಿಯಾಯಿತಿ ದರಕ್ಕೆ ಟೊಮೆಟೊ ಮಾರಾಟ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಭಾನುವಾರದಿಂದ ಕೆ.ಜಿ.ಗೆ ₹80ರಂತೆ ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಆರಂಭಿಸಿದೆ.

ಕೇಂದ್ರವು ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ಕೆ.ಜಿ.ಗೆ ₹90ರಂತೆ ರಿಯಾಯಿತಿ ದರದಲ್ಲಿ ಮೊಬೈಲ್ ವ್ಯಾನ್‌ಗಳ ಮೂಲಕ ಶುಕ್ರವಾರದಿಂದ ಟೊಮೆಟೊ ಮಾರಾಟ ಆರಂಭಿಸಿತ್ತು. ಶನಿವಾರ ಇನ್ನೂ ಹಲವು ನಗರಗಳಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಆರಂಭಿಸಲಾಗಿದೆ.

ದೇಶದ 500ಕ್ಕೂ ಅಧಿಕ ಕಡೆಗಳಲ್ಲಿ ಪರಿಸ್ಥಿತಿಯ ಮರುಪರಿಶೀಲನೆ ನಡೆಸಿದ ಬಳಿಕ ರಿಯಾಯಿತಿ ದರವನ್ನು ₹80ಕ್ಕೆ ಇಳಿಸಲು ನಿರ್ಧರಿಸಲಾಯಿತು ಎಂದು ಕೇಂದ್ರ ಹೇಳಿದೆ.

ನಾಫೆಡ್ ಮತ್ತು ಎನ್‌ಸಿಸಿಎಫ್ ಮೂಲಕ ಭಾನುವಾರ ದೆಹಲಿ, ನೊಯಿಡಾ, ಲಖನೌ, ಕಾನ್ಪುರ, ವಾರಾಣಸಿ, ಪಟ್ನಾ, ಮುಜಫರ್‌ನಗರ ಮತ್ತು ಆರಾ ನಗರಗಳಲ್ಲಿ ಟೊಮೆಟೊ ಮಾರಾಟ ಆರಂಭಿಸಲಾಗಿದೆ. ವಿವಿಧ ಮಾರುಕಟ್ಟೆಗಳಲ್ಲಿ ಇರುವ ದರವನ್ನು ಪರಿಗಣಿಸಿ ಸೋಮವಾರದಿಂದ ಇನ್ನೂ ಹಲವು ಕಡೆಗಳಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಆರಂಭಿಸಲಾಗುವುದು ಎಂದು ಸರ್ಕಾರ ಹೇಳಿದೆ.

ಕೇಂದ್ರವು ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಆರಂಭಿಸಿದ ಬಳಿಕ ಹಲವು ಪ್ರದೇಶಗಳಲ್ಲಿ ಸಗಟು ದರದಲ್ಲಿ ಇಳಿಕೆ ಕಂಡುಬಂದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕದ ಕೋಲಾರ, ಆಂಧ್ರಪ್ರದೇಶದ ಮದನಪಲ್ಲಿ ಮತ್ತು ಮಹಾರಾಷ್ಟ್ರದ ಸಂಗನೇರಿಯಿಂದ ಟೊಮೆಟೊ ಖರೀದಿಸಲಾಗುತ್ತಿದೆ ಎಂದು ಎನ್‌ಸಿಸಿಎಫ್‌ನ ವ್ಯವಸ್ಥಾಪಕ ನಿರ್ದೇಶಕಿ ಆ್ಯನ್ಸಿ ಜೋಸೆಫ್ ಚಂದ್ರಾ ತಿಳಿಸಿದ್ದಾರೆ.

ಹೂಡಿಕೆದಾರರನ್ನು ಆಕರ್ಷಿಸಿದ ಸ್ಮಾಲ್‌ಕ್ಯಾಪ್ ಫಂಡ್

ನವದೆಹಲಿ (ಪಿಟಿಐ): ಹೂಡಿಕೆದಾರರು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಲಾರ್ಜ್‌ಕ್ಯಾಪ್ ಮ್ಯೂಚುವಲ್ ಫಂಡ್‌ಗಳಿಗಿಂತಲೂ ಹೆಚ್ಚಾಗಿ ಸ್ಮಾಲ್‌ಕ್ಯಾಪ್ ಫಂಡ್‌ಗಳತ್ತ ಗಮನ ಹರಿಸಿದ್ದು, ₹11 ಸಾವಿರ ಕೋಟಿ ಹೂಡಿಕೆ ಮಾಡಿದ್ದಾರೆ.

ಲಾರ್ಜ್ ಕ್ಯಾಪ್ ಫಂಡ್‌ಗಳಲ್ಲಿ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ₹3,360 ಕೋಟಿ ಹೂಡಿಕೆ ಆಗಿದೆ ಎಂದು ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್ಐ) ಹೇಳಿದೆ.

ಲಾರ್ಜ್‌ಕ್ಯಾಪ್ ಫಂಡ್‌ಗಳಲ್ಲಿ ಹೆಚ್ಚಿನ ಲಾಭ ಗಳಿಕೆ ಸಾಧ್ಯವಾಗದೇ ಇರುವುದು ಮಿಡ್ ಮತ್ತು ಸ್ಮಾಲ್ ಕ್ಯಾಪ್‌ಗಳಲ್ಲಿ ಕಳೆದ ಕೆಲವು ತಿಂಗಳಿನಿಂದ ಹೆಚ್ಚಿನ ಬಂಡವಾಳ ಹೂಡಿಕೆ ಆಗುತ್ತಿರುವುದಕ್ಕೆ ಕಾರಣವಾಗಿರಬಹುದು ಎಂದು ಕ್ಲೈಂಟ್ ಅಸೋಸಿಯೇಟ್ಸ್‌ನ ಸಹ ಸ್ಥಾಪಕ ಹಿಮಾಂಶು ಕೊಹ್ಲಿ ಹೇಳಿದ್ದಾರೆ.

ಸ್ಮಾಲ್‌ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವು ಜೂನ್ ತಿಂಗಳ ಅಂತ್ಯಕ್ಕೆ ₹1.7 ಲಕ್ಷ ಕೋಟಿ ಆಗಿದೆ. ಮಾರ್ಚ್ ಅಂತ್ಯಕ್ಕೆ ಇದು ₹1.33 ಲಕ್ಷ ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 28ರಷ್ಟು ಏರಿಕೆ ಕಂಡುಬಂದಿದೆ.

ಸ್ಮಾಲ್‌ಕ್ಯಾಪ್ ಫಂಡ್‌ಗಳಲ್ಲಿ ಆಟೊ ಮತ್ತು ಅದಕ್ಕೆ ಪೂರಕವಾಗಿರುವ ಉದ್ಯಮಗಳು, ಬಂಡವಾಳ ಸರಕು ಮತ್ತು ಐ.ಟಿ. ವಲಯಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು ಆಸ್ತಿ ಮೌಲ್ಯದಲ್ಲಿ ಇವುಗಳ ಪಾಲು ಶೇ 23ಕ್ಕೂ ಹೆಚ್ಚಿಗೆ ಇದೆ.

ಈಚಿನ ವರ್ಷಗಳಲ್ಲಿ ಮಲ್ಟಿ ಅಸೆಟ್ ಅಲೊಕೇಷನ್ ಫಂಡ್‌ಗಳು ರಿಟೇಲ್ ಮತ್ತು ಸಿರಿವಂತ ಹೂಡಿಕೆದಾರರನ್ನು ಹೆಚ್ಚು ಸೆಳೆಯುತ್ತಿದೆ ಎಂದು ಒಕ್ಕೂಟವು ಹೇಳಿದೆ.

ಎಸ್‌ಐಪಿ: ಲಾಭ ಹೆಚ್ಚಿಸುವುದು ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಎಸ್‌ಐಪಿ (ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್) ಭಾರತದಲ್ಲಿ ಜನಪ್ರಿಯ ಹೂಡಿಕೆ ವಿಧಾನವಾಗಿ ರೂಪುಗೊಳ್ಳುತ್ತಿದೆ. ಪ್ರತಿ ತಿಂಗಳೂ ಸಣ್ಣ ಮೊತ್ತದ ಹೂಡಿಕೆ ಮೂಲಕ ಬೆಲೆ ಏರಿಕೆಯ ಪ್ರಮಾಣವನ್ನು ಮೀರಿ ಲಾಭ ಗಳಿಸಿಕೊಳ್ಳಲು ಇರುವ ಅವಕಾಶವೇ ಎಸ್‌ಐಪಿ ಹೆಚ್ಚು ಜನಪ್ರಿಯವಾಗಲು ಕಾರಣ. ಕೆಲವು ತಂತ್ರಗಳನ್ನು ಬಳಸಿ ಎಸ್‌ಐಪಿ ಹೂಡಿಕೆಗಳ ಮೇಲಿನ ಲಾಭವನ್ನು ಮತ್ತಷ್ಟು ಹೆಚ್ಚಳ ಮಾಡಲು ಸಾಧ್ಯವೇ? ಹೀಗೊಂದು ಪ್ರಶ್ನೆ ನಿಮ್ಮಲ್ಲೂ ಮೂಡಿರಬಹುದು ಅಲ್ಲವೇ?

ಬಹುತೇಕರು ಸಾಮಾನ್ಯವಾಗಿ ತಿಂಗಳಿಗೊಮ್ಮೆ ಎಸ್‌ಐಪಿ ಹೂಡಿಕೆ ಮಾಡುತ್ತಾರೆ. ಆದರೆ ಎಷ್ಟು ದಿನಗಳಿಗೊಮ್ಮೆ ಎಸ್‌ಐಪಿ ಮಾಡಿದರೆ ಲಾಭ ಜಾಸ್ತಿ? ಪ್ರತಿದಿನ ಅಥವಾ ವಾರಕ್ಕೊಮ್ಮೆ ಎಸ್‌ಐಪಿ ಮಾಡುವುದರಿಂದ ಹೆಚ್ಚು ಲಾಭಾಂಶ ದಕ್ಕುತ್ತದೆಯೇ? ಯಾವ ದಿನಾಂಕಕ್ಕೆ ಎಸ್‌ಐಪಿ ಆರಂಭಿಸಿದರೆ ಅನುಕೂಲ? ಎಸ್‌ಐಪಿ ಹೂಡಿಕೆಯು ಒಂದೇ ಬಾರಿಗೆ ಮಾಡುವ ಹೂಡಿಕೆಗಿಂತ ಹೆಚ್ಚು ಲಾಭ ತಂದುಕೊಡುತ್ತದೆಯಾ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಯತ್ನ ನಡೆಸೋಣ.

1. ಎಷ್ಟು ದಿನಗಳಿಗೊಮ್ಮೆ ಎಸ್‌ಐಪಿ?: ಪ್ರತಿ ತಿಂಗಳು ಎಸ್‌ಐಪಿ ಮಾಡುವುದರಿಂದ ಲಾಭವಾಗುವುದಾದರೆ ಪ್ರತಿದಿನ ಅಥವಾ ವಾರಕ್ಕೊಮ್ಮೆ ಎಸ್‌ಐಪಿ ಮಾಡಿದರೆ ಹೆಚ್ಚು ಲಾಭ ಆಗಲೇಬೇಕಲ್ಲವೇ? ವಾರ ಅಥವಾ ಪ್ರತಿದಿನ ಎಸ್‌ಐಪಿ ಮಾಡುವುದರಿಂದ ಮಾರುಕಟ್ಟೆ ಸೂಚ್ಯಂಕಗಳ ಏರಿಳಿತದ ಲಾಭ ಹೆಚ್ಚು ದೊರೆತು ಮ್ಯೂಚುವಲ್ ಫಂಡ್ ಯೂನಿಟ್‌ಗಳ ಖರೀದಿಯ ಸರಾಸರಿ ಬೆಲೆ ತಗ್ಗುತ್ತದೆ ಅಲ್ಲವೇ? ಮೇಲ್ನೋಟಕ್ಕೆ ಈ ಮಾತು ನಿಜ ಅನಿಸುತ್ತದೆ. ಆದರೆ ಪ್ರಾಯೋಗಿಕವಾಗಿ ನೋಡಿದಾಗ ಪ್ರತಿ ದಿನ, ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಎಸ್‌ಐಪಿ ಮಾಡುವುದರಿಂದ ಲಾಭಾಂಶದಲ್ಲಿ ಹೆಚ್ಚು ವ್ಯತ್ಯಾಸವಾಗುವುದಿಲ್ಲ ಎಂಬುದು ಗೊತ್ತಾಗುತ್ತದೆ.

2013ರ ಏಪ್ರಿಲ್‌ನಿಂದ 2023ರ ಏಪ್ರಿಲ್‌ವರೆಗಿನ ನಿಫ್ಟಿ-50 ಸೂಚ್ಯಂಕ, ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ ಮತ್ತು ನಿಫ್ಟಿ ಸ್ಮಾಲ್ ಕ್ಯಾಪ್ 250 ಸೂಚ್ಯಂಕದ ದತ್ತಾಂಶ ನೋಡಿದಾಗ ಈ ಲೆಕ್ಕಾಚಾರ ಖಚಿತವಾಗುತ್ತದೆ. 2013ರ ಏಪ್ರಿಲ್‌ನಿಂದ 2023ರ ಏಪ್ರಿಲ್‌ವರೆಗಿನ ಅವಧಿಯಲ್ಲಿ ನಿಫ್ಟಿ-50 ಸೂಚ್ಯಂಕ ಆಧರಿಸಿ ಪ್ರತಿದಿನ ಎಸ್‌ಐಪಿ ಮಾಡಿದ್ದರೆ ನಿಮಗೆ ಶೇ 12.44ರಷ್ಟು ಲಾಭ ಸಿಗುತ್ತಿತ್ತು. ವಾರದ ಆಧಾರದಲ್ಲಿ ಎಸ್‌ಐಪಿ ಮಾಡಿದ್ದರೆ ಶೇ 12.45ರಷ್ಟು ಲಾಭ ಲಭಿಸುತ್ತಿತ್ತು.

ತಿಂಗಳ ಲೆಕ್ಕಾಚಾರದಲ್ಲಿ ಎಸ್‌ಐಪಿ ಮಾಡಿದ್ದರೆ ಶೇ 12.44ರಷ್ಟು ಲಾಭ ದಕ್ಕುತ್ತಿತ್ತು. ಇನ್ನು 2013ರ ಏಪ್ರಿಲ್‌ನಿಂದ 2023ರ ಏಪ್ರಿಲ್‌ವರೆಗಿನ ನಿಫ್ಟಿ ಮಿಡ್ ಕ್ಯಾಪ್ 150 ಮತ್ತು ನಿಫ್ಟಿ ಸ್ಮಾಲ್ ಕ್ಯಾಪ್ 250 ಸೂಚ್ಯಂಕ ನೋಡಿದಾಗಲೂ ದಿನ, ವಾರ ಅಥವಾ ಮಾಸಿಕ ಎಸ್‌ಐಪಿಗಳ ಲಾಭದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ ಎನ್ನುವುದು ಪಕ್ಕಾ ಆಗುತ್ತದೆ. ಇದಲ್ಲದೆ ಬಹುತೇಕ ಹೂಡಿಕೆ ಆ್ಯಪ್‌ಗಳು ಪ್ರತಿದಿನ ಅಥವಾ ವಾರಕ್ಕೊಮ್ಮೆ ಎಸ್‌ಐಪಿ ಮಾಡಲು ಅವಕಾಶ ಕೊಡುವುದಿಲ್ಲ. ಈ ರೀತಿ ಹೂಡಿಕೆ ಮಾಡಿದ ಹಣವನ್ನು ಹಿಂಪಡೆಯುವಾಗ ತೆರಿಗೆ ಲೆಕ್ಕಾಚಾರವೂ ಕಷ್ಟ. ಹಾಗಾಗಿ ತಿಂಗಳ ಎಸ್‌ಐಪಿಗೆ ಅಂಟಿಕೊಳ್ಳುವುದು ಹೆಚ್ಚು ಸೂಕ್ತ.

2. ಯಾವ ದಿನಾಂಕ ಸೂಕ್ತ?: ಬಹುತೇಕರು ಸಂಬಳ ಪಡೆದ ಮೊದಲ ವಾರದಲ್ಲಿ ಎಸ್‌ಐಪಿ ಮಾಡುತ್ತಾರೆ. ಬೇರೆಯ ದಿನ ಅಂದರೆ, ತಿಂಗಳ ಮಧ್ಯಭಾಗದಲ್ಲಿ ಅಥವಾ ಕೊನೆಯಲ್ಲಿ ಎಸ್‌ಐಪಿ ಮಾಡಿದರೆ ಹೆಚ್ಚು ಲಾಭ ಸಿಗುವುದೇ ಎನ್ನುವ ಪ್ರಶ್ನೆ ನಿಮ್ಮಲ್ಲಿರಬಹುದು. ಆದರೆ 2013ರ ಮಾರ್ಚ್‌ನಿಂದ 2023ರ ಮಾರ್ಚ್‌ವರೆಗಿನ ಅಂಕಿ–ಅಂಶ ನೋಡಿದಾಗ ಯಾವ ದಿನ ಎಸ್‌ಐಪಿ ಮಾಡಿದರೂ ಹೆಚ್ಚು ವ್ಯತ್ಯಾಸವಾಗುವುದಿಲ್ಲ ಎನ್ನುವುದು ಖಚಿತವಾಗುತ್ತದೆ. ಹಾಗಾಗಿ ಯಾವ ದಿನ ಎಸ್‌ಐಪಿ ಮಾಡಬೇಕು ಎನ್ನುವುದನ್ನು ನಿಮ್ಮ ಅಗತ್ಯ ಮತ್ತು ಅನುಕೂಲಕ್ಕೆ ತಕ್ಕಂತೆ ತೀರ್ಮಾನಿಸುವುದು ಉತ್ತಮ.

3. ಮಾರುಕಟ್ಟೆ ಕುಸಿದಾಗ?: ಮಾರುಕಟ್ಟೆ ಕುಸಿತ ಕಂಡಾಗ ಮಾಡುವ ಎಸ್‌ಐಪಿ ಹೆಚ್ಚು ಲಾಭ ಕೊಡುತ್ತದೆಯೇ ಎನ್ನುವ ಪ್ರಶ್ನೆ ನಿಮ್ಮಲ್ಲಿರಬಹುದು. ಮಾರುಕಟ್ಟೆ ಕುಸಿದಾಗ ಮಾಡುವ ಎಸ್‌ಐಪಿ ದೀರ್ಘಾವಧಿಯಲ್ಲಿ ಕೊಂಚ ಜಾಸ್ತಿ ಲಾಭ ತಂದುಕೊಡುತ್ತದೆ. ಆದರೆ, ಮಾರುಕಟ್ಟೆ ಕುಸಿದಾಗ ಮಾತ್ರ ಹೂಡಿಕೆ ಮಾಡುತ್ತೇವೆ ಎನ್ನುವುದಕ್ಕಿಂತ ಎಸ್‌ಐಪಿ ಜೊತೆಗೆ ಮಾರುಕಟ್ಟೆ ಕುಸಿದಾಗ ಹೆಚ್ಚುವರಿ ಹೂಡಿಕೆ ಮಾಡಿದರೆ ಲಾಭ ಜಾಸ್ತಿ.

4. ಎಸ್‌ಐಪಿ ಅಥವಾ ಒಂದೇ ಬಾರಿಗೆ ಹೂಡಿಕೆ – ಯಾವುದು ಲಾಭ?: ಸಾಮಾನ್ಯವಾಗಿ ಎಸ್‌ಐಪಿ ಹೂಡಿಕೆಯಿಂದ ಮಾತ್ರ ಹೆಚ್ಚು ಲಾಭ ಸಿಗುತ್ತದೆ ಎಂದು ಭಾವಿಸಿರುತ್ತೇವೆ. ಆದರೆ ವಾಸ್ತವದಲ್ಲಿ ಎಸ್‌ಐಪಿ ಅಥವಾ ಒಂದೇ ಬಾರಿಗೆ ಹೂಡಿಕೆ ನಡುವೆ ಹೆಚ್ಚು ಲಾಭವನ್ನು ಯಾವುದು ತಂದುಕೊಡುತ್ತದೆ ಎಂಬುದು ಮಾರುಕಟ್ಟೆಯ ಏರಿಳಿತದ ಸ್ಥಿತಿಯನ್ನು ಅವಲಂಬಿಸಿರುತ್ತದೆ. ನಿಯಮಿತವಾಗಿ ಎಸ್‌ಐಪಿ ಮಾಡುವುದರ ಜೊತೆಗೆ ಮಾರುಕಟ್ಟೆ ಹೆಚ್ಚು ಕುಸಿತ ಕಂಡಾಗ ಹೆಚ್ಚುವರಿಯಾಗಿ ಹೂಡಿಕೆ ಮಾಡಿದಾಗ ದೀರ್ಘಾವಧಿಯಲ್ಲಿ ಹೆಚ್ಚು ಲಾಭ ಸಿಗುತ್ತದೆ. ಹಾಗಾಗಿ ಎರಡರ ಮಿಶ್ರಣ ಮಾಡುವುದು ಒಳ್ಳೆಯ ಹೂಡಿಕೆ ತಂತ್ರಗಾರಿಕೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ದಾಖಲೆ ಮಟ್ಟಕ್ಕೆ ಏರಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ 3ನೇ ವಾರವೂ ಗಳಿಕೆ ಕಂಡಿವೆ. ಜುಲೈ 14ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ದಾಖಲೆಯ ಮಟ್ಟಕ್ಕೆ ಏರಿಕೆ ಕಂಡಿವೆ. 66,060 ಅಂಶಗಳಿಗೆ ಜಿಗಿದಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.19ರಷ್ಟು ಗಳಿಸಿಕೊಂಡಿದೆ. 19,564 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.20ರಷ್ಟು ಹೆಚ್ಚಳ ದಾಖಲಿಸಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಷೇರು ಖರೀದಿ ಭರಾಟೆ, ಮುಂಗಾರು ಚೇತರಿಕೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 5ರಷ್ಟು, ಲೋಹ ಸೂಚ್ಯಂಕ ಶೇ 3.2ರಷ್ಟು ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1.7ರಷ್ಟು ಜಿಗಿದಿವೆ. ಪವರ್ ಸೂಚ್ಯಂಕ ಶೇ 2ರಷ್ಟು ಕುಸಿದಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,417.78 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹1,251.29 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಜೊಮಾಟೊ, ಇನ್ಫೊ ಎಡ್ಜ್ ಇಂಡಿಯಾ, ಟೆಕ್ ಮಹೀಂದ್ರ, ಹಿಂಡಾಲ್ಕೊ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಸ್ಟಾರ್ ಹೆಲ್ತ್, ಐಷರ್ ಮೋಟರ್ಸ್ ಗಳಿಕೆ ಕಂಡಿವೆ. ಪವರ್ ಗ್ರಿಡ್, ಬ್ಯಾಂಕ್ ಆಫ್ ಬರೋಡಾ, ಬಾಷ್, ಬಂಧನ್ ಬ್ಯಾಂಕ್ ಮತ್ತು ಯುಪಿಎಲ್ ಕುಸಿದಿವೆ.

ಮುನ್ನೋಟ: ಈ ವಾರ ಎಚ್‌ಡಿಎಫ್‌ಸಿ ಬ್ಯಾಂಕ್, ಹ್ಯಾತ್ ವೇ, ಟಾಟಾ ಎಲೆಕ್ಸಿ, ಐಸಿಐಸಿಐ ಲೊಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿ., ಐಸಿಐಸಿಐ ಪ್ರೂಡೆನ್ಷಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ, ಇಂಡಸ್ ಇಂಡ್ ಬ್ಯಾಂಕ್, ಪಾಲಿಕ್ಯಾಬ್, ಹ್ಯಾಟ್‌ಸನ್, ಹ್ಯಾವೆಲ್ಸ್, ಹಿಂದೂಸ್ಥಾನ್ ಯುನಿಲಿವರ್, ಯುನಿಯನ್ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಐಸಿಐಸಿಐ ಬ್ಯಾಂಕ್, ಕೋಟಕ್ ಬ್ಯಾಂಕ್ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಜಾಹೀರಾತು ಸಿಗದೆ ಆದಾಯ ಕುಸಿತ: ಮಸ್ಕ್

ಸ್ಯಾನ್ ಫ್ರಾನ್ಸಿಸ್ಕೊ (ಅಮೆರಿಕ) (ಎಪಿ): 'ಜಾಹೀರಾತು ಬರುವುದು ಅರ್ಧದಷ್ಟು ಕಡಿಮೆಯಾಗಿ ಸಂಸ್ಥೆಯು ಈಗಲೂ ಆದಾಯ ಕಳೆದುಕೊಳ್ಳುತ್ತಿದೆ. ಭಾರಿ ಸಾಲದಲ್ಲಿ ಮುಳುಗಿದೆ' ಎಂದು ಸಾಮಾಜಿಕ ಮಾಧ್ಯಮ ಟ್ವಿಟರ್‌ನ ಮುಖ್ಯಸ್ಥ ಎಲಾನ್ ಮಸ್ಕ್ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಬೇರೆ ಯಾವುದೇ ಕೆಲಸ ಮಾಡುವುದಕ್ಕೂ ಮೊದಲು ಕಂಪನಿಗೆ ಹಣದ ಹರಿವು ಉತ್ತಮವಾಗಿರುವುದು ಅಗತ್ಯ' ಎಂದಿದ್ದಾರೆ.

ಕಂಪನಿಯ ವ್ಯವಹಾರವನ್ನು ಉತ್ತಮಗೊಳಿಸುವ ಸಂಬಂಧ ಸಲಹೆ ನೀಡುವುದಾಗಿ ಮುಂದೆ ಬಂದಿದ್ದವರಿಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಟ್ವಿಟರ್ ಅನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ನಂತರ ಜಾಹೀರಾತು ಮೂಲದ ಆದಾಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಮಸ್ಕ್ ಪ್ರಯತ್ನ ಮುಂದುವರಿಸಿದ್ದಾರೆ. ಕಂಪನಿಯ ಉನ್ನತ ಸ್ಥಾನದಲ್ಲಿ ಕೆಲ ಅಧಿಕಾರಿಗಳ ವಜಾ, ಕೆಲ ಗಣ್ಯರ ಖಾತೆಗಳ ಮೇಲಿದ್ದ ನಿಷೇಧ ತೆರವುಗೊಳಿಸುವಂತಹ ಕ್ರಮಗಳನ್ನೂ ಕೈಗೊಂಡಿದ್ದಾರೆ.

ವೈಯಕ್ತಿಕ ಸಾಲ ಪಡೆಯುವಿಕೆ ಕೂಡ ಹೆಚ್ಚಳ: ಆರ್‌ಬಿಐ ಮಾಹಿತಿ

ದಾಖಲೆ ಮಟ್ಟಕ್ಕೆ ಕ್ರೆಡಿಟ್ ಕಾರ್ಡ್ ಬಳಕೆ

ಮುಂಬೈ (ಪಿಟಿಐ): ದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವೆಚ್ಚಗಳು ಮೇ ತಿಂಗಳಲ್ಲಿ ₹1.4 ಲಕ್ಷ ಕೋಟಿಗೆ ತಲುಪಿವೆ. ಇದು ದಾಖಲೆಯ ಮಟ್ಟ. ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ದಾಖಲೆಗಳು ಇದನ್ನು ಹೇಳುತ್ತಿವೆ.

ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವೆಚ್ಚಗಳ ಮೊತ್ತವು ಕಳೆದ ಹಣಕಾಸು ವರ್ಷದಲ್ಲಿ ಬಹಳ ಏರಿಕೆಯನ್ನೂ ಕಾಣುತ್ತಿರಲಿಲ್ಲ, ತಗ್ಗುತ್ತಲೂ ಇರಲಿಲ್ಲ. ಆದರೆ ಈ ವರ್ಷದಲ್ಲಿ ತಿಂಗಳಿನಿಂದ ತಿಂಗಳಿಗೆ ಶೇಕಡ 5ರಷ್ಟು ಏರಿಕೆ ಕಾಣುತ್ತಿದೆ.

ಚಾಲ್ತಿಯಲ್ಲಿ ಇರುವ ಕ್ರೆಡಿಟ್ ಕಾರ್ಡ್‌ಗಳ ಸಂಖ್ಯೆಯು ಜನವರಿಯ ನಂತರದಲ್ಲಿ 50 ಲಕ್ಷಕ್ಕಿಂತ ಹೆಚ್ಚಿನ ಏರಿಕೆ ಕಂಡಿದ್ದು, 8.74 ಕೋಟಿಗೆ ತಲುಪಿದೆ. ಇದು ಕೂಡ ದಾಖಲೆಯ ಮಟ್ಟ. ಜನವರಿಯಲ್ಲಿ 8.24 ಕೋಟಿ ಕ್ರೆಡಿಟ್ ಕಾರ್ಡ್‌ಗಳು ಬಳಕೆಯಲ್ಲಿ ಇದ್ದವು.



2022–23ನೆಯ ಹಣಕಾಸು ವರ್ಷದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಮಾಡಿದ ವೆಚ್ಚಗಳ ಮೊತ್ತವು ₹1.10 ಲಕ್ಷ ಕೋಟಿಯಿಂದ ₹1.20 ಲಕ್ಷ ಕೋಟಿಯ ನಡುವೆ ಇತ್ತು. ಆದರೆ, ಮೇ ತಿಂಗಳಲ್ಲಿ ದಾಖಲೆಯ ₹1.4 ಲಕ್ಷ ಕೋಟಿಗೆ ಹೆಚ್ಚಾಗಿದೆ. ಪ್ರತಿ ಕಾರ್ಡ್ ಬಳಸಿ ಸರಾಸರಿ ₹16,144ರಷ್ಟು ಖರ್ಚು ಮಾಡಲಾಗಿದೆ.

ಕ್ರೆಡಿಟ್ ಕಾರ್ಡ್ ಬಿಲ್‌ಗಳನ್ನು 90 ದಿನಗಳ ನಂತರವೂ ಮರುಪಾವತಿ ಮಾಡದೆ ಇರುವ ಪ್ರಮಾಣವು 2023ರ ಮಾರ್ಚ್ ಅಂತ್ಯಕ್ಕೆ ಶೇ 0.66ರಷ್ಟು ಹೆಚ್ಚಾಗಿದ್ದು ಶೇ 2.94ಕ್ಕೆ ತಲುಪಿದೆ ಎಂದು ಸಾಲಗಳ ಮೇಲೆ ನಿಗಾ ಇರಿಸುವ ಟ್ರಾನ್ಸ್‌ಯೂನಿಯನ್ ಸಿಬಿಲ್ ಹೇಳಿದೆ. ಮರುಪಾವತಿ ಬಾಕಿ ಮೊತ್ತವು ಹೆಚ್ಚುತ್ತ ಇರುವುದು ವೈಯಕ್ತಿಕ ಮಟ್ಟದಲ್ಲಿ ಇರುವ ಹಣಕಾಸಿನ ಒತ್ತಡವನ್ನು ಸೂಚಿಸುತ್ತಿದೆ. ಕ್ರೆಡಿಟ್ ಕಾರ್ಡ್ ಹೊಂದುವುದು ಹಾಗೂ ವೈಯಕ್ತಿಕ ಸಾಲ ಪಡೆಯುವುದು ಅತ್ಯಂತ ವೇಗದ ಏರಿಕೆ ಕಂಡಿದೆ ಎಂದು ಕೂಡ ಟ್ರಾನ್ಸ್‌ಯೂನಿಯನ್ ಸಿಬಿಲ್ ಹೇಳಿದೆ.

ಮ್ಯಾನ್ಮಾರ್– ಥಾಯ್ಲೆಂಡ್ ವಿದೇಶಾಂಗ ಸಚಿವರೊಂದಿಗೆ ಚರ್ಚೆ

ಹೆದ್ದಾರಿ ಪೂರ್ಣಕ್ಕೆ ಜೈಶಂಕರ್ ಪ್ರತಿಪಾದನೆ

ಬ್ಯಾಂಕಾಕ್ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಭಾನುವಾರ ಮ್ಯಾನ್ಮಾರ್ ವಿದೇಶಾಂಗ ಸಚಿವ ಥಾನ್ ಸ್ವೆ ಅವರನ್ನು ಭೇಟಿ ಮಾಡಿ, ಭಾರತ– ಮ್ಯಾನ್ಮಾರ್– ಥಾಯ್ಲೆಂಡ್ ನಡುವಿನ ತ್ರಿರಾಷ್ಟ್ರ ಹೆದ್ದಾರಿ ಪೂರ್ಣಗೊಳಿಸುವುದು, ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ಸ್ಥಿರತೆ ಖಾತ್ರಿಪಡಿಸುವ ಪ್ರಾಮುಖ್ಯತೆಯನ್ನು ಒತ್ತಿಹೇಳಿದ್ದಾರೆ.

ಅಧಿಕೃತ ಭೇಟಿಗಾಗಿ ಇಂಡೋನೇಷ್ಯಾದಿಂದ ಶನಿವಾರ ಇಲ್ಲಿಗೆ ಬಂದ ಜೈಶಂಕರ್ ಅವರು, ಥಾಯ್ಲೆಂಡ್ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಡಾನ್ ಪ್ರಮುದ್ವಿನಾಯ್ ಅವರನ್ನು ಭೇಟಿಯಾದರು.

'ಇತ್ತೀಚಿನ ದಿನಗಳಲ್ಲಿ ಸವಾಲಾಗಿರುವ ಯೋಜನೆಗಳನ್ನು, ವಿಶೇಷವಾಗಿ ಭಾರತ–ಮ್ಯಾನ್ಮಾರ್–ಥಾಯ್ಲೆಂಡ್ ಹೆದ್ದಾರಿಯನ್ನು ತ್ವರಿತಗೊಳಿಸಬೇಕಾದ ಪ್ರಾಮುಖ್ಯತೆಯನ್ನು ಥಾನ್ ಸ್ವೆ ಅವರೊಂದಿಗಿನ ಭೇಟಿಯ ವೇಳೆ ಒತ್ತಿಹೇಳಲಾಯಿತು' ಎಂದು ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಮ್ಯಾನ್ಮಾರ್‌ನಲ್ಲಿನ ಪರಿಸ್ಥಿತಿಯಿಂದಾಗಿ ಭಾರತ–ಮ್ಯಾನ್ಮಾರ್– ಥಾಯ್ಲೆಂಡ್ ಹೆದ್ದಾರಿಯು 'ತುಂಬಾ ಕಷ್ಟಕರ ಯೋಜನೆಯಾಗಿದೆ' ಮತ್ತು ಅದನ್ನು ಪುನರಾರಂಭಿಸಲು ಮಾರ್ಗಗಳನ್ನು ಕಂಡುಕೊಳ್ಳುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಜೈಶಂಕರ್ ಶನಿವಾರ ಹೇಳಿದ್ದರು.

2019ರ ಡಿಸೆಂಬರ್‌ನಲ್ಲೇ ಈ ಯೋಜನೆ ಪೂರ್ಣಗೊಂಡು ಕಾರ್ಯಾರಂಭಿಸಬೇಕಿತ್ತು. ಮಣಿಪುರದ ಮೋರೆಯನ್ನು ಮ್ಯಾನ್ಮಾರ್ ಮೂಲಕ ಥಾಯ್ಲೆಂಡ್‌ನ ಮಾಯಿ ಸೋಟ್‌ನೊಂದಿಗೆ ಸಂಪರ್ಕಿಸುವ ಆಯಕಟ್ಟಿನ ಹೆದ್ದಾರಿ ಯೋಜನೆ ವಿಳಂಬವಾಗಿದ್ದು, ಕಾಮಗಾರಿ ಶೇ 70ರಷ್ಟು ಪೂರ್ಣಗೊಂಡಿದೆ.

ಭಾರತ, ಥಾಯ್ಲೆಂಡ್ ಮತ್ತು ಮ್ಯಾನ್ಮಾರ್ ಬಾಂಧವ್ಯದಡಿ ಸುಮಾರು 1,400 ಕಿ.ಮೀ ಉದ್ದದ ಹೆದ್ದಾರಿ ನಿರ್ಮಾಣ ಯೋಜನೆ ಕೈಗೆತ್ತಿಕೊಂಡಿವೆ. ಮಹತ್ವಾಕಾಂಕ್ಷೆಯ ಈ ಹೆದ್ದಾರಿ ಭಾರತವನ್ನು ಆಗ್ನೇಯ ಏಷ್ಯಾದೊಂದಿಗೆ ಸಂಪರ್ಕಿಸಲಿದೆ. ಮೂರು ದೇಶಗಳ ನಡುವೆ ವಾಣಿಜ್ಯ– ವ್ಯಾಪಾರ, ಆರೋಗ್ಯ, ಶಿಕ್ಷಣ ಮತ್ತು ಪ್ರವಾಸೋದ್ಯಮ ಸಂಬಂಧಗಳನ್ನು ಇದು ಬಲಪಡಿಸುವ ಉದ್ದೇಶ ಹೊಂದಿದೆ.

ಬಿಮ್‌ಸ್ಟೆಕ್ (ಬಿಐಎಂಎಸ್‌ಟಿಇಸಿ) ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿರುವ ಎಸ್. ಜೈಶಂಕರ್, ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಮೆಕಾಂಗ್ ಗಂಗಾ ಸಹಕಾರ ಕಾರ್ಯವಿಧಾನದ 12ನೇ ವಿದೇಶಾಂಗ ಸಚಿವರ ಸಭೆಯಲ್ಲೂ ಭಾಗವಹಿಸಲಿದ್ದಾರೆ.

ಬ್ರಿಟನ್: ಸಚಿವ ಸ್ಥಾನ ತೊರೆಯಲು ವ್ಯಾಲೆಸ್ ನಿರ್ಧಾರ

ಲಂಡನ್ (ಪಿಟಿಐ): ಬ್ರಿಟನ್‌ನ ರಕ್ಷಣಾ ಸಚಿವ ಸ್ಥಾನ ತೊರೆಯುವುದಾಗಿ ಬೆನ್ ವ್ಯಾಲೆಸ್ ಭಾನುವಾರ ಘೋಷಿಸಿದ್ದಾರೆ.

ಸಂಪುಟ ಪುನರ್‌ರಚನೆ ನಂತರ ಸಚಿವ ಸ್ಥಾನದಲ್ಲಿ ಮುಂದುವರಿಯದಿರಲು ನಿರ್ಧರಿಸಿರುವುದಾಗಿ ಅವರು ಹೇಳಿದ್ದಾರೆ. ಇನ್ನು ಕೆಲವೇ ತಿಂಗಳಲ್ಲಿ ರಿಷಿ ಸುನಕ್ ನೇತೃತ್ವದ ಸರ್ಕಾರದ ಸಂಪುಟ ಪುನರ್‌ರಚನೆ ನಡೆಯಲಿದೆ. ಅದಕ್ಕೂ ಮೊದಲೇ ವ್ಯಾಲೆಸ್ ಈ ನಿರ್ಧಾರ ಕೈಗೊಂಡಿದ್ದಾರೆ.

ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲೂ ಸ್ಪರ್ಧಿಸದಿರಲು ಕನ್ಸರ್ವೇಟಿವ್ ಪಕ್ಷದ ಸದಸ್ಯ ವ್ಯಾಲೆಸ್ ನಿರ್ಧರಿಸಿದ್ದಾರೆ.

ಕರಾಚಿ: ಹಿಂದೂ ದೇಗುಲ ನೆಲಸಮ

ಕರಾಚಿ (ಪಿಟಿಐ): ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ರಾಜಧಾನಿ ಕರಾಚಿಯಲ್ಲಿ ಅಪಾಯಕಾರಿ ಕಟ್ಟಡ ಎಂದು ಗುರುತಿಸಲಾದ, ಸುಮಾರು 150 ವರ್ಷಗಳಷ್ಟು ಹಳೆಯದಾದ ಹಿಂದೂ ದೇವಾಲಯವೊಂದನ್ನು ನೆಲಸಮಗೊಳಿಸಲಾಗಿದೆ. ಇದು ಇಲ್ಲಿರುವ ಹಿಂದೂಗಳಿಗೆ ಆಘಾತವನ್ನುಂಟು ಮಾಡಿದೆ.

ಶುಕ್ರವಾರ ರಾತ್ರಿ ಪೊಲೀಸರ ಬಿಗಿ ಭದ್ರತೆಯೊಂದಿಗೆ ನಗರದ ಸೋಲ್ಜರ್ ಬಜಾರ್‌ನಲ್ಲಿನ ಮಾರಿ ಮಾತಾ ದೇವಾಲಯವನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಲಾಗಿದೆ.

'150 ವರ್ಷಗಳ ಹಿಂದೆ ಈ ದೇಗುಲ ನಿರ್ಮಿಸಲಾಗಿತ್ತು. ಕೆಲ ವರ್ಷಗಳಿಂದಲೂ ಈ ಜಾಗದ ಮೇಲೆ ಭೂಗಳ್ಳರು, ಡೆವಲಪರ್‌ಗಳ ಕಣ್ಣು ಬಿದ್ದಿತ್ತು. ಇದೀಗ ದೇವಾಲಯದ ಹೊರಗೋಡೆ, ಪ್ರವೇಶದ್ವಾರವನ್ನು ಬಿಟ್ಟು ಉಳಿದಿದ್ದೆಲ್ಲವನ್ನೂ ನೆಲಸಮಗೊಳಿಸಿದ್ದಾರೆ. ಸ್ಥಳೀಯರಿಗೆ ಅಧಿಕಾರಿಗಳು ಮಾಹಿತಿಯನ್ನೇ ನೀಡಿಲ್ಲ' ಎಂದು ಈ ಪ್ರದೇಶದಲ್ಲಿನ ಹಿಂದೂ ದೇವಾಲಯಗಳ ಮೇಲ್ವಿಚಾರಣೆ ನೋಡಿಕೊಳ್ಳುವ ರಾಮ್ ನಾಥ್ ಮಿಶ್ರಾ ಮಹಾರಾಜ್ ದೂರಿದರು.

'ಅಪಾಯಕಾರಿ ಕಟ್ಟಡ ಎಂದು ಗುರುತಿಸಿದ್ದರಿಂದ ದೇವಾಲಯವನ್ನು ನೆಲಸಮಗೊಳಿಸಲಾಗಿದೆ. ಮದ್ರಾಸಿ ಹಿಂದೂ ಸಮುದಾಯ ಇದರ ನಿರ್ವಹಣೆ ನೋಡಿಕೊಳ್ಳುತ್ತಿದೆ. ಸದ್ಯ ಸಣ್ಣ ಕೋಣೆಯೊಂದಕ್ಕೆ ದೇವರ ವಿಗ್ರಹ ಸ್ಥಳಾಂತರಿಸಲಾಗಿದೆ. ಶೀಘ್ರದಲ್ಲೇ ನವೀಕರಣ ಕಾಮಗಾರಿ ನಡೆಯಲಿದೆ' ಎಂದು ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ಈ ವಿಷಯದತ್ತ ತುರ್ತಾಗಿ ಗಮನಹರಿಸುವಂತೆ ಹಿಂದೂ ಸಮುದಾಯವು ಸಿಂಧ್ ಪ್ರಾಂತ್ಯದ ಮುಖ್ಯಮಂತ್ರಿ ಸೈಯದ್ ಮುರಾದ್ ಅಲಿ ಶಾ ಮತ್ತು ಐಜಿಪಿಗೆ ಮನವಿ ಮಾಡಿದೆ. ಕರಾಚಿಯಲ್ಲಿ ಹಲವು ಪ್ರಾಚೀನ ಹಿಂದೂ ದೇವಾಲಯಗಳಿವೆ.

ಸಂಕ್ಷಿಪ್ತ ಸುದ್ದಿ

'ರಷ್ಯಾ ಬಳಿ ಸಾಕಷ್ಟು ಕ್ಲಸ್ಟರ್ ಬಾಂಬ್ ಸಂಗ್ರಹವಿದೆ'

ಕೀವ್ (ಎಪಿ): ರಷ್ಯಾದ ಮೇಲೆ ಪ್ರತಿದಾಳಿ ನಡೆಸಲು ಅಮೆರಿಕದಿಂದ ಕ್ಲಸ್ಟರ್ ಬಾಂಬುಗಳನ್ನು ಉಕ್ರೇನ್ ಪಡೆದುಕೊಂಡಿರುವ ಬೆನ್ನಲ್ಲೇ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, 'ರಷ್ಯಾವು ಕ್ಲಸ್ಟರ್ ಬಾಂಬುಗಳ ಸಾಕಷ್ಟು ದಾಸ್ತಾನು ಹೊಂದಿದೆ. ಉಕ್ರೇನ್ ವಿವಾದಿತ ಶಸ್ತ್ರಾಸ್ತ್ರಗಳನ್ನು ಬಳಸಿದರೆ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡುವ ಹಕ್ಕನ್ನು ಕಾಯ್ದಿರಿಸಿದೆ' ಎಂದು ಎಚ್ಚರಿಸಿದ್ದಾರೆ.

ಪುಟಿನ್ ಅವರು ರೊಸ್ಸಿಯಾ ಟಿ.ವಿಗೆ ನೀಡಿರುವ ಸಂದರ್ಶನದಲ್ಲಿ ಈ ಎಚ್ಚರಿಕೆ ನೀಡಿದ್ದು, ವರದಿಗಾರ ಪಾವೆಲ್ ಜರುಬಿನ್ ಭಾನುವಾರ ರಾತ್ರಿ ನಿಗದಿತ ಪ್ರಸಾರಕ್ಕೆ ಮುಂಚಿತವಾಗಿ ಟೆಲಿಗ್ರಾಮ್ ಚಾನೆಲ್‌ನಲ್ಲಿ ಸಂದರ್ಶನದ ಆಯ್ದ ಭಾಗಗಳನ್ನು ಪ್ರಕಟಿಸಿದ್ದಾರೆ.

ಇಸ್ರೇಲ್ ಪ್ರಧಾನಿ ಆರೋಗ್ಯ ಚೇತರಿಕೆ

ಟೆಲ್ ಅವಿವ್ (ಎಪಿ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರು ಅನಾರೋಗ್ಯ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದು, ಭಾನುವಾರ ಆರೋಗ್ಯ ತಪಾಸಣೆಗೆ ಒಳಗಾದರು. ಸದ್ಯ ಅವರ ಆರೋಗ್ಯ ಸ್ಥಿರವಾಗಿದ್ದು, ಶೀಘ್ರವೇ ಆಸ್ಪತ್ರೆಯಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಲಾಸ್ಕಾದಲ್ಲಿ ಭೂಕಂಪ: ಸುನಾಮಿ ಎಚ್ಚರಿಕೆ ರದ್ದು

ವಾಷಿಂಗ್ಟನ್ (ಎಪಿ): ಅಮೆರಿಕದ ಅಲಾಸ್ಕಾದಲ್ಲಿ ಶನಿವಾರ ರಾತ್ರಿ ಸಂಭವಿಸಿದ 7.2ರ ತೀವ್ರತೆಯ ಪ್ರಬಲ ಭೂಕಂಪನದಿಂದಾಗಿ, ಸುನಾಮಿ ಭೀತಿ ಎದುರಾಗಿತ್ತು. ಆದರೆ, ಕೆಲವೇ ಗಂಟೆಗಳಲ್ಲಿ ಸುನಾಮಿ ಎಚ್ಚರಿಕೆಯನ್ನು ಹಿಂಪಡೆಯಿತು. ಅಲಾಸ್ಕಾದ ಸೌತ್ ಸ್ಯಾಂಡ್ ಪಾಯಿಂಟ್‌ನ ದಕ್ಷಿಣಕ್ಕೆ 21 ಕಿ.ಮೀ ಆಳದಲ್ಲಿ ಭೂಕಂಪ ಉಂಟಾಗಿತ್ತು. ಅಲಾಸ್ಕಾ ದ್ವೀಪಗಳು, ಪೆನಿನ್ಸುಲಾ ಮತ್ತು ಕೂಕ್ ಇನ್ಲೆಟ್‌ಗಳಲ್ಲಿ ಭೂಮಿ ಕಂಪಿಸಿದ ಅನುಭವವಾಗಿತ್ತು.

ದ. ಕೊರಿಯಾದಲ್ಲಿ ಪ್ರವಾಹ: 9 ಶವ ಪತ್ತೆ

ಸೋಲ್ (ದಕ್ಷಿಣ ಕೊರಿಯಾ) (ಎಪಿ): ಭಾರಿ ಮಳೆಯಿಂದಾಗಿ ದಕ್ಷಿಣ ಕೊರಿಯಾದಲ್ಲಿ ಪ್ರವಾಹ ಉಂಟಾಗಿದ್ದು, ರಕ್ಷಣಾ ಪಡೆ ಸಿಬ್ಬಂದಿಯು ರಸ್ತೆ ಸುರಂಗ ಮಾರ್ಗವೊಂದರಲ್ಲಿ ಸಿಲುಕಿದ್ದ 15 ವಾಹನಗಳಿಂದ ಒಂಬತ್ತು ಮಂದಿಯ ಶವಗಳನ್ನು ಹೊರತೆಗೆದಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.08.2023 ರಿಂದ 13 ದಿನಗಳ ಯುರೋಪ್ ಪ್ರವಾಸ. 23.07.2023 28.08.2023 ರಿಂದ 7/11 ದಿನಗಳ ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 24.09.2023 ರಿಂದ 5 ದಿನಗಳ ದುಬೈ,ಅಬುದಾಬಿ,ಶಾರ್ಜಾ (ಆಫರ್ ದರಗಳಲ್ಲಿ) 28.07.2023 ರಿಂದ 11 ದಿನಗಳ ಗುಜರಾತ್,ಉಜ್ಜಯಿನಿ. 03.09.2023 20.09.2023 ರಿಂದ 8/11/12 ದಿನಗಳ ಕಾಶಿ,ಗಯಾ/ನೇಪಾಳ. 20.09.2023 06.10.2023 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 04.10.2023 16.10.2023 ರಿಂದ 12 ದಿನಗಳ ಕಾಶ್ಮೀರ್,ವೈಷ್ಣೋದೇವಿ ಹಾಗೂ ಇತರ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಭಾರತಪರಂಪರ ದರ್ಶನ 25.7.2023 7ದಿನ ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನ ಚಾರ್`ಧಾಮ್ ಯಾತ್ರೆ. 11ದಿನ ಗುಜರಾತ್ 9448792891.

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ A/C ಬಸ್ 23.08.2023 06.09.2023 04.10.2023 ಕಾಶಿ,ಬುದ್ಧಗಯಾ,ಅಲಹಾಬಾದ್. 02.09.2023 20.09.2023 15.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ದೆಹಲಿ,ಜೈಪುರ್ ಆಗ್ರಾ,ಹರಿದ್ವಾರ್ ಇತ್ಯಾದಿ. 29.09.2023 ಸೋಮನಾಥ್,ದ್ವಾರಕಾ ಓಂಕಾರೇಶ್ವರ ಮಹಾಕಾಳೇಶ್ವರ. ನಿಷ್ಕಳಂಕ ಮಹಾದೇವ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 9686708171

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ತಕ್ಷಣ ಬೇಕಾಗಿದ್ದಾರೆ ಕಂಪನಿ ಆಫೀಸ್‌ಗಳಿಗೆ, 5ನೇ, 10ನೇ,ಪಿಯುಸಿ, ಐಟಿಐಡಿಗ್ರಿ ಪಾಸ್/ಫೇಲ್ ನಗರ-ಗ್ರಾಮೀಣ ಹಳ್ಳಿಯುವಕರು ಯುವತಿಯರಿಗೆ, ವಸತಿಯೂಟದೊಂದಿಗೆ 16,900- 45000. 9916799477, 9964140505

ರಾವ್ ಸಂಸ್ಥೆಗೆವಯಸ್ಸಾದವರನ್ನು , ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟವಾಸತಿವಿದೆ 13,000 - 17,000. 8951315839 , 9880120052

Marketing & Sales

ಮಹಿಳೆಯರಿಗೆ ರೇಷ್ಮೆ ಸೀರೆಗಳು, ಬನಾರಸ್ ಸೀರೆಗಳು ಕಾಟನ್ ಸೀರೆಗಳು ಎಲ್ಲಾ ತರಹದ ಸೀರೆಗಳು, ಚೂಡಿದಾರಗಳು ಕಂತಿನ ಮೇಲೆ ಮಾರಾಟ ಮಾಡಲು ಮಹಿಳೆಯರಿಗೆ ಸಿಗುತ್ತದೆ: 8892501007/ 9606701007

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ರಿಕೆಟ್: ಕೌಶಿಕ್, ಸಾಯಿಕಿಶೋರ್ ಮಿಂಚು; ಪಶ್ಚಿಮ ವಲಯದ ಪಾರಮ್ಯಕ್ಕೆ ತಡೆ

ದಕ್ಷಿಣ ವಲಯಕ್ಕೆ ದುಲೀಪ್ ಟ್ರೋಫಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಕರ್ನಾಟಕದ ಐವರು ಆಟಗಾರರು ಇದ್ದ ದಕ್ಷಿಣ ವಲಯ ತಂಡವು ದುಲೀಪ್ ಟ್ರೋಫಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯವಾದ ಫೈನಲ್‌ನಲ್ಲಿ 75 ರನ್‌ಗಳಿಂದ ಪಶ್ಚಿಮ ವಲಯ ತಂಡವನ್ನು ಸೋಲಿಸಿದ ಹನುಮವಿಹಾರಿ ನಾಯಕತ್ವದ ದಕ್ಷಿಣ ತಂಡವು ಮಿರಿಮಿರಿ ಮಿಂಚುವ ಟ್ರೋಫಿಗೆ ಮುತ್ತಿಕ್ಕಿತು. ಇದರೊಂದಿಗೆ ಹೋದ ವರ್ಷದ ಫೈನಲ್‌ನಲ್ಲಿ ಪಶ್ಚಿಮ ತಂಡದ ವಿರುದ್ಧ ಅನುಭವಿಸಿದ್ದ ಸೋಲಿಗೆ ಮುಯ್ಯಿ ಕೂಡ ತೀರಿಸಿಕೊಂಡಿತು. ದಕ್ಷಿಣ ವಲಯ ತಂಡಕ್ಕೆ ಇದು 14ನೇ ಬಾರಿ ದುಲೀಪ್ ಟ್ರೋಫಿ ಜಯಿಸಿದ ಸಾಧನೆ ಮಾಡಿತು.

ಈ ಜಯದಲ್ಲಿ ತಂಡದಲ್ಲಿದ್ದ ಕರ್ನಾಟಕದ ಬೌಲರ್‌ಗಳಾದ ವಿದ್ವತ್ ಕಾವೇರಪ್ಪ (53ಕ್ಕೆ7, 51ಕ್ಕೆ1) ವಿ. ಕೌಶಿಕ್ (26ಕ್ಕೆ1, 36ಕ್ಕೆ4) ಮತ್ತು ವೈಶಾಖ ವಿಜಯಕುಮಾರ್ (33ಕ್ಕೆ2, 39ಕ್ಕೆ1) ಮುಖ್ಯ ಪಾತ್ರ ವಹಿಸಿದರು. ಮಯಂಕ್ ಅಗರವಾಲ್ ಮತ್ತು ಆರ್. ಸಮರ್ಥ್ ಬ್ಯಾಟಿಂಗ್‌ನಲ್ಲಿ ದೊಡ್ಡ ಕಾಣಿಕೆ ನೀಡದಿದ್ದರೂ ಫೀಲ್ಡಿಂಗ್‌ನಲ್ಲಿ ಪರಿಣಾಮಕಾರಿ ಆಟವಾಡಿದರು.

ಇವರ ಮುಂದೆ ಪಶ್ಚಿಮ ವಲಯದಲ್ಲಿದ್ದ ಪೃಥ್ವಿ ಶಾ, ಸೂರ್ಯಕುಮಾರ್ ಯಾದವ್, ಚೇತೇಶ್ವರ್ ಪೂಜಾರ ಮತ್ತು ಸರ್ಫರಾಜ್ ಖಾನ್ ಅವರಂತಹ ಖ್ಯಾತನಾಮ ಬ್ಯಾಟರ್‌ಗಳೂ ವೈಫಲ್ಯ ಅನುಭವಿಸಿದರು.

ಪಂದ್ಯದ ನಾಲ್ಕನೇ ದಿನವಾದ ಶನಿವಾರ ಪಶ್ಚಿಮ ವಲಯ ತಂಡವು 298 ತಂಡಗಳ ಗುರಿ ಬೆನ್ನಟ್ಟಿತ್ತು. ದಿನದಾಟದ ಕೊನೆಗೆ 5 ವಿಕೆಟ್‌ಗಳಿಗೆ 182 ರನ್ ಗಳಿಸಿತ್ತು. ಕ್ರೀಸ್‌ನಲ್ಲಿ 92 ರನ್ ಗಳಿಸಿ ಉಳಿದಿದ್ದ ಪ್ರಿಯಾಂಕ್ ಪಾಂಚಾಲ್ ಅವರು ಕೊನೆಯ ದಿನ ದಕ್ಷಿಣದ ಜಯಕ್ಕೆ ಅಡ್ಡಿಯಾಗುವ ಎಲ್ಲ ಸಾಧ್ಯತೆಗಳೂ ಇದ್ದವು.

ಆದರೆ ದಕ್ಷಿಣದ ಬೌಲರ್‌ಗಳು ಕೊನೆಯ ದಿನ 130 ನಿಮಿಷಗಳಲ್ಲಿಯೇ ಪಶ್ಚಿಮ ತಂಡದ ಐದು ವಿಕೆಟ್‌ಗಳನ್ನು ಕಬಳಿಸಿದರು. ಇದಕ್ಕಾಗಿ 21.4 ಓವರ್‌ಗಳ ಬೌಲಿಂಗ್ ಮಾಡಿದರು. ಇದರಲ್ಲಿ ಪಶ್ಚಿಮ ವಲಯವು ತನ್ನ ಮೊತ್ತಕ್ಕೆ ಸೇರಿಸಿದ್ದು 40 ರನ್ ಮಾತ್ರ.

ದಿನದಾಟ ಆರಂಭವಾಗಿ 15 ನಿಮಿಷ ಕಳೆಯುವ ಮುನ್ನವೇ ವಿದ್ವತ್ ಎಸೆತದಲ್ಲಿ ವಿಕೆಟ್‌ಕೀಪರ್ ರಿಕಿ ಭುಯ್‌ಗೆ ಕ್ಯಾಚ್ ಕೊಟ್ಟ ಪಾಂಚಾಲ್ ನಿರ್ಗಮಿಸಿದರು. ಐದು ರನ್‌ಗಳ ಅಂತರದಿಂದ ಅವರ ಶತಕವೂ ತಪ್ಪಿತು. ತಂಡದ ಜಯದ ಅವಕಾಶವೂ ಕೈಜಾರಿತು.

ಧರ್ಮೇಂದ್ರಸಿಂಹ ಜಡೇಜ (15; 32ಎ, 4X2) ಅವರ ಹೋರಾಟಕ್ಕೂ ಫಲ ಸಿಗಲಿಲ್ಲ. ಎಡಗೈ ಸ್ಪಿನ್ನರ್ ಸಾಯಿಕಿಶೋರ್ ಬೌಲಿಂಗ್‌ನಲ್ಲಿ ಜಡೇಜ, ಚಿಂತನ್ ಗಜ ಔಟಾದರೆ, ಶಮ್ಸ್ ಮುಲಾನಿ ವಿಕೆಟ್ ಪಡೆದ ಕೌಶಿಕ್ ಮಿಂಚಿದರು. ಶನಿವಾರ ದಿನದಾಟದಲ್ಲಿ ಕೌಶಿಕ್ ಮೂರು ವಿಕೆಟ್ ಗಳಿಸಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ವಲಯ: 78.4 ಓವರ್‌ಗಳಲ್ಲಿ 213. ಪಶ್ಚಿಮ ವಲಯ: 51 ಓವರ್‌ಗಳಲ್ಲಿ 146. ಎರಡನೇ ಇನಿಂಫ್ಸ್: ದಕ್ಷಿಣ ವಲಯ: 81.1 ಓವರ್‌ಗಳಲ್ಲಿ 230. ಪಶ್ಚಿಮ ವಲಯ: 84.2 ಓವರ್‌ಗಳಲ್ಲಿ 222 (ಪ್ರಿಯಾಂಕ್ ಪಾಂಚಾಲ್ 95, ಸರ್ಫರಾಜ್ ಖಾನ್ 48, ಧರ್ಮೇಂದ್ರಸಿಂಹ ಜಡೇಜ 15, ವಿ.ಕೌಶಿಕ್ 36ಕ್ಕೆ4, ರವಿಶ್ರೀನಿವಾಸನ್ ಸಾಯಿಕಿಶೋರ್ 57ಕ್ಕೆ4, ವಿದ್ವತ್ ಕಾವೇರಪ್ಪ 51ಕ್ಕೆ1, ವೈಶಾಖ ವಿಜಯಕುಮಾರ್ 39ಕ್ಕೆ1) ಫಲಿತಾಂಶ: ದಕ್ಷಿಣ ವಲಯಕ್ಕೆ 75 ರನ್‌ಗಳ ಜಯ. ಪಂದ್ಯ ಮತ್ತು ಸರಣಿಶ್ರೇಷ್ಠ: ವಿದ್ವತ್ ಕಾವೇರಪ್ಪ.

ಬೆಂಗಳೂರಿನಲ್ಲಿ ಭಾನುವಾರ ಮುಕ್ತಾಯವಾದ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಸಂಭ್ರಮಿಸಿದ ದಕ್ಷಿಣ ವಲಯ ತಂಡದ ಆಟಗಾರರು —ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

ಮುಖ್ಯಾಂಶಗಳು

- 14ನೇ ಬಾರಿ ದುಲೀಪ್ ಟ್ರೋಫಿ ಜಯಿಸಿದ ದಕ್ಷಿಣ ವಲಯ
- ಆರ್. ಸಾಯಿಕಿಶೋರ್‌ಗೆ ನಾಲ್ಕು ವಿಕೆಟ್
- ಪ್ರಿಯಾಂಕ್ ಪಾಂಚಾಲ್, ಜಡೇಜ ಹೋರಾಟಕ್ಕೆ ಸಿಗದ ಫಲ

ಕೌಶಿಕ್ ವಿಶ್ವಾಸಾರ್ಹ ಬೌಲರ್. ಅವರ ಲೈನ್ ಮತ್ತು ಲೆಂಗ್ತ್‌ನಲ್ಲಿ ಶಿಸ್ತು ಇದೆ. ರನ್‌ಗಳನ್ನು ತಡೆಯುವುದರ ಜೊತೆಗೆ ವಿಕೆಟ್ ಕೂಡ ಗಳಿಸುತ್ತಾರೆ. ಅವರು ನಾವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಉತ್ತಮ ಬೌಲಿಂಗ್ ಮಾಡಿದರು.
ಹನುಮವಿಹಾರಿ, ದಕ್ಷಿಣ ವಲಯ ತಂಡದ ನಾಯಕ

ನಮ್ಮ ತಂಡದಲ್ಲಿ ಉತ್ತಮ ಬ್ಯಾಟರ್‌ಗಳು ಇದ್ದಾರೆ. ಆದರೆ ಅವರು ಲಯದಲ್ಲಿ ಇಲ್ಲದ ಕಾರಣ. ನಮಗೆ ಸೋಲು ಎದುರಾಯಿತು.
ಪ್ರಿಯಾಂಕ್ ಪಾಂಚಾಲ್
ಪಶ್ಚಿಮ ವಲಯದ ನಾಯಕ

ಮನುಗೆ ಬೆಳ್ಳಿ, ಮಿಂಚಿದ ಆಭಾ

ಏಷ್ಯನ್ ಅಥ್ಲೆಟಿಕ್ಸ್: ಭಾರತಕ್ಕೆ 27 ಪದಕ; ಮೂರನೇ ಸ್ಥಾನ



ಜಾವೆಲಿನ್‌ನಲ್ಲಿ ಬೆಳ್ಳಿ ಗೆದ್ದ ಡಿ.ಪಿ.ಮನು

ಷಾಟ್‌ಪಟ್ ಸ್ಪರ್ಧೆ ಆಭಾ ಕಟುವಾ

ಬ್ಯಾಂಕಾಕ್ (ಪಿಟಿಐ): ಭಾರತದ ಆಭಾ ಕಟುವಾ ಅವರು ಮಹಿಳೆಯರ ಷಾಟ್‌ಪಟ್‌ನಲ್ಲಿ ರಾಷ್ಟ್ರೀಯ ದಾಖಲೆ ಸರಿಗಟ್ಟುವ ಸಾಧನೆಯೊಂದಿಗೆ, ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದುಕೊಂಡರು.

ಕರ್ನಾಟಕದ ಡಿ.ಪಿ.ಮನು ಅವರು ಜಾವೆಲಿನ್‌ನಲ್ಲಿ ಬೆಳ್ಳಿ ಜಯಿಸಿದರೆ, ಜ್ಯೋತಿ ಯರ್ರಾಜಿ ಮತ್ತು ಪಾರುಲ್ ಚೌಧರಿ ಅವರು ಕೂಟದಲ್ಲಿ ಎರಡನೇ ಪದಕ ಜಯಿಸಿದರು.

ಚಾಂಪಿಯನ್‌ಷಿಪ್‌ಗೆ ಭಾನುವಾರ ತೆರೆಬಿದ್ದಿದ್ದು, ಭಾರತದ ಅಥ್ಲೀಟ್‌ಗಳು 6 ಚಿನ್ನ, 12 ಬೆಳ್ಳಿ ಮತ್ತು 9 ಕಂಚುಗಳೊಂದಿಗೆ ಒಟ್ಟು 27 ಪದಕ ಜಯಿಸಿ ಮೂರನೇ ಸ್ಥಾನ ಗಳಿಸಿದರು.

ಅಂತಿಮ ದಿನ ನಡೆದ ಷಾಟ್‌ಪಟ್ ಸ್ಪರ್ಧೆಯಲ್ಲಿ 28 ವರ್ಷದ ಆಭಾ ಅವರು 18.06 ಮೀ. ಸಾಧನೆಯೊಂದಿಗೆ ಎರಡನೇ ಸ್ಥಾನ ಪಡೆದು ಅಚ್ಚರಿ ಮೂಡಿಸಿದರು. ಈ ಹಿಂದಿನ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (17.13 ಮೀ.) 93 ಸೆ.ಮೀ. ಅಧಿಕ ದೂರ ಎಸೆಯಲು ಅವರು ಯಶಸ್ವಿಯಾದರು.

ಆಭಾ ಅವರು ಮನ್‌ಪ್ರೀತ್ ಕೌರ್ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಸರಿಗಟ್ಟಿದರು. ಮನ್‌ಪ್ರೀತ್ ಅವರು 17 ಮೀ. ಸಾಧನೆಯೊಂದಿಗೆ ಕಂಚು ಪಡೆದರೆ, ಚೀನಾದ ಸಾಂಗ್ ಜಿಯಾಯುವಾನ್ (18.88 ಮೀ.) ಚಿನ್ನ ತಮ್ಮದಾಗಿಸಿಕೊಂಡರು. ಆಭಾ ತಮ್ಮ ನಾಲ್ಕನೇ ಪ್ರಯತ್ನದಲ್ಲಿ 18.06 ಮೀ. ದೂರ ಕಂಡುಕೊಂಡರು.

ಪುರುಷರ ಜಾವೆಲಿನ್ ಥ್ರೋನಲ್ಲಿ ಮನು, 81.01 ಮೀ. ಎಸೆದು ಎರಡನೇ ಸ್ಥಾನ ಗಳಿಸಿದರು. ಅಂತಿಮ ಎಸೆತದಲ್ಲಿ ಅವರಿಂದ ಈ ಸಾಧನೆ ಮೂಡಿಬಂತು.

ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಬಳಿಕ ಈ ಋತುವಿನಲ್ಲಿ ಎಪ್ಪಾದ ಎರಡನೇ ಅತ್ಯುತ್ತಮ ದೂರ (84.33 ಮೀ.) ಕಂಡುಕೊಂಡಿದ್ದ ಮನು, ಇಲ್ಲಿ 80 ಮೀ. ಗಡಿ ದಾಟಲು ಕಷ್ಟಪಟ್ಟರು. ಮೊದಲ ನಾಲ್ಕು ಪ್ರಯತ್ನಗಳಲ್ಲಿ 78.22 ಮೀ., 79.83 ಮೀ., 78.78 ಮೀ. ಮತ್ತು 75.35 ಮೀ. ಕಂಡುಕೊಂಡ ಅವರ ಐದನೇ ಪ್ರಯತ್ನ ಫೌಲ್ ಆಯಿತು. ಅಂತಿಮ ಪ್ರಯತ್ನವು ಅವರಿಗೆ ಬೆಳ್ಳಿ ತಂದುಕೊಟ್ಟಿತು. ಜಪಾನ್‌ನ ರಾಡ್ರಿಕ್ ಗೆನ್ಕಿ (83.15 ಮೀ.) ಚಿನ್ನ ಜಯಿಸಿದರು.

ಜ್ಯೋತಿ, ಪಾರುಲ್‌ಗೆ ಬೆಳ್ಳಿ: ಜ್ಯೋತಿ ಯರ್ರಾಜಿ, ಮಹಿಳೆಯರ 200 ಮೀ. ಓಟದಲ್ಲಿ 23.13 ಸೆ.ಗಳಲ್ಲಿ ಗುರಿ ತಲುಪಿ ಬೆಳ್ಳಿ ಜಯಿಸಿದರು. ಅವರು ಗುರುವಾರ 100 ಮೀ. ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದಿದ್ದರು.

ಪಾರುಲ್ ಚೌಧರಿ ಮಹಿಳೆಯರ 5,000 ಮೀ. ಓಟದಲ್ಲಿ ಬೆಳ್ಳಿ ಗೆದ್ದುಕೊಂಡರು. ಶುಕ್ರವಾರ ನಡೆದಿದ್ದ 3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಚಿನ್ನ ಜಯಿಸಿದ್ದ ಅವರು 15 ನಿ. 52.35 ಸೆ.ಗಳಲ್ಲಿ ಗುರಿ ತಲುಪಿದರು. ಜಪಾನ್‌ನ ಯುಮ ಯಮಾಮೊಟೊ (15 ನಿ. 51.16 ಸೆ.) ಅಗ್ರಸ್ಥಾನ ಪಡೆದರು. ಅಂಕಿತಾ ಅವರು (16 ನಿ. 3.33 ಸೆ.) ಕಂಚು ಗೆಲ್ಲುವುದರೊಂದಿಗೆ ಈ ವಿಭಾಗದಲ್ಲಿ ಭಾರತ ಎರಡು ಪದಕಗಳನ್ನು ತನ್ನದಾಗಿಸಿಕೊಂಡಿತು.

ಪುರುಷರ 4X400 ಮೀ. ರಿಲೇನಲ್ಲಿ ಅಮೋಜ್ ಜೇಕಬ್, ಮುಹಮ್ಮದ್ ಅಜ್ಮಲ್, ಮಿಜೊ ಕುರಿಯನ್ ಚಾಕೊ ಮತ್ತು ರಾಜೇಶ್ ರಮೇಶ್ ಅವರನ್ನೊಳಗೊಂಡ ತಂಡ (3 ನಿ. 1.80 ಸೆ.) ಬೆಳ್ಳಿ ಜಯಿಸಿತು.

ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಹೀನಾ ಮಲಿಕ್, ಐಶ್ವರ್ಯ ಮಿಶ್ರಾ, ಜ್ಯೋತಿಕಾ ದಂಡಿ ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ (3 ನಿ. 33.73 ಸೆ.) ಮೂರನೇ ಸ್ಥಾನ ಪಡೆದುಕೊಂಡಿತು.

ಕಿಶನ್ ಕುಮಾರ್ ಮತ್ತು ಕೆ.ಎಂ. ಚಂದಾ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 800 ಮೀ. ಓಟದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಬೆಳ್ಳಿ ಗೆದ್ದುಕೊಂಡರು. ಕುಮಾರ್ ಅವರು 1 ನಿ.45.88 ಸೆ.ಗಳನ್ನು ತೆಗೆದುಕೊಂಡರೆ, ಚಂದಾ 2 ನಿ.1.58 ಸೆ.ಗಳಲ್ಲಿ ಗುರಿ ಕ್ರಮಿಸಿದರು.

ಪ್ರಿಯಾಂಕಾ ಗೋಸ್ವಾಮಿ (1 ಗಂಟೆ. 34.24 ನಿ.) ಮತ್ತು ವಿಕಾಶ್ ಸಿಂಗ್ (1 ಗಂಟೆ 29.32 ನಿ.) ಅವರು ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ 20 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಹೋರಾಟನಿರತರಿಗೆ ಪದಕ ಅರ್ಪಿಸಿದ ಸಂಗೀತಾ

ನವದೆಹಲಿ (ಪಿಟಿಐ): ಕುಸ್ತಿಪಟು ಸಂಗೀತಾ ಫೋಗಟ್ ಅವರು ಹಂಗರಿಯಲ್ಲಿ ನಡೆದ ಅಂತರರಾಷ್ಟ್ರೀಯ ರ‍್ಯಾಂಕಿಂಗ್ ಸರಣಿ ಕುಸ್ತಿಯಲ್ಲಿ ಗೆದ್ದ ಕಂಚಿನ ಪದಕವನ್ನು ಮಹಿಳಾ ದೌರ್ಜನ್ಯ ವಿರೋಧಿ ಹೋರಾಟಗಾರರಿಗೆ ಸಮರ್ಪಿಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿ ಖ್ಯಾತನಾಮ ಕುಸ್ತಿಪಟುಗಳು ಈಚೆಗೆ ಧರಣಿ ನಡೆಸಿದ್ದರು. ಅದರಲ್ಲಿ ಸಂಗೀತಾ ಹಾಗೂ ಅವರ ಪತಿ, ಟೋಕಿಯೊ ಒಲಿಂಪಿಕ್ಸ್ ಪದಕವಿಜೇತ ಬಜರಂಗ್ ಪೂನಿಯಾ ಕೂಡ ಮುಂಚೂಣಿಯಲ್ಲಿದ್ದರು.

‘ತಾವೆಲ್ಲರೂ ಕಳಿಸುತ್ತಿರುವ ಶುಭಸಂದೇಶಗಳಿಂದ ಸಂತೋಷವಾಗಿದೆ. ಅತ್ಯಂತ ಭಾವುಕಳಾಗಿರುವೆ. ನಿಮಗೆಲ್ಲರಿಗೂ ಧನ್ಯವಾದಗಳು. ಈ ಪದಕ ನನ್ನದಷ್ಟೇ ಅಲ್ಲ. ನಿಮಗೆಲ್ಲರಿಗೂ ಸೇರಿದ್ದು’ ಎಂದು ಸಂಗೀತಾ ಟ್ವೀಟ್ ಮಾಡಿದ್ದಾರೆ.

‘ವಿಶ್ವದಾದ್ಯಂತ ಮಹಿಳೆಯರ ಶೋಷಣೆಗಳ ವಿರುದ್ಧ ಹೋರಾಡುತ್ತಿರುವ ಮಹಿಳೆಯರಿಗೆ ಪದಕ ಅರ್ಪಿಸಿದ್ದೇನೆ’ ಎಂದೂ ಬರೆದಿದ್ದಾರೆ.

ಶನಿವಾರ ಬುಡಾಪೆಸ್ಟ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ನಾನ್ ಒಲಿಂಪಿಕ್ ವಿಭಾಗದ 59 ಕೆ.ಜಿ. ವಿಭಾಗದಲ್ಲಿ ಅವರು ಕಂಚು ಜಯಿಸಿದ್ದರು.

ಭಾರತದ ಸಂಗೀತಾ ಫೋಗಟ್ ಕಂಚಿನ ಪದಕದೊಂದಿಗೆ ಸಂಭ್ರಮಿಸಿದರು —ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಲಕ್ಷ್ಯಗೆ ನಿರಾಸೆ

ಕೌನ್ಸಿಲ್ ಬ್ಲಫ್ಸ್, ಅಮೆರಿಕ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಅಮೆರಿಕ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಲಕ್ಷ್ಯ 17-21, 24-22, 17-21 ರಲ್ಲಿ ಚೀನಾ ದ ಲಿ ಶಿ ಫೆಂಗ್ ಎದುರು ಮಣಿದರು. ಇದರಿಂದ ಸತತ ಎರಡನೇ ಪ್ರಶಸ್ತಿ ಜಯಿ ಸುವ ಅವರ ಕನಸು ಭಗ್ನಗೊಂಡಿತು.

ಲಕ್ಷ್ಯ ಅವರು ಚೀನಾದ ಎದುರಾಳಿ ವಿರುದ್ಧ 5-2 ರ ಗೆಲುವು- ಸೋಲಿನ ದಾಖಲೆ ಹೊಂದಿದ್ದರು. ಕಳೆದ ವಾರ ನಡೆದ ಕೆನಡಾ ಓಪನ್ ಟೂರ್ನಿಯ ಫೈನಲ್‌ನಲ್ಲಿ ಫೆಂಗ್ ಅವರನ್ನು ಮಣಿಸಿ ಚಾಂಪಿಯನ್ ಆಗಿದ್ದರು. ಆದರೆ ಅಲ್ಲಿ ಎದುರಾಗಿದ್ದ ಸೋಲಿಗೆ ಫೆಂಗ್, ಮುಯ್ಯಿ ತೀರಿಸಿಕೊಂಡರು.

ಸೆಮಿಫೈನಲ್ ಹೋರಾಟ ಒಂದು ಗಂಟೆ 16 ನಿಮಿಷ ನಡೆಯಿತು. ಮೊದಲ ಗೇಮ್ ಸೋತ ಭಾರತದ ಆಟಗಾರ ಎರಡನೇ ಗೇಮ್ ಗೆದ್ದು ಸಮಬಲ ಸಾಧಿಸಿದರು. ಎರಡನೇ ಗೇಮ್‌ನಲ್ಲಿ ಜಿದ್ದಾಜಿದ್ದಿನ ಹಣಾಹಣಿ ನಡೆಯಿತು. ಹಲವು ದೀರ್ಘ ರ‍್ಯಾಲಿಗಳಿಂದ ಕೂಡಿದ್ದ ಗೇಮ್‌ನಲ್ಲಿ ಇಬ್ಬರೂ ಡ್ರಾಪ್‌ಶಾಟ್‌ಗಳು ಮತ್ತು ಸ್ಮ್ಯಾಷ್‌ಗಳ ಮೂಲಕ ಪಾಯಿಂಟ್ಸ್ ಕಲೆಹಾಕಿದರು. 22-22 ರಲ್ಲಿ ಸಮಬಲ ಕಂಡುಬಂದ ಬಳಿಕ ಲಕ್ಷ್ಯ ಸತತ ಎರಡು ಪಾಯಿಂಟ್ಸ್ ಗೆದ್ದು ಗೇಮ್ ತಮ್ಮದಾಗಿಸಿಕೊಂಡರು.

ನಿರ್ಣಾಯಕ ಗೇಮ್‌ನಲ್ಲಿ ಫೆಂಗ್ 11-8 ರಲ್ಲಿ ಮೇಲುಗೈ ಪಡೆದರೂ, ಮರು ಹೋರಾಟ ನಡೆಸಿದ ಲಕ್ಷ್ಯ 17-17 ರಲ್ಲಿ ಸಮಬಲ ಸಾಧಿಸಿದರು. ಆ ಬಳಿಕ ಶಿಸ್ತಿನ ಆಟವಾಡಿದ ಫೆಂಗ್, ಸತತ ನಾಲ್ಕು ಪಾಯಿಂಟ್ಸ್ ಗಿಟ್ಟಿಸಿಕೊಂಡು ಫೈನಲ್‌ಗೆ ಲಗ್ಗೆಯಿಟ್ಟರು.

ಬಿಡಿಎಫ್‌ಎ: ಮಾಫೇಶ್ವರನ್ ನೂತನ ಅಧ್ಯಕ್ಷ

ಬೆಂಗಳೂರು: ಬಾಲು ಮಾಡರ್ನ್ ಬಾಯ್ಸ್ ಎಫ್‌ಸಿಯ ಎಸ್. ಮಾಫೇಶ್ವರನ್ ಅವರು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಗೆ (ಬಿಡಿಎಫ್‌ಎ) 2023-27ನೇ ಸಾಲಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪದಾಧಿಕಾರಿಗಳು ಮತ್ತು ವ್ಯವಸ್ಥಾಪಕ ಸಮಿತಿ ಸದಸ್ಯರ ಆಯ್ಕೆ ಭಾನುವಾರ ನಡೆಯಿತು. ಉಪಾಧ್ಯಕ್ಷರಾಗಿ ಆರ್. ಶಂಕರ್ (ಯಂಗ್ ಜೆಮ್ಸ್ ಎಫ್‌ಸಿ), ಕಾರ್ಯದರ್ಶಿಯಾಗಿ ಎಂ.ಶ್ರೀಧರನ್ (ನ್ಯಾಷನಲ್ಸ್ ಎಫ್‌ಸಿ), ಖಜಾಂಚಿಯಾಗಿ ಜೆ. ಸಂತೋಷ್ ಕುಮಾರ್ (ವೆಟರನ್ಸ್ ಎಫ್‌ಸಿ) ಆಯ್ಕೆಯಾದರು.

ವ್ಯವಸ್ಥಾಪಕ ಸಮಿತಿ ಸದಸ್ಯರು: ಚಿಕ್ಕಚೆನ್ನಯ್ಯ (ಎಕ್ಸೆಲ್ಸಿಯರ್ ಎಫ್‌ಸಿ), ಆರ್. ಮೋಹನ್ (ಮಹಾರಾಜ ಸೋಶಿಯಲ್ ಎಫ್‌ಸಿ), ಎಸ್.ಶಿವ (ಅಂಬೇಡ್ಕರ್ ಎಫ್‌ಸಿ), ಕೆ.ಎಲ್. ಪ್ರಕಾಶ್ (ಬೆಂಗಳೂರು ಕಿಕ್ಕರ್ಸ್ ಎಫ್‌ಸಿ), ಜಿ. ಅಪ್ಪಾಜಿ (ಯುನಿವರ್ಸಲ್ ಎಫ್‌ಸಿ), ಸಗೈಬಕ್ಯಾನಾಥನ್ (ಓರಿಯಂಟಲ್ ಎಫ್‌ಸಿ), ಆರ್. ನಂದಕುಮಾರ್ (ಸರ್ಕಾರ ಎಫ್‌ಸಿ), ಸರಳಾ ಎನ್. ಸ್ವಾಮಿ (ವಿನಾಯಕ ಎಫ್‌ಸಿ), ಜಿ. ರಮೇಶ್ (ವೆಹಿಕಲ್ಸ್ ಎಫ್‌ಸಿ), ಎನ್. ರಮೇಶ್ ಕುಮಾರ್ (ಧರ್ಮರಾಜ ಯೂನಿಯನ್ ಎಫ್‌ಸಿ), ಎ. ಆರೋಕಿಯಾರಾಜ್ (ಬೆಂಗಳೂರು ಯಂಗ್‌ಸ್ಟರ್ಸ್ ಎಫ್‌ಸಿ), ಎಂ. ಮುಕುಂದನ್ ಬಾಲು (ಟೌನ್ ಎಸ್‌ಸಿ ಹೊಸಕೋಟೆ ಎಫ್‌ಸಿ), ಸತ್ಯರಾಜ್ (ರಿವೈವ್ ಎಫ್‌ಸಿ), ಪಿ. ರಾಜೇಂದ್ರ ಪ್ರಸಾದ್ (ನ್ಯೂ ಲಕ್ಕಿ ಸ್ಟಾರ್ ಎಫ್‌ಸಿ), ಪಿ.ಸಿ. ಸುಕಾನಂದ್ (ಬೆಂಗಳೂರು ಬ್ಲೂಸ್ ಎಫ್‌ಸಿ).

ಕೆಎಸ್‌ಎಫ್‌ಎ ಆಡಳಿತ ಮಂಡಳಿಗೆ ಹ್ಯಾರಿಸ್: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಇದರ 2023-27ರ ಆಡಳಿತ ಮಂಡಳಿಗೆ ಸದಸ್ಯರ ಆಯ್ಕೆ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಿತು.

ಎನ್.ಎ. ಹ್ಯಾರಿಸ್ (ಅಫ್ಘಾನ್ ಎಫ್‌ಸಿ), ಎಂ. ಸತ್ಯನಾರಾಯಣ್ (ತಾಮರೈ ಕಣ್ಣನ್ ಎಫ್‌ಸಿ), ಎಂ. ಕುಮಾರ್ (ಕ್ವೀನ್ಸ್ ಸ್ಟಾರ್ ಎಫ್‌ಸಿ), ಎಂ.ಪಿ. ಸ್ವಾಮಿ (ಬೆಂಗಳೂರು ಬಾಯ್ಸ್ ಎಫ್‌ಸಿ), ಹನೀಫ್ ಮೊಹಮ್ಮದ್ (ನೇತಾಜಿ ಎಫ್‌ಸಿ), ಶಕೀಲ್ ಅಬ್ದುಲ್ ರಹಿಮಾನ್ (ಬೆಂಗಳೂರು ಯೆಲ್ಲೋಸ್ ಎಫ್‌ಸಿ), ಬಿ.ಕೆ. ಮುನಿರಾಜ್ (ಬೆಂಟೆಕ್ಸ್ ಎಫ್‌ಸಿ), ಅಸ್ಲಾಂ ಅಹ್ಮದ್ ಖಾನ್ (ಮುಸ್ಲಿಂ ಹೀರೋಸ್ ಎಫ್‌ಸಿ), ಎಸ್.ಎಲ್. ಆಂಥೋನಿ (ರಾಯಲ್ಸ್ ಎಫ್‌ಸಿ), ಶ್ಯಾಮ್ ಶರಣ್ ಶಾಹಿ (ವಿವೇಕಾನಂದ ಎಫ್‌ಸಿ), ಬಿ. ಕಮಲ್ (ಬೆಂಗಳೂರು ಯುನೈಟೆಡ್ ಎಫ್‌ಸಿ), ಶರವಣ ಧರ್ಮನ್ (ಎಂಡಿ ಸ್ಪೋರ್ಟಿಂಗ್ ಎಫ್‌ಸಿ) ಸೇರಿ 12 ಮಂದಿ ಆಯ್ಕೆಯಾದರು.

ದೆಹಲಿ ಪ್ರವಾಹ: ದಾಖಲೆಪತ್ರ ಕಳೆದುಕೊಂಡವರಿಗೆ ವಿಶೇಷ ಶಿಬಿರ

ಸಂತ್ರಸ್ತ ಕುಟುಂಬಗಳಿಗೆ ₹10 ಲಕ್ಷ ಪರಿಹಾರ– ಸಿ.ಎಂ ಅರವಿಂದ ಕೇಜ್ರಿವಾಲ್

ನವದೆಹಲಿ(ಪಿಟಿಐ): ಆಧಾರ್ ಕಾರ್ಡ್ ಹಾಗೂ ವಿವಿಧ ದಾಖಲೆಗಳು ಯಮುನಾ ನದಿ ಪ್ರವಾಹದಲ್ಲಿ ಕೊಚ್ಚಿಹೋಗಿ ಸಮಸ್ಯೆ ಎದುರಿಸುತ್ತಿರುವವರಿಗಾಗಿ ವಿಶೇಷ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು. ಜೊತೆಗೆ, ಪ್ರವಾಹದಿಂದ ಸಂಕಷ್ಟಕ್ಕೊಳಗಾಗಿರುವ ಪ್ರತಿ ಕುಟುಂಬಗಳಿಗೆ ಸರ್ಕಾರವು ₹10 ಸಾವಿರ ನೀಡಲಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ಹೇಳಿದ್ದಾರೆ.

ನಗರದ ಉತ್ತರ ಭಾಗದಲ್ಲಿರುವ ಮೋರಿ ಗೇಟ್‌ನಲ್ಲಿ ಸ್ಥಾಪಿಸಿರುವ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಈ ಘೋಷಣೆ ಮಾಡಿದರು.

‘ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ಒದಗಿಸಲು ಕೂಡ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಜೊತೆಗೆ, ಈ ಸಂಕಷ್ಟದ ಸಮಯದಲ್ಲೂ ರಾಜಕೀಯ ಮಾಡುವುದರಿಂದ ದೂರವಿರಿ ಎಂದು ಬಿಜೆಪಿ ಉದ್ದೇಶಿಸಿ ಹೇಳಿದರು.

18ರ ವರೆಗೆ ಶಾಲೆ ಬಂದ್: ಯುಮುನಾ ತೀರದಲ್ಲಿರುವ ವಸತಿ ಪ್ರದೇಶಗಳಲ್ಲಿಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳನ್ನು ಜುಲೈ 18ರ ವರೆಗೆ ಮುಚ್ಚಲಾಗುತ್ತದೆ ಎಂದು ಶಿಕ್ಷಣ ನಿರ್ದೇಶನಾಲಯ ಭಾನುವಾರ ತಿಳಿಸಿದೆ. ಪ್ರವಾಹಕ್ಕೆ ಸಿಲುಕಿದ್ದ ಶಾಲೆಗಳು ಆನ್‌ಲೈನ್ ತರಗತಿಗಳನ್ನು ನಡೆಸಬಹುದು ಎಂದೂ ಹೇಳಿದೆ.

ವ್ಯಾಪಾರ ವಹಿವಾಟು ಆರಂಭ: ಉತ್ತರ ದೆಹಲಿ ಸದ್ಯ ಸಹಜಸ್ಥಿತಿಗೆ ಮರಳುತ್ತಿದೆ. ಕಳೆದ ಎರಡು ದಿನಗಳಿಂದ ಮಳೆ ಕಡಿಮೆಯಾಗಿದ್ದು, ನದಿ ಪ್ರವಾಹವೂ ತಗ್ಗಿದೆ. ಹೀಗಾಗಿ ವ್ಯಾಪಾರಿಗಳು ಮತ್ತೆ ಅಂಗಡಿಗಳನ್ನು ಆರಂಭಿಸಿದ್ದಾರೆ.

ನೆರೆ ಸಂತ್ರಸ್ತರಿಗಾಗಿ ಇಲ್ಲಿಯ ಮೋರಿ ಗೇಟ್‌ನಲ್ಲಿ ನಿರ್ಮಿಸಲಾಗಿರುವ ಪರಿಹಾರ ಶಿಬಿರಕ್ಕೆ ಭಾನುವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಭೇಟಿ ನೀಡಿ, ಜನರ ಯೋಗಕ್ಷೇಮ ವಿಚಾರಿಸಿದರು. ದೆಹಲಿ ಸಚಿವೆ ಆತಿಶಿ ಕೂಡಾ ಇದ್ದರು —ಪಿಟಿಐ ಚಿತ್ರ

‘2 ವರ್ಷದಿಂದ ಸಭೆ ಕರೆಯದ ಸಿ.ಎಂ’

‘ಮುಖ್ಯಮಂತ್ರಿ ಕೇಜ್ರಿವಾಲ್ ಅವರ ನೇತೃತ್ವದಲ್ಲಿ ಕಳೆದ ಎರಡು ವರ್ಷಗಳಿಂದ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಉನ್ನತ ಸಭೆಯನ್ನೇ ಕರೆಯಲಾಗಿಲ್ಲ’ ಎಂದು ದೆಹಲಿ ಲೆಫ್ಟಿನೆಂಟ್ ಗವರ್ನರ್ ಅವರ ರಾಜ್ ನಿವಾಸದ ಮೂಲಗಳು ಭಾನುವಾರ ಆರೋಪಿಸಿವೆ.

ಈ ಆರೋಪವನ್ನು ಅಲ್ಲಗಳೆದಿರುವ ಎಎಪಿ ಸರ್ಕಾರವು, ‘ದೆಹಲಿಯ ಸಚಿವರಾದ ಅತಿಶಿ ಮತ್ತು ಸೌರಭ್ ಭಾರದ್ವಾಜ್ ಅವರ ನೇತೃತ್ವದಲ್ಲಿ ಮೇ 9ರಂದು ಪ್ರವಾಹ ಸನ್ನದ್ಧತೆ ಕುರಿತಂತೆ ಸಭೆಯನ್ನು ನಡೆಸಲಾಗಿದೆ. ನಿಗದಿತ ಪ್ರಕ್ರಿಯೆಯಂತೆ ಪ್ರವಾಹ ನಿಯಂತ್ರಣ ಸಂಬಂಧ ಆದೇಶವನ್ನೂ ಹೊರಡಿಸಲಾಗಿದೆ’ ಎಂದು ತಿಳಿಸಿದೆ.

ವಿದ್ಯುತ್, ನೀರು ಪೂರೈಕೆ ಆರಂಭ

ಚಂಡೀಗಢ (ಪಿಟಿಐ): ಪಂಜಾಬ್ ಮತ್ತು ಹರಿಯಾಣದಲ್ಲಿ ನೆರೆ ತಗ್ಗುತ್ತಲೇ ಸರ್ಕಾರಗಳು ವಿದ್ಯುತ್, ನೀರು ಪೂರೈಕೆಯನ್ನು ಮತ್ತೆ ಆರಂಭಿಸಿವೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಒದಗಿಸುವ ಕಾರ್ಯ ಆರಂಭಿಸಲಾಗಿದೆ.

ದೆಹಲಿ ಸರ್ಕಾರವು ಯಮುನಾ ನದಿ, ಚರಂಡಿಗಳಿಂದ ಹೂಳು ತೆಗೆಸಿರುವ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು. ಇದಕ್ಕಾಗಿ ಎಷ್ಟು ಹಣ ವ್ಯಯಿಸಲಾಗಿದೆ ಎಂದು ತಿಳಿಸಬೇಕು
ವೀರೇಂದ್ರ ಸಚ್‌ದೇವ್, ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ

ದೆಹಲಿ ಮೆಟ್ರೊದ ಯಮುನಾ ಬ್ಯಾಂಕ್ ನಿಲ್ದಾಣದ ಆಗಮನ, ನಿರ್ಗಮನ ದ್ವಾರಗಳನ್ನು ಭಾನುವಾರ ತೆರೆಯಲಾಗಿದೆ. ಪ್ರವಾಹದ ಕಾರಣ ಗುರುವಾರ ಈ ಎರಡೂ ದ್ವಾರಗಳನ್ನು ಮುಚ್ಚಲಾಗಿತ್ತು. ನದಿಯ ಹರಿವಿನ ಮಟ್ಟ ಕಳೆದ ಬುಧವಾರ 207.71ಕ್ಕೆ ಏರಿತ್ತು.

ಎನ್‌ಡಿಎ ಮೈತ್ರಿಕೂಟಕ್ಕೆ ರಾಜ್‌ಭರ್

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಪ್ರಮುಖ ನಾಯಕ, ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಸಂಸ್ಥಾಪಕ ಓಂ ಪ್ರಕಾಶ್ ರಾಜ್‌ಭರ್ ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಮರಳಿರುವುದಾಗಿ ಭಾನುವಾರ ಘೋಷಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ಬಳಿಕ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ.

ಓಂ ಪ್ರಕಾಶ್ ಮತ್ತು ಅವರ ಮಗ ಅರವಿಂದ್ ರಾಜ್‌ಭರ್ ಅವರ ಜೊತೆ ನಡೆಸಿದ ಸಭೆಯ ಚಿತ್ರವನ್ನು ಅಮಿತ್ ಶಾ ಟ್ವೀಟ್ ಮಾಡಿದ್ದಾರೆ. ಜೊತೆಗೆ ಓಂ ಪ್ರಕಾಶ್ ಅವರನ್ನು ಎನ್‌ಡಿಎ ಮೈತ್ರಿಕೂಟಕ್ಕೆ ಸ್ವಾಗತಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ರಾಜ್ಯದ ಬಡವರ ಮತ್ತು ಅವಕಾಶ ವಂಚಿತರ ಕಲ್ಯಾಣಕ್ಕಾಗಿ ಕೈಗೊಂಡಿರುವ ಪ್ರಯತ್ನಗಳಿಗೆ ಓಂ ಪ್ರಕಾಶ್ ಅವರ ಸೇರ್ಪಡೆಯಿಂದ ಮತ್ತಷ್ಟು ಉತ್ತೇಜನ ದೊರಕಲಿದೆ’ ಎಂದಿದ್ದಾರೆ.

‘ಸಾಮಾಜಿಕ ನ್ಯಾಯ, ರಾಷ್ಟ್ರೀಯ ಭದ್ರತೆ, ಉತ್ತಮ ಆಡಳಿತ, ತುಳಿತಕ್ಕೊಳಗಾದವರ ಪರ ಬಿಜೆಪಿ ಮತ್ತು ಎಸ್‌ಬಿಎಸ್‌ಪಿ ಒಟ್ಟಾಗಿ ಹೋರಾಡಲಿವೆ’ ಎಂದು ಓಂ ಪ್ರಕಾಶ್ ಟ್ವೀಟ್ ಮಾಡಿದ್ದಾರೆ. ‘2024 ಲೋಕಸಭೆ ಚುನಾವಣೆಯಲ್ಲಿ ಎರಡೂ ಪಕ್ಷಗಳು ಒಟ್ಟಾಗಿ ಕಣಕ್ಕಿಳಿಯಲಿವೆ’ ಎಂದಿದ್ದಾರೆ.

ರಾಜ್‌ಭರ್ ಸಮುದಾಯವು ಸಂಖ್ಯೆಯ ದೃಷ್ಟಿಯಲ್ಲಿ ಉತ್ತರ ಪ್ರದೇಶದ ಪೂರ್ವ ಭಾಗದ ಪ್ರಮುಖ ಸಮುದಾಯವಾಗಿದ್ದು, ಓಂ ಪ್ರಕಾಶ್ ಅಲ್ಲಿಯ ಪ್ರಭಾವಿ ನಾಯಕರು. ಬಿಜೆಪಿ ಸಖ್ಯದಲ್ಲೇ ಇದ್ದ ಎಸ್‌ಬಿಎಸ್‌ಪಿ, 2022ರ ವಿಧಾನಸಭೆ ಚುನಾವಣೆ ವೇಳೆ ಎಸ್‌ಪಿ ಜೊತೆ ಮೈತ್ರಿ ಮಾಡಿಕೊಂಡಿತ್ತು.

ಎಸ್‌ಬಿಎಸ್‌ಪಿ ಸಂಸ್ಥಾಪಕ ಓಂ ಪ್ರಕಾಶ್ ರಾಜ್‌ಭರ್ ಅವರು ದೆಹಲಿಯಲ್ಲಿ ಭಾನುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಯಾದರು —ಪಿಟಿಐ ಚಿತ್ರ

‘ಬಿಜೆಪಿಯನ್ನು ನೋಡಿ ಕಲಿಯಲಿ’

ಲಖನೌ (ಪಿಟಿಐ): ‘ಬಿಜೆಪಿ ವಿರೋಧಿ ಪಕ್ಷಗಳಲ್ಲಿ ಅಹಂ ಮನೆ ಮಾಡಿದೆ. ಎಲ್ಲರೂ ತಮ್ಮನ್ನು ತಾವು ದೊಡ್ಡವರು ಎಂದು ಭಾವಿಸಿದ್ದಾರೆ. ಸಣ್ಣ ಪಕ್ಷಗಳ ಜೊತೆ ಕೈಜೋಡಿಸಿ ಅಧಿಕಾರಕ್ಕೇರುವುದು ಹೇಗೆ ಎಂಬುದನ್ನು ಆ ಎಲ್ಲಾ ಪಕ್ಷಗಳು ಬಿಜೆಪಿಯನ್ನು ನೋಡಿ ಕಲಿಯಬೇಕು’ ಎಂದು ಓಂ ಪ್ರಕಾಶ್ ರಾಜ್‌ಭರ್ ಅವರು ಹೇಳಿದ್ದಾರೆ.

ಬೆಲೆ ಏರಿಕೆಗೆ ‘ಮಿಯಾ’ಗಳೇ ಕಾರಣ: ಹೇಳಿಕೆಗೆ ಖಂಡನೆ

ಗುವಾಹಟಿ (ಪಿಟಿಐ): ತರಕಾರಿ ಬೆಲೆ ಏರಿಕೆಗೆ ಬಂಗಾಳಿ ಭಾಷಿಕ ಸ್ಥಳೀಯ ಮುಸ್ಲಿಮರನ್ನು ಗುರಿಯಾಗಿಸಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ನೀಡಿರುವ ಹೇಳಿಕೆಗೆ ರಾಜ್ಯದ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಗುವಾಹಟಿಯಲ್ಲಿ ತರಕಾರಿ ಬೆಲೆ ಏರಿಕೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದ ಶರ್ಮ, ‘ಹಳ್ಳಿಗಳಲ್ಲಿ ತರಕಾರಿ ದುಬಾರಿಯಾಗಿಲ್ಲ. ಇಲ್ಲಿ ಮಿಯಾ (ಬಂಗಾಳಿ ಮುಸ್ಲಿಮರು) ವ್ಯಾಪಾರಿಗಳು ನಮ್ಮಿಂದ ಹೆಚ್ಚು ಹಣ ಪಡೆಯುತ್ತಿದ್ದಾರೆ. ಅಸ್ಸಾಮೀಯರೇ ತರಕಾರಿ ವ್ಯಾಪಾರ ಮಾಡುವಂತಾಗಿದ್ದರೆ, ಅವರು ನಮ್ಮಿಂದ ಸುಲಿಗೆ ಮಾಡುತ್ತಿರಲಿಲ್ಲ’ ಎಂದಿದ್ದರು.

‘ಗುವಾಹಟಿಯ ಪಾದಚಾರಿ ಮಾರ್ಗಗಳನ್ನು ತೆರವುಗೊಳಿಸುತ್ತೇನೆ. ವ್ಯಾಪಾರ ಆರಂಭಿಸುವಂತೆ ಅಸ್ಸಾಮೀಯರನ್ನು ಕೇಳಿಕೊಳ್ಳುತ್ತೇನೆ’ ಎಂದಿದ್ದರು.

ಇದಕ್ಕೆ ಆಲ್ ಇಂಡಿಯ ಯುನೈಟೆಡ್ ಫ್ರಂಟ್ ಮುಖ್ಯಸ್ಥ ಬದ್ರುದ್ದೀನ್ ಅಜ್ಮಲ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ವಿರೋಧ ವ್ಯಕ್ತಪಡಿಸಿದ್ದಾರೆ.

ಶರದ್ ಪವಾರ್ ನಮ್ಮ ದೇವರು: ಪ್ರಫುಲ್

ಪ್ರಜಾವಾಣಿ ವಾರ್ತೆ

ಮುಂಬೈ: ‘ಶರದ್ ಪವಾರ್ ನಮಗೆ ದೇವರಿದ್ದಂತೆ. ಅವರ ಆಶೀರ್ವಾದ ಪಡೆಯಲು ಭೇಟಿ ಮಾಡಿದ್ದೆವು. ಪಕ್ಷದ ಒಗ್ಗಟ್ಟು ಕಾಪಾಡಲು ಅವರಲ್ಲಿ ಕೋರಿದ್ದೇವೆ’

–ಹೀಗೆಂದು ಹೇಳಿದ್ದು ಪಕ್ಷದ ರಾಜ್ಯಸಭಾ ಸದಸ್ಯ ಪ್ರಫುಲ್ ಪಟೇಲ್.

ಎನ್‌ಸಿಪಿ ಮುಖ್ಯಸ್ಥ ಶರದ್ ಅವರನ್ನು ದಿಢೀರ್ ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಕ್ಷದಲ್ಲಿನ ಬಿಕ್ಕಟ್ಟಿನ ಬಗ್ಗೆ ವಿಷಾದ ವ್ಯಕ್ತಪಡಿಸಿ, ಇದಕ್ಕೆ ಸೂಕ್ತ ಪರಿಹಾರ ನೀಡಲು ಕೋರಿದ್ದೇವೆ. ನಮ್ಮ ಮನವಿ ಬಗ್ಗೆ ಚಿಂತನೆ ನಡೆಸಿ ಮಾರ್ಗದರ್ಶನ ನೀಡುವಂತೆಯೂ ಹೇಳಿದ್ದೇವೆ. ನಮ್ಮ ಮಾತುಗಳನ್ನು ಆಲಿಸಿದ ಅವರು ಯಾವುದೇ ಉತ್ತರ ನೀಡಲಿಲ್ಲ’ ಎಂದು ಹೇಳಿದರು.

ಶರದ್ ಪವಾರ್ ಅವರು ಅಜಿತ್ ಬಣದ ನಾಯಕರಾಗಿದ್ದಾರೆ. ಹಾಗಾಗಿ, ಅವರ ಭೇಟಿ ಸಹಜವಾದುದು
ದೇವೇಂದ್ರ ಫಡಣವೀಸ್, ಡಿಸಿಎಂ, ಮಹಾರಾಷ್ಟ್ರ

ಈ ದಿಢೀರ್ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿರುವ ಮುಂಬೈ ಬಿಜೆಪಿ ಘಟಕದ ಅಧ್ಯಕ್ಷ ಆಶಿಶ್ ಶೇಲಾರ್, ‘ಅಜಿತ್ ಬಣವು ಇಂದಿಗೂ ಶರದ್ ಅವರೇ ನಮ್ಮ ನಾಯಕ ಎಂದು ಪರಿಗಣಿಸಿದೆ. ಹಾಗಾಗಿ, ಅವರನ್ನು ಭೇಟಿ ಮಾಡಿರುವುದರಲ್ಲಿ ಯಾವುದೇ ತಪ್ಪಿಲ್ಲ’ ಎಂದಿದ್ದಾರೆ.

ಆರೋಗ್ಯ ವಿಚಾರಣೆ: ಶುಕ್ರವಾರ ಅಜಿತ್ ಪವಾರ್ ಅವರು, ಶಸ್ತ್ರಚಿಕಿತ್ಸೆ ಬಳಿಕ ಆಸ್ಪತ್ರೆಯಿಂದ ಮನೆಗೆ ಮರಳಿರುವ ಶರದ್ ಅವರ ಪತ್ನಿ ಪ್ರತಿಭಾ ಪವಾರ್ ಅವರ ಆರೋಗ್ಯ ವಿಚಾರಿಸಿದ್ದರು. ಅಂದಹಾಗೆ 2019ರಲ್ಲಿ ಬಿಜೆಪಿಯ ದೇವೇಂದ್ರ ಫಡಣವೀಸ್ ಜೊತೆ ಕೈಜೋಡಿಸಿ ಅಲ್ಪ ದಿನದ ಸರ್ಕಾರ ರಚಿಸಿದ್ದ ಅಜಿತ್ ಅವರನ್ನು ಮರಳಿ ಪಕ್ಷಕ್ಕೆ ತರುವಲ್ಲಿ ಪ್ರತಿಭಾ ಅವರು ನಿರ್ಣಾಯಕ ಪಾತ್ರ ವಹಿಸಿದ್ದರು.

ದೇವಗಿರಿ: ಗೋಪ್ಯ ಚರ್ಚೆ

ದಿಢೀರ್ ಭೇಟಿಯು ಫಲಪ್ರದವಾಗದಿದ್ದರಿಂದ ದಿಕ್ಕೆಟ್ಟ ಬಣವು ಬಳಿಕ ಶರದ್ ಅವರ ಅಧಿಕೃತ ನಿವಾಸವಾದ ದೇವಗಿರಿಗೆ ತೆರಳಿತು. ಅಲ್ಲಿ ಪಕ್ಷದಲ್ಲಿನ ಸದ್ಯದ ಸ್ಥಿತಿಗತಿ ಬಗ್ಗೆ ಗೋಪ್ಯವಾಗಿ ಸಮಾಲೋಚನೆ ನಡೆಸಿತು. ಆದರೆ, ಇದಕ್ಕೆ ಶರದ್ ಹೇಗೆ ಪ್ರತಿಕ್ರಿಯಿಸಿದರು ಎಂಬ ಸುದ್ದಿ ಹೊರಬಿದ್ದಿಲ್ಲ.

ಸಂಕ್ಷಿಪ್ತ ಸುದ್ದಿ

ಮಣಿಪುರ: ಮಹಿಳೆ ಹತ್ಯೆ

ಗುವಾಹಟಿ: ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಮಧ್ಯವಯಸ್ಕ ಮಹಿಳೆಯೊಬ್ಬರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ. ಮತ್ತೊಂದೆಡೆ 3 ಟ್ರಕ್‌ಗಳಿಗೆ ಬೆಂಕಿ ಹಚ್ಚಲಾಗಿದೆ.

ಮೈತೇಯಿ ಸಮುದಾಯದ ಪ್ರಾಬಲ್ಯವಿರುವ ಪೂರ್ವ ಇಂಫಾಲದಲ್ಲಿ ಈ ಘಟನೆ ನಡೆದಿದ್ದು, ಮಹಿಳೆಯು ಮರಿಂಗ್ ನಾಗಾ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 9 ಮಂದಿಯನ್ನು ಪೊಲೀಸರು ಬಂಧಿಸಿದ್ದು, ಅವರಿಂದ ಶಸ್ತ್ರಾಸ್ತ್ರ ಮತ್ತು ಕಾರನ್ನು ವಶಕ್ಕೆ ಪಡೆಯಲಾಗಿದೆ.

ಕೇಂದ್ರಕ್ಕೆ 6 ವಾರ ಅವಕಾಶ ನೀಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಮತ್ತು ಅದರಲ್ಲಿನ ಅವಕಾಶಗಳ ಅನುಷ್ಠಾನಕ್ಕೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಹಾಗೂ ಪ್ರಮಾಣಪತ್ರ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಆರು ವಾರಗಳ ಅವಕಾಶ ನೀಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆಯನ್ನು ಸೆ.1ಕ್ಕೆ ಮುಂದೂಡಿತು.

ಬಾಲ್ಯವಿವಾಹಗಳ ಕುರಿತು ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಿ, ವಸ್ತುಸ್ಥಿತಿ ಕುರಿತು ವರದಿ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಕಳೆದ ಏಪ್ರಿಲ್‌ನಲ್ಲಿ ಕೇಂದ್ರಕ್ಕೆ ಸೂಚಿಸಿತ್ತು.

ಭಾರಿ ಮಳೆ: ಅಮರನಾಥ ಯಾತ್ರೆ ಸ್ಥಗಿತ

ಶ್ರೀನಗರ: ಕಾಶ್ಮೀರದಲ್ಲಿ ಭಾರಿ ಮಳೆಗೆ ಬಂಡೆ ಉರುಳಿಬಿದ್ದು, ಅಮರನಾಥ ಯಾತ್ರೆಗೆ ತೆರಳುತ್ತಿದ್ದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಳೆಯ ಕಾರಣಕ್ಕೆ ಯಾತ್ರೆ ಯನ್ನು ಸ್ಥಗಿತಗೊಳಿಸಲಾಗಿದೆ ಎಂದೂ ಹೇಳಿದ್ದಾರೆ. ಊರ್ಮಿಳಾ ಬೆನ್ (53) ಮೃತಪಟ್ಟವರು.

ಚರ್ಚ್‌ಗಳಿಗೆ ನೋಟಿಸ್: ಪೊಲೀಸರ ಸಮಜಾಯಿಷಿ

ಇಂದೋರ್ (ಪಿಟಿಐ): ಮಧ್ಯಪ್ರದೇಶದ ಇಂದೋರ್ ನಗರ ವ್ಯಾಪ್ತಿಯ 40 ಚರ್ಚ್‌ಗಳಿಗೆ ಮತಾಂತರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂಬ ಆರೋಪದ ಮೇಲೆ ಪೊಲೀಸರು ಜಾರಿಗೊಳಿಸಿದ್ದ ನೋಟಿಸ್‌ಗೆ ಕ್ರೈಸ್ತ ಸಮುದಾಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಕೊನೆಗೆ, ಇದರಿಂದ ಎಚ್ಚೆತ್ತುಕೊಂಡ ಪೊಲೀಸರು ಕಣ್ತಪ್ಪಿನಿಂದ ಈ ಪ್ರಮಾದ ಆಗಿದೆ ಎಂದು ಸಮಜಾಯಿಷಿ ನೀಡಿದ್ದು, ನೋಟಿಸ್‌ಗಳನ್ನು ವಾಪಸ್ ಪಡೆದಿದ್ದಾರೆ.

‘ನಗರ ವ್ಯಾಪ್ತಿಯ ಪೊಲೀಸ್ ಠಾಣಾಧಿಕಾರಿಗಳಿಗೆ ಈ ನೋಟಿಸ್ ಕಳುಹಿಸಲಾಗಿತ್ತು. ಇದನ್ನು ತಪ್ಪಾಗಿ ಅರ್ಥೈಸಿಕೊಂಡ ಅಧಿಕಾರಿಗಳು ಚರ್ಚ್‌ಗಳ ಪದಾಧಿಕಾರಿಗಳಿಗೆ ಜಾರಿಗೊಳಿಸಿದ್ದಾರೆ’ ಎಂದು ಇಂದೋರ್ ಪೊಲೀಸ್ ಆಯುಕ್ತ ತಿಳಿಸಿದ್ದಾರೆ.

ಪ್ರತ್ಯೇಕ ಪ್ರಕರಣ: ಬಾಲಕರು ಸೇರಿ 7 ಮಂದಿ ನಾಪತ್ತೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮುಂಬೈ ಹಾಗೂ ಚಂದ್ರಾಪುರ ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ನೀರಿನಲ್ಲಿ ಮುಳುಗಿ ಏಳು ಮಂದಿ ನಾಪತ್ತೆಯಾಗಿದ್ದಾರೆ.

ಮುಂಬೈ ಸಮೀಪದ ಮಲಾಡ್‌ನ ಬಳಿಯ ಸಮುದ್ರದಲ್ಲಿ ಐವರು ಬಾಲಕರು ಕೊಚ್ಚಿಕೊಂಡು ಹೋಗಿದ್ದು, ಇಬ್ಬರನ್ನು ರಕ್ಷಿಸಲಾಗಿದೆ. ಇನ್ನೂ ಮೂವರು ಬಾಲಕರು ನಾಪತ್ತೆಯಾಗಿದ್ದಾರೆ.

ಚಂದ್ರಾಪುರ ಜಿಲ್ಲೆಯ ವರೋರಾ ತಾಲ್ಲೂಕಿನ ಶೇಗಾವ್ ಗ್ರಾಮದ ಸಮೀಪದ ಕೆರೆಯಲ್ಲಿ ಭಾನುವಾರ ಸೆಲ್ಫಿ ತೆಗೆದುಕೊಳ್ಳುವಾಗ ಕಾಲುಜಾರಿ ಬಿದ್ದು, ನೀರಿನಲ್ಲಿ ಮುಳುಗಿ ನಾಲ್ವರು ಯುವಕರು ನಾಪತ್ತೆಯಾಗಿದ್ದಾರೆ. ಎಂಟು ಯುವಕರ ಗುಂಪು ಪ್ರವಾಸಕ್ಕೆ ತೆರಳಿದ್ದಾಗ ಈ ಘಟನೆ ನಡೆದಿದೆ.

ಟೆನಿಸ್: ಫೈನಲ್‌ನಲ್ಲಿ ಜೊಕೊವಿಚ್ ವಿರುದ್ಧ ರೋಚಕ ಗೆಲುವು

ಅಲ್ಕರಾಜ್‌ಗೆ ವಿಂಬಲ್ಡನ್ ಗರಿ

ಲಂಡನ್ (ಎಎಫ್‌ಪಿ/ ರಾಯಿಟರ್ಸ್): ಅನುಭವಿ ಆಟಗಾರ ನೊವಾಕ್ ಜೊಕೊವಿಚ್ ಅವರನ್ನು ಐದು ಸೆಟ್‌ಗಳ ಮ್ಯಾರಥಾನ್ ಹಣಾಹಣಿಯಲ್ಲಿ ಮಣಿಸಿದ ಸ್ಪೇನ್‌ನ ಯುವ ಪ್ರತಿಭೆ ಕಾರ್ಲೋಸ್ ಅಲ್ಕರಾಜ್, ವಿಂಬಲ್ಡನ್ ಟೆನಿಸ್ ಟೂರ್ನಿಯ ಕಿರೀಟ ಮುಡಿಗೇರಿಸಿಕೊಂಡರು.

ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಏಳು ಬಾರಿಯ ಚಾಂಪಿಯನ್ ಜೊಕೊವಿಚ್ ಒಡ್ಡಿದ ಸವಾಲನ್ನು ಅಲ್ಕರಾಜ್ 1-6, 7-6, 6-1, 3-6, 6-4 ರಿಂದ ಬದಿಗೊತ್ತಿದ್ದರು.

ನಾಲ್ಕು ಗಂಟೆ 42 ನಿಮಿಷ ನಡೆದ ಸೆಣಸಾಟ, ಟೆನಿಸ್ ಪ್ರೇಮಿಗಳಿಗೆ ರಸದೌತಣ ಉಣಬಡಿಸಿತು. ಇಬ್ಬರೂ ಪಟ್ಟುಬಿಡದೆ ಪೈಪೋಟಿ ನಡೆಸಿದ್ದರಿಂದ ಆರಂಭದಿಂದ ಕೊನೆಯವರೆಗೂ ಪಂದ್ಯವು ರೋಚಕತೆಯನ್ನು ಉಳಿಸಿಕೊಂಡಿತು. 20 ವರ್ಷದ ಅಲ್ಕರಾಜ್, ವಯಸ್ಸಿನಲ್ಲಿ ತನಗಿಂತ 16 ವರ್ಷ ಹಿರಿಯನಾಗಿರುವ ಜೊಕೊವಿಚ್ ಅವರನ್ನು ವೇಗದ ಸರ್ವ್, ನಿಖರ ರಿಟರ್ನ್‌ಗಳ ಮೂಲಕ ನಿಬ್ಬೆರಗಾಗಿಸಿದರು.

ಅಪಾರ ಅನುಭವ ಜೊಕೊವಿಚ್ ಅವರ 'ಬಲ' ಎನಿಸಿದ್ದರೂ, ಅಲ್ಕರಾಜ್ ತಮ್ಮಲ್ಲಿರುವ ಶಕ್ತಿ ಮತ್ತು ವೇಗವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು. ಸ್ಪೇನ್ ಆಟಗಾರನ ಕೆಲವೊಂದು ಸರ್ವ್‌ಗಳು ಗಂಟೆಗೆ 130 ಮೈಲು ವೇಗದಲ್ಲಿದ್ದರೆ, ಫೋರ್‌ಹ್ಯಾಂಡ್ ರಿಟರ್ನ್‌ಗಳ ವೇಗ ಗಂಟೆಗೆ 100 ಮೈಲು ಗಡಿ ತಲುಪಿದ್ದವು.

ಮೊದಲ ಸೆಟ್‌ನಲ್ಲಿ ಎರಡು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಜೊಕೊವಿಚ್, ಉತ್ತಮ ಆರಂಭ ಪಡೆದಿದ್ದರು. ಆದರೆ ಎರಡು ಮತ್ತು ಮೂರನೇ ಸೆಟ್ ಜಯಿಸಿದ ಅಲ್ಕರಾಜ್ ತಿರುಗೇಟು ನೀಡಿದರು. ಸುಲಭದಲ್ಲಿ ತಲೆಬಾಗಲು ಸಿದ್ಧವಿಲ್ಲದ ಜೊಕೊವಿಚ್, ನಾಲ್ಕನೇ ಸೆಟ್ ಗೆದ್ದು 2-2 ರಿಂದ ಸಮಬಲ ಸಾಧಿಸಿದರು.



ವಿಂಬಲ್ಡನ್ ಟ್ರೋಫಿಯೊಂದಿಗೆ ಕಾರ್ಲೋಸ್ ಅಲ್ಕರಾಜ್ –ಎಎಫ್‌ಪಿ ಚಿತ್ರ

ನಿರ್ಣಾಯಕ ಸೆಟ್‌ನ ಆರಂಭದಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಅಲ್ಕರಾಜ್ ಮೇಲುಗೈ ಪಡೆದರು. ಆ ಬಳಿಕ ತಮ್ಮ ಸರ್ವ್‌ಗಳನ್ನು ಕಾಪಾಡಿಕೊಂಡು ಇಲ್ಲಿ ಚೊಚ್ಚಲ ಪ್ರಶಸ್ತಿಯತ್ತ ಮುನ್ನಡೆದರು. ತಾವು ಸರ್ವ್ ಮಾಡಿದ 10ನೇ ಗೇಮ್‌ನಲ್ಲಿ, ಜೊಕೊವಿಚ್ ಅವರ ಫೋರ್‌ಹ್ಯಾಂಡ್ ರಿಟರ್ನ್‌ನಲ್ಲಿ ಚೆಂಡು ನೆಟ್‌ಗೆ ಬಡಿಯುತ್ತಿದ್ದಂತೆಯೇ, ಅಲ್ಕರಾಜ್ ಗೆಲುವಿನ ಸಂಭ್ರಮ ಆಚರಿಸಿದರು.

ಸ್ಪೇನ್‌ನ ಆಟಗಾರನಿಗೆ ದೊರೆತ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಇದು. ವಿಂಬಲ್ಡನ್ ಚಾಂಪಿಯನ್ ಆದ ಮೂರನೇ ಅತಿಕಿರಿಯ ಆಟಗಾರ ಎನಿಸಿಕೊಂಡರು. ಅವರು ಕಳೆದ ವರ್ಷ ಅಮೆರಿಕ ಓಪನ್ ಜಯಿಸಿದ್ದರು.

ವಿಂಬಲ್ಡನ್‌ನಲ್ಲಿ ಎಂಟು ಸಲ ಚಾಂಪಿಯನ್ ಆಗಿರುವ ರೋಜರ್ ಫೆಡರರ್ ಅವರ ದಾಖಲೆಯನ್ನು ಸರಿಗಟ್ಟುವ ಜೊಕೊವಿಚ್ ಕನಸು ಭಗ್ನಗೊಂಡಿತು. ಅದೇ ರೀತಿ ಋತುವಿನ ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಮ್ ಗೆಲ್ಲುವ ಅವಕಾಶವನ್ನೂ ಕಳೆದುಕೊಂಡರು. ಜೊಕೊವಿಚ್, ಈ ವರ್ಷ ಆಸ್ಟ್ರೇಲಿಯಾ ಓಪನ್ ಮತ್ತು ಫ್ರೆಂಚ್ ಓಪನ್ ಜಯಿಸಿದ್ದರು.

23 ಗ್ರ್ಯಾನ್‌ಸ್ಲಾಮ್ ಜಯಿಸಿರುವ ಜೊಕೊವಿಚ್ ಅವರು ಮಾರ್ಗರೆಟ್ ಕೋರ್ಟ್ ಅವರ 24 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ದಾಖಲೆ ಸರಿಗಟ್ಟುವ ಪ್ರಯತ್ನದಲ್ಲಿದ್ದರು. ಅದಕ್ಕೆ ಅಲ್ಕರಾಜ್ ಅಡ್ಡಿಯಾದರು.

ಮುಖ್ಯಾಂಶಗಳು

- ಫೈನಲ್‌ನಲ್ಲಿ 1–6, 7–6, 6–1, 3–6, 6–4 ರಿಂದ ಜಯ
- ಅಲ್ಕರಾಜ್‌ಗೆ ₹ 25.25 ಕೋಟಿ ಬಹುಮಾನ

10 ವರ್ಷಗಳ ಬಳಿಕ ಸೋಲು

ಜೊಕೊವಿಚ್ ಅವರಿಗೆ ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ 10 ವರ್ಷಗಳ ಬಳಿಕ ಸೋಲು ಎದುರಾಗಿದೆ. 2013ರ ಫೈನಲ್‌ನಲ್ಲಿ ಆ್ಯಂಡಿ ಮರೆ ಎದುರು ಪರಾಭವಗೊಂಡಿದ್ದ ಬಳಿಕ ಅವರು ಇಲ್ಲಿ ಸೋತೇ ಇಲ್ಲ. ಅದೇ ರೀತಿ, ವಿಂಬಲ್ಡನ್‌ನಲ್ಲಿ ಸರ್ಬಿಯದ ಆಟಗಾರನ ಸತತ 34 ಪಂದ್ಯಗಳ ಗೆಲುವಿನ ಓಟಕ್ಕೂ ತೆರೆಬಿತ್ತು.

ಬೆಂಗಳೂರು ಬೇಸಿಗೆ ಡರ್ಬಿಯ ಟ್ರೋಫಿ ವಿತರಣೆ ಸಮಾರಂಭದಲ್ಲಿ (ಎಡದಿಂದ) 'ಜಮಾರಿ' ಕುದುರೆಯ ಮಾಲೀಕರಾದ ಡಿ.ಆರ್. ಥ್ಯಾಕರ್, ಕೆ.ಎನ್.ಧುನ್‌ಜಿಭಾಯ್, ಅನಿತಾ ಜೆ.ಕ್ಯಾಪ್ಟನ್, ಬಿಟಿಸಿ ಅಧ್ಯಕ್ಷ ಶಿವಕುಮಾರ್ ಖೇಣಿ, ಬೆಟ್‌ವೇ ಪ್ರತಿನಿಧಿಗಳಾದ ರಾಘವ್ ನಾಗಪಾಲ್, ರೋಹನ್ ಗುಪ್ತಾ, ಎ.ಎಸ್.ನಾರಿಯಲ್‌ವಾಲಾ (ಮಾಲೀಕರು), ಜಾಕಿ ಸಿ.ಉಮೇಶ್, ನಾನೊಲಿ ಸ್ಟಡ್ಸ್‌ನ ಡಾ.ರವಿ ರೆಡ್ಡಿ, ಟ್ರೇನರ್ ಪಿ ಶ್ರಾಫ್ ಪಾಲ್ಗೊಂಡಿದ್ದರು (ಎಡಚಿತ್ರ). ಡರ್ಬಿ ರೇಸ್ ವೀಕ್ಷಿಸಲು ಬಿಟಿಸಿಗೆ ಬಂದಿದ್ದ ಅಭಿಮಾನಿ –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ರೇಸ್‌ಪ್ರಿಯರ ಮನಗೆದ್ದ ಡರ್ಬಿ: 'ಆಸ್ಪೀಶಿಯಸ್ ಕ್ವೀನ್'ಗೆ ಎರಡನೇ ಸ್ಥಾನ

ಜಮಾರಿಗೆ ಬೆಂಗಳೂರು ಡರ್ಬಿ ಗೌರವ

• ರವಿಕುಮಾರ್

ಡರ್ಬಿ ಫಲಿತಾಂಶ (ಮೊದಲ 4 ಸ್ಥಾನ)

ಸ್ಥಾನ	ಕುದುರೆ (ಸಂಖ್ಯೆ)	ಟ್ರೇನರ್	ಜಾಕಿ	ಸಮಯ	ಬಹುಮಾನ (₹ ಲಕ್ಷಗಳಲ್ಲಿ)
1	ಜಮಾರಿ (10)	ಪಿ.ಶ್ರಾಫ್	ಸಿ.ಉಮೇಶ್	2 ನಿ.9.58 ಸೆ.	98.01
2	ಆಸ್ಪೀಶಿಯಸ್ ಕ್ವೀನ್ (9)	ಎಸ್.ಇನಾಯತುಲ್ಲಾ	ಅಂಗದ್	2 ನಿ.10.72 ಸೆ.	32.67
3	ಡೆಸ್ಟ್ರಾಯರ್ (3)	ಪ್ಯಾಟ್ರಿಕ್ ಕ್ವಿನ್	ಇಮ್ರಾನ್ ಚಿಸ್ತಿ	2 ನಿ.10.98 ಸೆ.	16.33
4	ಸಿಂಥೆಸಿಸ್ (7)	ರಾಜೇಶ್ ನರೇಡು	ಸೂರಜ್ ನರೇಡು	2 ನಿ.11.43 ಸೆ.	8.16

ಬೆಂಗಳೂರು: ಪೆಸಿ ಶ್ರಾಫ್ ತರಬೇತಿ ನೀಡಿರುವ ಹಾಗೂ ಸಿ.ಉಮೇಶ್ ಸವಾರಿಯಲ್ಲಿದ್ದ 'ಜಮಾರಿ' ಕುದುರೆಯು ಭಾನುವಾರ ನಡೆದ 'ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ' ಗೆದ್ದುಕೊಂಡಿತು.

ಬೆಂಗಳೂರು ಟರ್ಫ್ ಕ್ಲಬ್ ಆವರಣದಲ್ಲಿ ನಡೆದ ಪ್ರತಿಷ್ಠಿತ ಡರ್ಬಿ, ರೇಸ್‌ಪ್ರಿಯರಿಗೆ ಸಾಕಷ್ಟು ರಸದೌತಣ ಉಣಬಡಿಸಿತು. ಡರ್ಬಿ ದಿನದಲ್ಲಿ ನಡೆದ ಎಲ್ಲ ಎಂಟು ರೇಸ್‌ಗಳನ್ನೂ ನೋಡಿ ಸಂಭ್ರಮಿಸಿದರು.

ಹನ್ನೊಂದು ಸ್ಪರ್ಧಿಗಳಿದ್ದ ಕಣದ ಬೆಟ್ಟಿಂಗ್‌ನಲ್ಲಿ ಸಿಂಥೆಸಿಸ್ 'ಫೇವರಿಟ್' ಆಗಿತ್ತು. ಆದರೆ ಜಮಾರಿ ನಿರಾಯಾಸ ಗೆಲುವಿನೊಂದಿಗೆ ಅಚ್ಚರಿಮೂಡಿಸಿತು.

2000 ಮೀ. ದೂರದ ಡರ್ಬಿಗೆ ಚಾಲನೆ ದೊರೆತ ಕೂಡಲೇ ಜಮಾರಿ ಮುನ್ನುಗ್ಗಿ ಲೀಡ್ ಪಡೆಯಿತು. ಕೆಲ ಮೀಟರ್ಸ್ ದಾಟಿದ ನಂತರ 'ಚಾಂಪಿಯನ್ಸ್ ವೇ' ಮುನ್ನಡೆ ಸಾಧಿಸಿತು. ಆದರೆ ಆತುರ ತೋರದೆ ಉಮೇಶ್ ಅವರು ಜಮಾರಿ, ಎರಡನೇ ಸ್ಥಾನದಲ್ಲೇ ಇರುವಂತೆ ನೋಡಿಕೊಂಡರು.

ರೇಸ್ 1,500 ಮೀ. ಕ್ರಮಿಸುವವರೆಗೂ ಚಾಂಪಿಯನ್ಸ್ ವೇ ಸ್ಪಷ್ಟ ಮುನ್ನಡೆಯಲ್ಲಿದ್ದರೆ, ಜಮಾರಿ ಎರಡನೇ ಸ್ಥಾನದಲ್ಲಿತ್ತು. ಆದರೆ ಕೊನೆಯ 500 ಮೀಟರ್ಸ್ ಇರುವಂತೆಯೇ, ಜಮಾರಿ ವೇಗವಾಗಿ ಮುನ್ನುಗ್ಗಿ ಮತ್ತೆ ಲೀಡ್ ಪಡೆಯಿತು.

ಸಿಂಥೆಸಿಸ್ ಮತ್ತು ಡೆಸ್ಟ್ರಾಯರ್ ಕುದುರೆಗಳು ಮೂರು ಹಾಗೂ ನಾಲ್ಕನೇ ಸ್ಥಾನದಲ್ಲಿದ್ದವು. ಕೊನೆಯ 400ಮೀ.ಗಳ ನೇರ ಓಟದಲ್ಲಿ ಜಮಾರಿ ತನ್ನ ವೇಗವನ್ನು ಹೆಚ್ಚಿಸಿಕೊಳ್ಳುತ್ತಾ ಮುನ್ನುಗ್ಗಿತು. ಎದುರಾಳಿಗಳನ್ನು ಏಳು ಲೆಂಗ್ತ್‌ಗಳ ಅಂತರದಲ್ಲಿ ಸೋಲಿಸಿ ಬೇಸಿಗೆ ರೇಸ್‌ಗಳ ಶ್ರೀಮಂತ ಡರ್ಬಿಯನ್ನು ತನ್ನದಾಗಿಸಿಕೊಂಡಿತು.

ಕೊನೆಯ 200 ಮೀಟರ್ಸ್ ಇದ್ದಾಗ ಹಿಂದಿನಿಂದ ರಭಸವಾಗಿ ಓಡಿ ಬಂದ, ಜಾಕಿ ಅಂಗದ್ ಅವರು ಸವಾರಿಯಲ್ಲಿದ್ದ ಆಸ್ಪೀಶಿಯಸ್ ಕ್ವೀನ್ ಎರಡನೇ ಸ್ಥಾನ ಪಡೆಯಿತು. ಇಮ್ರಾನ್ ಚಿಸ್ತಿ ಸವಾರಿಯಲ್ಲಿದ್ದ ಡೆಸ್ಟ್ರಾಯರ್ ಮತ್ತು ಸೂರಜ್ ನರೇಡು ಸವಾರಿಯಲ್ಲಿದ್ದ ಸಿಂಥೆಸಿಸ್ ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಪಡೆದುಕೊಂಡವು. ಸೂರಜ್ ಸವಾರಿ ಮಾಡಿದ್ದರಿಂದ ಸಿಂಥೆಸಿಸ್, ಡರ್ಬಿ ಗೆಲ್ಲುವ ಫೇವರಿಟ್ ಎನಿಸಿಕೊಂಡಿತ್ತು.

2,000 ಮೀ. ದೂರವನ್ನು ಜಮಾರಿ 2 ನಿಮಿಷ 9.58 ಸೆ.ಗಳಲ್ಲಿ ಕ್ರಮಿಸಿತು. ಈ ಗೆಲುವಿನೊಂದಿಗೆ ತನ್ನ ಮಾಲೀಕರಿಗೆ ₹ 3 ಲಕ್ಷ ಮೌಲ್ಯದ ಟ್ರೋಫಿ ಹಾಗೂ ₹ 98.01 ಲಕ್ಷ ನಗದು ಬಹುಮಾನ ದೊರಕಿಸಿಕೊಟ್ಟಿತು.

ಡರ್ಬಿ ವೀಕ್ಷಿಸಲು ರೇಸ್‌ಪ್ರಿಯರು ಮತ್ತು ಪಂಟರ್‌ಗಳು ಸೇರಿದಂತೆ 7,500ಕ್ಕೂ ಅಧಿಕ ಮಂದಿ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನೆರೆದಿದ್ದರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ 'ಬೆಂಗಳೂರು ಬೇಸಿಗೆ ಡರ್ಬಿ' ಗೆದ್ದ ಜಮಾರಿ ಗುರಿಮುಟ್ಟಿದ ಕ್ಷಣ (ಎಡಚಿತ್ರ) ಡರ್ಬಿ ರೇಸ್ ವೀಕ್ಷಿಸಲು ಬಂದಿದ್ದ ರೇಸ್‌ಪ್ರಿಯರ ಸಂಭ್ರಮ –ಪ್ರಜಾವಾಣಿ ಚಿತ್ರ

ಭಾರತದ ವನಿತೆಯರಿಗೆ ಬಾಂಗ್ಲಾ ಆಘಾತ

ಮೀರಪುರ್(ಪಿಟಿಐ): ಕಳಪೆ ಬ್ಯಾಟಿಂಗ್‌ನಿಂದಾಗಿ ಭಾರತ ಮಹಿಳಾ ತಂಡವು ಬಾಂಗ್ಲಾದೇಶ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿಯೇ ಸೋತಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 40 ರನ್‌ಗಳಿಂದ ಪರಾಭವಗೊಂಡಿತು. ಮೂರು ಪಂದ್ಯಗಳ ಸರಣಿಯಲ್ಲಿ ಆತಿಥೇಯ ತಂಡವು 1–0 ಮುನ್ನಡೆ ಗಳಿಸಿತು.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬಾಂಗ್ಲಾ ತಂಡವು 43 ಓವರ್‌ಗಳಲ್ಲಿ 152 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಪದಾರ್ಪಣೆ ಪಂದ್ಯವಾಡಿದ ಮಧ್ಯಮವೇಗಿ ಅಮನ್‌ಜ್ಯೋತ್ ಕೌರ್ (31ಕ್ಕೆ4) ಬಾಂಗ್ಲಾದ ಬ್ಯಾಟಿಂಗ್ ಪಡೆಗೆ ತಡೆಯೊಡ್ಡಿದರು.

ಆದರೆ ಭಾರತ ತಂಡವು ಈ ಸಾಧಾರಣ ಮೊತ್ತದ ಗುರಿಯನ್ನು ಮುಟ್ಟುವಲ್ಲಿ ಎಡವಿತು. 35.5 ಓವರ್‌ಗಳಲ್ಲಿ 113 ರನ್ ಗಳಿಸಲಷ್ಟೇ ತಂಡಕ್ಕೆ ಸಾಧ್ಯವಾಯಿತು.

ಮಳೆ ಬಂದ ಕಾರಣ ಕೆಲಕಾಲ ಆಟ ಸ್ಥಗಿತವಾಗಿತ್ತು. ಅದರಿಂದಾಗಿ ಡಕ್ವರ್ಥ್ ಲೂಯಿಸ್ ನಿಯಮದ ಪ್ರಕಾರ ಗುರಿಯನ್ನು ಪರಿಷ್ಕರಿಸಲಾಯಿತು. 44 ಓವರ್‌ಗಳಲ್ಲಿ 154 ರನ್ ಗುರಿಯನ್ನು ನಿಗದಿಗೊಳಿಸಲಾಯಿತು.

ಭಾರತದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯ ಹಾಗೂ ಪ್ರತಿಭೆಗೆ ತಕ್ಕಂತೆ ಆಡಲಿಲ್ಲ. ದೀಪ್ತಿ ಶರ್ಮಾ 40 ಎಸೆತಗಳಲ್ಲಿ 20 ರನ್ ಗಳಿಸಿದ್ದೇ ತಂಡದಲ್ಲಿ ವೈಯಕ್ತಿಕ ಗರಿಷ್ಠ ಸ್ಕೋರ್ ಆಯಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 43 ಓವರ್‌ಗಳಲ್ಲಿ 152 (ಫರ್ಜಾನಾ ಹಕ್ 27, ನಿಜಾರ್ ಸುಲ್ತಾನಾ 39, ಅಮನ್‌ಜ್ಯೋತ್ ಕೌರ್ 31ಕ್ಕೆ4, ದೇವಿಕಾ ವೈದ್ಯ 36ಕ್ಕೆ2) ಭಾರತ: 35.5 ಓವರ್‌ಗಳಲ್ಲಿ 113 (ಯಷ್ಟಿಕಾ ಭಾಟಿಯಾ 15, ದೀಪ್ತಿ ಶರ್ಮಾ 20, ಅಮನ್‌ಜ್ಯೋತ್ ಕೌರ್ 15, ಮರೂಫಾ ಅಕ್ತರ್ 29ಕ್ಕೆ4, ರಬಿಯಾ ಖಾನ್ 30ಕ್ಕೆ3) ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ 40 ರನ್ ಜಯ(ಡಕ್ವರ್ಥ್ ಲೂಯಿಸ್ ನಿಯಮದನ್ವಯ) ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ.

ಆರ್‌ಸಿಬಿಯಿಂದ ಹೆಸನ್, ಸಂಜಯ್‌ಗೆ ಕೊಕ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಿರ್ದೇಶಕ ಮೈಕ್ ಹೆಸನ್ ಮತ್ತು ಮುಖ್ಯ ಕೋಚ್ ಸಂಜಯ್ ಬಾಂಗರ್ ಅವರ ಗುತ್ತಿಗೆ ಅವಧಿಯು ಸೆಪ್ಟೆಂಬರ್‌ನಲ್ಲಿ ಮುಗಿಯಲಿದೆ.

ಅದರಿಂದಾಗಿ ಅವರ ಅವಧಿಯಲ್ಲಿ ಆಗಿರುವ ಸಾಧನೆಗಳ ಮರುಅವಲೋಕನ ನಡೆಸಲಿದ್ದು, ನಂತರವಷ್ಟೇ ಅವರ ಕಾರ್ಯಾವಧಿ ವಿಸ್ತರಿಸುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ತಂಡದ ಮೂಲಗಳು ತಿಳಿಸಿವೆ.

ಸಂಜಯ್

ಮೈಕ್ ಹೆಸನ್

ಆದರೆ ಅವರಿಬ್ಬರ ಗುತ್ತಿಗೆಯನ್ನು ನವೀಕರಣಗೊಳಿಸುವ ಸಾಧ್ಯತೆಗಳು ಕಡಿಮೆ ಇವೆ ಎನ್ನಲಾಗಿದೆ. ಅದರಿಂದಾಗಿ ಅವರು ತಂಡದ ಹೊರಬೀಳಬಹುದು ಎಂದೂ ಕೆಲವು ಮೂಲಗಳು ಹೇಳಿವೆ.

ಹೆಸನ್ ಅವರು 2019ರಲ್ಲಿ ಆರ್‌ಸಿಬಿ ಸೇರ್ಪಡೆಯಾದರು. ಮೊದಲು ಮುಖ್ಯ ಕೋಚ್ ಆಗಿ, ನಂತರ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.

2022ರಲ್ಲಿ ಸೈಮನ್ ಕ್ಯಾಟಿಚ್ ಅವರು ತಮ್ಮ ವೈಯಕ್ತಿಕ ಕಾರಣಗಳಿಗಾಗಿ ಫ್ರ್ಯಾಂಚೈಸಿ ತೊರೆದರು. ಅದರಿಂದಾಗಿ ಸಂಜಯ್ ಬಾಂಗರ್ ಅವರಿಗೆ ಮುಖ್ಯ ಕೋಚ್ ಆಗಿ ಬಡ್ತಿ ನೀಡಲಾಯಿತು.

2008ರಿಂದಲೂ ಐಪಿಎಲ್‌ನಲ್ಲಿ ಆಡುತ್ತಿರುವ ಆರ್‌ಸಿಬಿ ಇದುವರೆಗೂ ಒಂದು ಬಾರಿಯೂ ಪ್ರಶಸ್ತಿ ಜಯಿಸಿಲ್ಲ.

ಸಂಕ್ಷಿಪ್ತ ಸುದ್ದಿ

ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಬ್ಲೆ ಅರ್ಹತೆ

ಸಿಲೆಸಿಯಾ, ಪೋಲೆಂಡ್ (ಪಿಟಿಐ): ಭಾರತದ ಅಥ್ಲೀಟ್ ಅವಿನಾಶ್ ಸಬ್ಲೆ ಅವರು 3000 ಮೀ. ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡರು.

ಭಾನುವಾರ ನಡೆದ ಸಿಲೆಸಿಯಾ ಡೈಮಂಡ್ ಲೀಗ್‌ನಲ್ಲಿ ಅವರು ಆರನೇ ಸ್ಥಾನ ಪಡೆದರು. ಸಬ್ಲೆ 8 ನಿ. 11.63 ಸೆ.ಗಳಲ್ಲಿ ಗುರಿ ತಲುಪಿದರು. ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆಗೆ ನಿಗದಿಪಡಿಸಿದ್ದ ಸಮಯವನ್ನು (8 ನಿ. 15 ಸೆ.) ಸಾಧಿಸಲು ಅವರು ಯಶಸ್ವಿಯಾದರು.

ಈ ಮೂಲಕ ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ 20 ಕಿ.ಮೀ. ನಡಿಗೆ ಸ್ಪರ್ಧಿಗಳಾದ ಆಕಾಶ್‌ದೀಪ್ ಸಿಂಗ್, ವಿಕಾಸ್ ಸಿಂಗ್, ಪರಂಜೀತ್ ಸಿಂಗ್, ಪ್ರಿಯಾಂಕಾ ಗೋಸ್ವಾಮಿ ಮತ್ತು ಲಾಂಗ್ ಜಂಪರ್ ಮುರಳಿ ಶ್ರೀಶಂಕರ್ ಅವರ ಪಟ್ಟಿಯನ್ನು ಸೇರಿಕೊಂಡರು.

ಕೋರಮಂಗಲ ಎಸ್‌ಸಿಗೆ ಗೆಲುವು

ಬೆಂಗಳೂರು: ಅಮೃತ್ (20), ಅಚ್ಯುತ್ (15) ಅವರ ಆಟದ ನೆರವಿನಿಂದ ಕೋರಮಂಗಲ ಸ್ಪೋರ್ಟ್ಸ್ ಕ್ಲಬ್ ತಂಡವು ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 13 ವರ್ಷದೊಳಗಿನವರ ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಯಂಗ್ ಬುಲ್ಸ್ ತಂಡವನ್ನು 61–10ರಿಂದ ಮಣಿಸಿತು.

ಬಾಲಕರ ವಿಭಾಗದ ಇತರ ಪಂದ್ಯಗಳಲ್ಲಿ ಪಿಪಿಸಿ ತಂಡವು ಗುಲ್ಬರ್ಗ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು 41–3ರಿಂದ ಮಣಿಸಿದರೆ, ಯಂಗ್ ಓರಿಯನ್ಸ್ ಎಸ್.ಸಿ ತಂಡವು ಬಿಟಿ ಮೇರಿಯನ್ಸ್ ಎಸ್.ಸಿ ಚಿಕ್ಕಮಗಳೂರು ತಂಡವನ್ನು 49–16ರಿಂದ ಸೋಲಿಸಿತು. ಎಂಸಿಎಚ್‌ಎಸ್ ತಂಡವು ಹೆಬ್ಬಾಳ ಬಿ.ಸಿ ತಂಡವನ್ನು 62–7ರಿಂದ, ರಾಜ್‌ಕುಮಾರ್ ಬಿ.ಸಿ ತಂಡವು ಹೊಯ್ಸಳ ಬಿ.ಸಿ ಹಾಸನ ತಂಡವನ್ನು 66–42ರಿಂದ ಪರಾಭವಗೊಳಿಸಿತು. ಎಸ್. ಬ್ಲೂಸ್ ತಂಡವು ಮಂಗಳೂರು ಬಿ.ಸಿ ತಂಡವನ್ನು 61–28ರಿಂದ, ರೋವರ್ಸ್ ಬಿ.ಸಿ ಧಾರವಾಡ ತಂಡವು ನ್ಯಾಷನಲ್ಸ್ ಬಿ.ಸಿ ಮೈಸೂರು ತಂಡವನ್ನು 42–29ರಿಂದ ಮಣಿಸಿತು.

ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ಸ್ಪೋರ್ಟಿಂಗ್ ತಂಡವು ಮೈಸೂರು ಬಿ.ಸಿ ತಂಡವನ್ನು 53–4ರಿಂದ, ಎಂಸಿಎಚ್‌ಎಸ್ ತಂಡವು ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವನ್ನು 26–15ರಿಂದ ಸೋಲಿಸಿತು. ಆಲ್ ಸ್ಟಾರ್ ಅಕಾಡೆಮಿ ಬಿ.ಸಿ ಮೈಸೂರು ತಂಡವು ಭಾರತ್ ಎಸ್.ಯು ತಂಡವನ್ನು 55–12ರಿಂದ, ಇನ್‌ಸ್ಪೈರ್ ಬಿ.ಸಿ ಧಾರವಾಡ ತಂಡವು ರಾಜ್‌ಮಹಲ್ ಬಿ.ಸಿ ತಂಡವನ್ನು 17–10ರಿಂದ ಹಾಗೂ ವ್ಯಾನ್ಗಾರ್ಡ್ಸ್ ತಂಡವು ಕೋರಮಂಗಲ ಎಸ್.ಸಿ ತಂಡವನ್ನು 25–21ರಿಂದ ಮಣಿಸಿತು.

ಚಿನ್ನ ಗೆದ್ದು ರಾಷ್ಟ್ರಗೀತೆ ಆಲಿಸುವೆ: ಋತುರಾಜ್

ರೂಸೊ, ಡಾಮಿನಿಕಾ (ಪಿಟಿಐ): 'ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದು, ರಾಷ್ಟ್ರಗೀತೆ ಮೊಳಗುವುದನ್ನು ಆಲಿಸುವ ಗುರಿ ಇದೆ' ಎಂದು ಕ್ರಿಕೆಟಿಗ ಋತುರಾಜ್ ಗಾಯಕವಾಡ್ ಹೇಳಿದ್ದಾರೆ.

ಚೀನಾದಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ನಡೆಯಲಿರುವ ಕ್ರಿಕೆಟ್ ನಲ್ಲಿ ಆಡಲಿರುವ ಭಾರತ ತಂಡವನ್ನು ಋತುರಾಜ್ ಮುನ್ನಡೆಸುವರು.

'ಬಾಲ್ಯದಿಂದಲೂ ಟಿ.ವಿಯಲ್ಲಿ ಪ್ರಸಾರವಾಗುತ್ತಿದ್ದ ಏಷ್ಯನ್ ಗೇಮ್ಸ್ ನೋಡುತ್ತ ಬೆಳೆದಿದ್ದೇವೆ. ಅಥ್ಲೀಟ್‌ಗಳು ದೇಶಕ್ಕಾಗಿ ಪದಕ ಗೆದ್ದು ಬೀಗುವುದನ್ನು ಕಣ್ತುಂಬಿಕೊಂಡಿದ್ದೇವೆ. ಇದೀಗ ನಾವು ದೇಶಕ್ಕೆ ಪದಕ ಗೆದ್ದುಕೊಡುವ ಅವಕಾಶ ಒದಗಿಬಂದಿದೆ' ಎಂದು ಹೇಳಿದರು.